# ಸಂಸ್ಕೃತಭಾಷಾಭ್ಯಾಸ

[ಎರಡನೆಯ ಭಾಗ]

(संस्कृतभाषाभ्यासः-२)

ಲೇಖಕರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ

1997

ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಸಂಸ್ಕೃತಭಾಷಾಭ್ಯಾಸ

ಎರಡನೆಯ ಭಾಗ

(संस्कृतभाषाभ्यासः)

ಲೇಖಕರು :
ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಕ್ರಮಾಂಕ ೧೦೧

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ
1997

ಒಂದನೆಯ ಮುದ್ರಣ : 1959
ತಿದ್ದಿ ಬೆಳೆಯಿಸಿದ ಎರಡನೆಯ ಸಂಸ್ಕರಣ : 1969
ಮೂರನೆಯ ಮುದ್ರಣ : 1992
ನಾಲ್ಕನೆಯ ಮುದ್ರಣ : 1997

1000 ಪ್ರತಿಗಳು

ಹಕ್ಕುಗಳು
ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶ ಕಾರ್ಯಾಲಯದವು

ಗಣಕಯಂತ್ರ ವಿನ್ಯಾಸ : ಎಲ್. ಎಂ. ಗ್ರಾಫಿಕ್ಸ್
ಮಲ್ಲೇಶ್ವರಂ ರೈಲ್ವೇ ನಿಲ್ದಾಣದ ಎದುರು,
ಬೆಂಗಳೂರು - 21
ದೂ. : 332 11 82

ಮುದ್ರಣ :
ಲೇಸರ್ ಗ್ರಾಫಿಕ್ಸ್
ತ್ಯಾಗರಾಜನಗರ, ಬೆಂಗಳೂರು - 28
ದೂ. : 667 53 69

# ಮುನ್ನುಡಿ

ಅಧ್ಯಾತ್ಮವಿದ್ಯೆಯನ್ನು ಬೋಧಿಸುವ ಶ್ರುತಿ-ಸ್ಮೃತಿ-ಪುರಾಣಗಳು, ಕಾವ್ಯಗಳು, ಧರ್ಮಶಾಸ್ತ್ರಗಳೇ ಮುಂತಾದ ಗ್ರಂಥಗಳೆಲ್ಲವೂ ಸಂಸ್ಕೃತಭಾಷೆಯಲ್ಲಿರುವದರಿಂದ ಅಧ್ಯಾತ್ಮವಿದ್ಯೆಯನ್ನು ಕಲಿಯುವವರಿಗೆ ಈ ಭಾಷೆಯ ಜ್ಞಾನವು ಅವಶ್ಯವಾಗಿದೆ. ತಕ್ಕಮಟ್ಟಿಗೆ ಈ ಭಾಷಾಜ್ಞಾನವು ಸ್ವಾಧೀನವಾದಲ್ಲಿ ಅಧ್ಯಾತ್ಮಶಾಸ್ತ್ರವು ಹೆಚ್ಚು ರುಚಿಕರವಾಗಿಯೂ ಕರಾರುವಾಕ್ಕಾಗಿಯೂ ಕೈವಶವಾಗಲಿದೆ. ಆದ್ದರಿಂದಲೇ **ಬ್ರಹ್ಮೀಭೂತ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು** ಹೊಸದಾಗಿ ಸಂಸ್ಕೃತಭಾಷೆಯನ್ನು ಕಲಿಯುವವರ ಅನುಕೂಲಕ್ಕಾಗಿ **'ಸಂಸ್ಕೃತಭಾಷಾಭ್ಯಾಸ'** ಎಂಬ ಹೆಸರಿನ ಮೂರು ಭಾಗಗಳುಳ್ಳ ಪುಸ್ತಕಗಳನ್ನು ಹೊರತಂದು ಉಪಕರಿಸಿದ್ದಾರೆ. ಈ ಪುಸ್ತಕಗಳು ಯಾವದಾದರೊಂದು ಭಾಷೆಯು ವ್ಯಾಕರಣ ಸಹಿತವಾಗಿ ಓದುಗನಿಗೆ ಚೆನ್ನಾಗಿ ತಿಳಿದಿದ್ದಲ್ಲಿ ಸಂಸ್ಕೃತವನ್ನು ಸ್ವಂತವಾಗಿ ಅಭ್ಯಾಸ ಮಾಡಲು ಸಾಧ್ಯವಾಗುವಂತೆ ಗ್ರಂಥಕರ್ತರು ರಚಿಸಿರುತ್ತಾರೆ. ವಾಚಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಕೋರಿದೆ.

ಈ ಗ್ರಂಥದ ಮೂರು ಭಾಗಗಳೂ ಈಗಾಗಲೇ ಪ್ರಕಟವಾಗಿ ಪುನರ್ಮುದ್ರಣಗಳನ್ನೂ ಕಂಡಿವೆ. ಹೀಗೆ ಜನಪ್ರಿಯವಾಗಿರುವದರಿಂದ ಇದರ **ಎರಡನೆಯ ಭಾಗವನ್ನು** ಈಗ ಪುನರ್ಮುದ್ರಿಸಿ ವಾಚಕರಿಗೆ ಅರ್ಪಿಸಿದೆ. ಇದರಲ್ಲಿ ಒಂದನೆಯ ಭಾಗದ ಪಾಠಗಳು ಕೈವಶವಾಗಿರುವವರಿಗೆ ಮುಂದುವರೆದ ಪಾಠಗಳನ್ನು ಕೊಡಲಾಗಿದೆ. ಇಕಾರಾಂತ, ಉಕಾರಾಂತ, ಋ, ಓ, ಔ, ಕಾರಾಂತ ನಾಮಗಳು, ಕೆಲವು ಸ್ವರ ಹಾಗೂ ವ್ಯಂಜನ ಸಂಧಿಗಳು, ಕೆಲವು ವ್ಯಂಜನಾಂತ ಶಬ್ದಗಳು, ಕ್ರಿಯಾಪದಗಳ ಕರ್ಮಣಿ-ಭಾವೇ ಪ್ರಯೋಗಗಳ ರೂಪಗಳು, ಕೃದಂತಗಳು, ಕೃದಂತಾವ್ಯಯಗಳು - ಇವುಗಳ ರೂಪಗಳನ್ನು ತಿಳಿಯಿಸಿಕೊಡಲಾಗಿದೆ. ಸಂಭಾಷಣೆಯಲ್ಲಿ ಬಳಸಿಕೊಳ್ಳಬೇಕಾಗಿರುವ ಶಬ್ದಗಳನ್ನು ಹೇರಳವಾಗಿ ಸಂಗ್ರಹಿಸಿಕೊಟ್ಟಿದೆ.

ವಾಚಕರು ಈ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಸಂಸ್ಕೃತಭಾಷೆಯ ಅಭ್ಯಾಸಕ್ಕೆ ಉಪಯೋಗಿಸಿಕೊಳ್ಳುವ ಮೂಲಕ ಪ್ರೋತ್ಸಾಹಿಸಬೇಕಾಗಿ ಕೋರಿದೆ.

ಹೊಳೆನರಸೀಪುರ,
ತಾ. 1-8-1997.

ಇತಿ
ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ
ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

# ಓದುಗರಿಗೆ

ಈ ಎರಡನೆಯ ಭಾಗವನ್ನು, ಒಂದನೆಯ ಭಾಗವನ್ನು ಓದಿದ ಬಳಿಕ ಅಭ್ಯಾಸಕ್ಕೆ ಇಟ್ಟುಕೊಂಡರೆ ಪಾಠಗಳು ಬಹಳ ಸುಲಭವಾಗಿ ತಿಳಿಯಬರುವವು.

ಈ ಭಾಗವನ್ನು ಹಿಂದಿನ ಭಾಗದಂತೆಯೇ ಅಭ್ಯಾಸಮಾಡಬೇಕು. ಇದರಲ್ಲಿ ಕೊಟ್ಟಿರುವ ವಾಕ್ಯಗಳಿಗೆ ಬಲುಮಟ್ಟಿಗೆ ಅಲ್ಲಲ್ಲಿಯೇ ಅರ್ಥವನ್ನು ಕೊಟ್ಟಿರುತ್ತದೆ. (೧) ಮೊದಲು ಅರ್ಥವನ್ನು ಊಹಿಸಿರಿ. ಆಮೇಲೆ ಕೆಳಗೆ ಬರೆದಿರುವ ಅರ್ಥವನ್ನು ನೋಡಿರಿ. (೨) ಮತ್ತೊಂದು ಸಲ ದೇವನಾಗರಿಯಲ್ಲಿರುವ ವಾಕ್ಯಗಳನ್ನು ಬರೆಯಿರಿ ; ಪುಸ್ತಕವನ್ನು ನೋಡಿಕೊಂಡು ಅಕ್ಷರವಿನ್ಯಾಸದಲ್ಲಿರುವ ತಪ್ಪನ್ನು ತಿದ್ದಿಕೊಳ್ಳಿರಿ. (೩) ಆ ಬಳಿಕ ಪುಸ್ತಕವನ್ನು ಮುಚ್ಚಿಟ್ಟು ಕನ್ನಡದಲ್ಲಿ ಅರ್ಥವನ್ನು ಬರೆಯಿರಿ ; ಮತ್ತೆ ಪುಸ್ತಕವನ್ನು ತೆರೆದು ನಿಮ್ಮ ಅನುವಾದದಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳಿರಿ. (೪) ಹೀಗೆಯೇ ಕನ್ನಡವಾಕ್ಯಗಳನ್ನೂ ಪುಸ್ತಕದಿಂದ ಬರೆದುಕೊಂಡು ಸಂಸ್ಕೃತಕ್ಕೆ ತಿರುಗಿಸಿ ಆಮೇಲೆ ಪುಸ್ತಕವನ್ನು ನೋಡಿಕೊಂಡು ತಿದ್ದಿಕೊಳ್ಳಿರಿ. ಇದರಿಂದ ಸಂಸ್ಕೃತವಾಕ್ಯಗಳು ನೆನಪಿನಲ್ಲಿ ಉಳಿಯುವವು.

ಈ ಎರಡನೆಯ ಸಂಸ್ಕರಣದಲ್ಲಿ ಹಿಂದಿನ ಮುದ್ರಣಕ್ಕಿಂತ ಪಾಠಗಳನ್ನೂ ಅಭ್ಯಾಸಗಳನ್ನೂ ಅಲ್ಲಲ್ಲಿ ಮಾರ್ಪಡಿಸಿದೆ. ಅಭ್ಯಾಸಗಳಲ್ಲಿರುವ ಕ್ಲಿಷ್ಟವಾದ ಶಬ್ದಗಳಿಗೆ ಅಲ್ಲಲ್ಲಿಯೇ ಅರ್ಥವನ್ನು ಕೊಟ್ಟಿದೆ.

ಈ ಪುಸ್ತಕದಲ್ಲಿ ಕೆಲವು ಧಾತುಗಳಿಗೆ ವರ್ತಮಾನ, ಅನದ್ಯತನಭೂತ, ಆಜ್ಞಾದ್ಯರ್ಥ, ವಿಧ್ಯಾದ್ಯರ್ಥ ಇಷ್ಟು ಕ್ರಿಯಾರೂಪಗಳನ್ನು ತೋರಿಸಿರುತ್ತದೆ. ಈ ಪುಸ್ತಕದಿಂದ ನಿಮಗೆ ಪ್ರಯೋಜನವಿದೆಯೆಂದು ಕಂಡರೆ ಮೂರನೆಯ ಭಾಗವನ್ನು ಇದಾದಬಳಿಕ ಪ್ರಾರಂಭಿಸಿರಿ. ಅದರಲ್ಲಿ ಸಣ್ಣ ಕಥೆಗಳು, ಪದ್ಯಗಳು, ಸಂಭಾಷಣೆಯ ವಾಕ್ಯಗಳು ಇವುಗಳನ್ನೊಳಗೊಂಡ ಪಾಠಗಳಿರುತ್ತವೆ.

ಗ್ರಂಥಕರ್ತ.

# ವಿಷಯಾನುಕ್ರಮಣಿಕೆ

(ಕಂಸದಲ್ಲಿರುವವು ಖಂಡಸಂಖ್ಯೆಗಳು)


| | | |
|---|---|---|
| ೧. | ವಿಸರ್ಗಸಂಧಿಯ ಉದಾಹರಣೆಗಳು (೧-೨) | ೧-೫ |
| ೨. | ಇಕಾರಾಂತ ಮತ್ತು ಉಕಾರಾಂತ ನಾಮಗಳು (೩-೧೩) | ೫-೧೭ |
| ೩. | ಧಾತುಗಳೂ ಕ್ರಿಯಾಪದಗಳೂ (೧೪-೨೩) | ೧೭-೨೪ |
| ೪. | ಧಾತುಗಳೂ ಕ್ರಿಯಾಪದಗಳೂ (೨೪-೨೭) | ೨೪-೨೮ |
| ೫. | ಕೆಲವು ಸ್ವರಸಂಧಿಗಳು (೨೮-೪೪) | ೨೮-೩೫ |
| ೬. | ಎಂಥ ಎಂಬುದನ್ನು ಹೇಳುವ ವಿಶೇಷಣಗಳು (೩೫-೩೮) | ೩೫-೪೦ |
| ೭. | ಧಾತುಗಳೂ ಕ್ರಿಯಾಪದಗಳೂ (೩೯-೪೪) | ೪೦-೪೫ |
| ೮. | ಋ, ಓ, ಔಕಾರಾಂತ ನಾಮಗಳು (೪೫-೪೯) | ೪೫-೫೧ |
| ೯. | ಕೆಲವು ವ್ಯಂಜನಾಂತಶಬ್ದಗಳು (೫೦-೫೯) | ೫೧-೬೦ |
| ೧೦. | ಕೆಲವು ಮುಖ್ಯಕ್ರಿಯಾಪದಗಳು (೬೦) | ೬೦-೬೩ |
| ೧೧. | ಕ್ರಿಯಾಪದಗಳ ಕಾಲಗಳು (೬೧-೬೬) | ೬೩-೬೯ |
| ೧೨. | ಪದದ ಕೊನೆಯ ನಕಾರಮಕಾರಗಳು (೬೭-೬೯) | ೬೯-೭೨ |
| ೧೩. | ನಕಾರಾಂತಶಬ್ದಗಳು (೭೦-೭೪) | ೭೨-೭೮ |
| ೧೪. | ಕರ್ಮಣಿ ಮತ್ತು ಭಾವೇಪ್ರಯೋಗಗಳು (೭೫-೮೨) | ೭೮-೮೩ |
| ೧೫. | ಭೂತಕೃದಂತಗಳು (೮೩-೮೩) | ೮೪-೯೦ |
| ೧೬. | ಕೆಲವು ಸರ್ವನಾಮಗಳು (೮೬-೧೦೦) | ೯೦-೧೦೪ |
| ೧೭. | ಕೆಲವು ವ್ಯಂಜನಸಂಧಿಗಳು (೧೦೧-೧೦೩) | ೧೦೫-೧೦೭ |
| ೧೮. | ಕ್ರಿಯಾಪದದ ಅರ್ಥವಿಶೇಷದ ರೂಪಗಳು (೧೦೪-೧೧೨) | ೧೦೭-೧೧೪ |
| ೧೯. | ಕೆಲವು ಸರ್ವನಾಮಗಳು (೧೧೨-೧೨೦) | ೧೧೪-೧೨೩ |
| ೨೦. | ಕೃದಂತಗಳೂ ಕೃದಂತಾವ್ಯಯಗಳೂ (೧೨೧-೧೨೪) | ೧೨೩-೧೨೬ |
| ೨೧. | ಕೆಲವು ವ್ಯಂಜನಾಂತಶಬ್ದಗಳು (೧೨೫-೧೩೩) | ೧೨೬-೧೩೪ |
| ೨೨. | ಎಷ್ಟು ? - ಎಂಬರ್ಥದ ಶಬ್ದಗಳು (೧೩೪-೧೩೮) | ೧೩೫-೧೩೮ |
| ೨೩. | ಅವ್ಯಯಗಳು (೧೩೯) | ೧೩೮-೧೪೭ |

॥ ॐ ॥

# ೨. ಸಂಸ್ಕೃತಭಾಷಾಭ್ಯಾಸ

## ೧. ವಿಸರ್ಗಸಂಧಿಯ ಉದಾಹರಣೆಗಳು

೧. ಈ ಕೆಳಗಿನ ವಾಕ್ಯಗಳನ್ನೂ ಅವುಗಳ ಸಂಸ್ಕೃತಾನುವಾದವನ್ನೂ ನೋಡಿ :

### ಅಭ್ಯಾಸ ೧

೧. ನಾರಾಯಣನು ದೇವತೆಗಳ ದೇವನು. ೨. ನಾವು ನಾರಾಯಣನನ್ನು ನಮಸ್ಕರಿಸುತ್ತೇವೆ, ಭಜಿಸುತ್ತೇವೆ. ೩. ಮನೆಯಲ್ಲಿ ಯಾವನು ಇದ್ದಾನೆ ? (= ಯಾರು ಇದ್ದಾರೆ ?)[1] ೪. ಅಲ್ಲಿ ದಶರಥನು ಇದ್ದಾನೆ, ರಾಮನೂ ಇದ್ದಾನೆ. ೫. ಮೂರ್ಖನು ಗರ್ವವನ್ನು ಮಾಡುತ್ತಾನೆ. ೬. ಬೆಕ್ಕು ತುಪ್ಪವನ್ನು ಕುಡಿಯುತ್ತದೆ. ೭. ದಶರಥನ ಮಗನು ಯಾವನು (= ಯಾರು) ? ೮. ದುರ್ಯೋಧನನು ಧೃತರಾಷ್ಟ್ರನ ಮಗನು.

**१. नारायणो देवानां देवः । २. वयं नारायणं नमामो, भजामः । ३. गृहे कोऽस्ति ?[2] ४. तत्र दशरथोऽस्ति, अस्ति रामोऽपि[2] । ५. मूर्खो गर्वं करोति । ६. मार्जारो घृतं पिबति । ७. को दशरथस्य पुत्रः ? ८. दुर्योधनो धृतराष्ट्रस्य पुत्रः ॥**

---

1. ಕಂಸದೊಳಗೆ = ಈ ಗುರುತು ಹಾಕಿ ಬರೆದಿರುವದು ಕನ್ನಡದ ಮರ್ಯಾದೆಗೆ ಒಪ್ಪುತ್ತದೆ ಎಂಬುದನ್ನು ಸೂಚಿಸುತ್ತದೆ.

2. ವಾಕ್ಯದಲ್ಲಿ ಎಲ್ಲಾ ಕಡೆಯಲ್ಲಿಯೂ ಸಂಧಿಯನ್ನು ಮಾಡಲೇಬೇಕೆಂಬ ನಿರ್ಬಂಧವಿಲ್ಲ ; ಆದರೂ ಕೆಲವು ಕಡೆಗಳಲ್ಲಿ ಸಂಧಿಮಾಡುವದೇ ಹೆಚ್ಚು ಒಪ್ಪುತ್ತದೆ. **'ಗೃಹೇ ಕೋಽಸ್ತಿ'**, **'ರಾಮೋಽಪಿ'** ಇವನ್ನು **'ಗೃಹೇ ಕಃ ಅಸ್ತಿ'**, **'ರಾಮಃ ಅಪಿ'** ಎಂದು ಬರೆಯಬಾರದು. ಸಂಸ್ಕೃತದ ವಾಕ್ಯಗಳು ಕನ್ನಡದ ಕ್ರಮದಲ್ಲಿಯೇ ಇರಬೇಕೆಂಬ ನಿಯಮವಿಲ್ಲ. ಉದಾ : **'ಅಸ್ತಿ ರಾಮೋಽಪಿ, ರಾಮೋಽಪಿ ಅಸ್ತಿ'** ಎಂದೂ ಬರೆಯಬಹುದು.

ಇಲ್ಲಿ ಪದಾಂತ್ಯವಿಸರ್ಗಕ್ಕೆ ತನ್ನ ಹಿಂದೆ ಇರುವ ಅಕಾರವೂ ಸೇರಿ ಓಕಾರವಾಗಿದೆ ; ಅದರ ಮುಂದಿನ ಪದದ ಆದಿಯಲ್ಲಿರುವ ಅಕಾರಕ್ಕೆ ಲೋಪವಾಗಿದೆ ಎಂಬುದಾಗಿ ಅವಗ್ರಹಚಿಹ್ನೆ(ऽ)ಯಿಂದ ತೋರಿಸಿದೆ. (ಪಾ. ೧೬)[1]

## ಅಭ್ಯಾಸ ೨

**ಈ ವಾಕ್ಯಗಳಿಗೆ ಸಂಸ್ಕೃತವನ್ನು ಬರೆಯಿರಿ. ವಿಸರ್ಗಕ್ಕೆ ಅವಶ್ಯವಿದ್ದಾಗ ಓಕಾರವು ಬರಲಿ ; ಉತ್ತರವು ತಿಳಿಯದೆ ಇದ್ದಾಗ ಕೆಳಗೆ ಬರೆದಿರುವ ಸಂಸ್ಕೃತವಾಕ್ಯಗಳನ್ನು ನೋಡಿಕೊಳ್ಳಿ :**

೧. ಈ ಇಲಿಯು ಬಿಲವನ್ನು ಹೊಗುತ್ತದೆ. ೨. ಶೂರನಾದ ಶಿಪಾಯಿಯು ಕತ್ತಿಯಿಂದ ಹುಲಿಯನ್ನು ಕೊಲ್ಲುತ್ತಾನೆ. ೩. ಶಿಷ್ಯನು ಮಶಿಕುಡಿಕೆ(ದೌತಿ)ಯನ್ನು ತರುತ್ತಾನೆ. ೪. ಯಾವ ಶಿಪಾಯಿ ಕದನದಲ್ಲಿ ಶೂರನು ? ೫. ವಿಶ್ವಾಮಿತ್ರನು ರಾಮನನ್ನು ಅಪ್ಪಿಕೊಳ್ಳುತ್ತಾನೆ.

१. अयं मूषको बिलं प्रविशति । २. शूरो भटः खड्गेन व्याघ्रं मारयति । ३. छात्रो मषीपात्रम् आनयति । ४. को भटो युद्धे शूरः ? ५. विश्वामित्रो रामं कुस्यति ।।

೨. ಸಂಸ್ಕೃತದಲ್ಲಿರುವ ಕೆಲವು ವಿಭಕ್ತಿರೂಪಗಳನ್ನು ಅದೇ ವಿಭಕ್ತಿಗಳಿಂದ ಕನ್ನಡಿಸುವದಕ್ಕೆ ಆಗುವದಿಲ್ಲ. ಈ ಉದಾಹರಣೆಗಳನ್ನು ನೋಡಿ :

१. वानरा वनं पश्यन्ति । = ಕೋತಿಗಳು ಕಾಡನ್ನು ನೋಡುತ್ತವೆ.

२. वानरा वनं गच्छन्ति । = ಕೋತಿಗಳು ಕಾಡಿಗೆ ಹೋಗುತ್ತವೆ.

३. कः सुखं गच्छति ? = ಯಾವನು ಸುಖವನ್ನು ಪಡೆಯುತ್ತಾನೆ ?

**ವಿಶೇಷ : ಎಲ್ಲಿಗೆ ಹೋಗಬೇಕೋ, ಯಾವದನ್ನು ಪಡೆಯಬೇಕೋ, ಅದರ ಹೆಸರು ಸಂಸ್ಕೃತದಲ್ಲಿ ದ್ವಿತೀಯಾವಿಭಕ್ತಿಯಲ್ಲಿರಬೇಕು. ಹೋಗಬೇಕಾದ ಸ್ಥಳದ ಹೆಸರಿಗೆ ಕನ್ನಡದಲ್ಲಿ ಚತುರ್ಥೀವಿಭಕ್ತಿ ಬೇಕಾಗುವದು (ಪಾ. ೧೧).**

४. वानरो वृक्षात् पतति = ಕೋತಿಯು ಮರದಿಂದ ಬೀಳುತ್ತದೆ.

५. कोपेन दुःखं भवति = ಸಿಟ್ಟಿನಿಂದ ದುಃಖವಾಗುತ್ತದೆ.

६. कामात् क्रोधो भवति = ಆಶೆಯಿಂದ ಸಿಟ್ಟು ಉಂಟಾಗುತ್ತದೆ.

---

1. ಪಾ. ಎಂಬುದು ಸಂಸ್ಕೃತ ಭಾಷಾಭ್ಯಾಸದ ಒಂದನೆಯ ಭಾಗದ ಪಾಠಸಂಖ್ಯೆಗಳನ್ನು ಸೂಚಿಸುತ್ತದೆ.

ವಿಶೇಷ : ಯಾವದನ್ನು ಬಿಟ್ಟಗಲುವದೋ ಆದರ ಹೆಸರು ಪಂಚಮಿಯಲ್ಲಿ, ಕಾರಣವನ್ನು ಹೇಳುವ ಶಬ್ದವು ತೃತೀಯೆಯಲ್ಲಿ ಅಥವಾ ಪಂಚಮಿಯಲ್ಲಿ ಇರಬೇಕೆಂಬುದು ಸಂಸ್ಕೃತದ ನಿಯಮ. ಈಗಿನ ಕನ್ನಡದಲ್ಲಿ ಇವೆರಡನ್ನೂ ತೃತೀಯಾವಿಭಕ್ತಿಯಿಂದಲೇ ತಿಳಿಸುವರು (ಪಾ.೧೩).

೭. दशरथस्य पुत्रा आगच्छन्ति = ದಶರಥನ (ಗಂಡು)ಮಕ್ಕಳು ಬರುತ್ತಿದ್ದಾರೆ.

೮. दशरथस्य कति पुत्राः ? = ದಶರಥನಿಗೆ ಎಷ್ಟು (ಗಂಡು)ಮಕ್ಕಳು ?

ವಿಶೇಷ : ಷಷ್ಠೀವಿಭಕ್ತಿಯು ವಿಶೇಷಣವಾಗಿದ್ದರೆ ಷಷ್ಠೀವಿಭಕ್ತಿಯಿಂದಲೂ ಸ್ವತಂತ್ರ ವಾಗಿದ್ದರೆ ಚತುರ್ಥೀವಿಭಕ್ತಿಯಿಂದಲೂ ಕನ್ನಡಿಸಬೇಕಾಗುವದು.

೯. शिष्याः कटे उपविशन्ति = ಶಿಷ್ಯರು ಚಾಪೆಯ ಮೇಲೆ ಕುಳಿತಿದ್ದಾರೆ.

ವಿಶೇಷ : ಸಂಸ್ಕೃತದ ಸಪ್ತಮೀವಿಭಕ್ತಿಯನ್ನು ಸಂದರ್ಭಕ್ಕೆ ತಕ್ಕಂತೆ 'ಮೇಲೆ', 'ಒಳಗೆ' - ಮುಂತಾದ ಶಬ್ದಗಳಿಂದಲೂ ಕನ್ನಡಿಸಬೇಕಾಗಬಹುದು.

ಉಳಿದ ಸಂಸ್ಕೃತವಿಭಕ್ತಿಗಳ ಅರ್ಥವನ್ನು ಅಲ್ಲಲ್ಲಿ ತಿಳಿಸುವೆವು.

## ಅಭ್ಯಾಸ ೩

ಈ ವಾಕ್ಯಗಳನ್ನು ಕನ್ನಡಿಸಿರಿ. ಪದಗಳ ಕ್ರಮವನ್ನು ಕನ್ನಡಕ್ಕೆ ತಕ್ಕಂತೆ ತಿರುಗಿಸಿಕೊಳ್ಳಿರಿ.

१. रामस्य भार्या सीता । २. जनानां सुखाय (ಸುಖಕ್ಕಾಗಿ) ते जीवन्ति । ३. वसुगुप्तस्य कति भार्याः ? ४. वानराणं यूथम् (ಹಿಂಡು) आगच्छति वनात् । ५. अहं ग्रामं गच्छामि, क्षीरं च आनयामि ॥

## ಅಭ್ಯಾಸ ೪

ಈ ವಾಕ್ಯಗಳನ್ನು ಕನ್ನಡಿಸಿರಿ. ಪದಾಂತ್ಯ ಅಕಾರದ ಮುಂದಿನ ವಿಸರ್ಗಕ್ಕೆ ಲೋಪ ವಾಗಿರುತ್ತದೆ. (ವಿಸರ್ಗದ ಹಿಂದೆ ಅಕಾರವಿದ್ದು ಮುಂದೆ ಅಕಾರದ ಹೊರತು ಮತ್ತೆ ಯಾವ ಸ್ವರವು ಬಂದರೂ ಅದಕ್ಕೆ ಲೋಪ. ಪಾ. ೨೯)

१. वराह (ಕಾಡುಹಂದಿ) इह धावति (ಓಡುತ್ತಿದೆ) । २. भक्त ईश्वरं नमति । ३. आचार्य उपविशति, छात्रा उत्तिष्ठन्ति । ४. राम ऊर्मिकां (ಉಂಗುರವನ್ನು) सीतायै यच्छति । ५. वृद्ध ऋणं प्रतियच्छति (ತಿರುಗಿ ಕೊಡುತ್ತಾನೆ) किम् ? ६. रामो नारायण एव । ७. ताम्बूलवाहक (ತಾಂಬೂಲವನ್ನು

ತರುವವ) एलां लवङ्गं च नयति । ८. ईश्वरेण (ಈಶ್ವರನೊಡನೆ) जीव ऐक्यं गच्छति किम् ? ९. सूद ओदनं पचति (ಅಡಿಗೆಯವನು ಅನ್ನವನ್ನು ಮಾಡುತ್ತಾನೆ) । १०. रुग्ण (ರೋಗಿ) औषधं पिबति । ११. स दुःखं गच्छति ॥

## ಅಭ್ಯಾಸ ೫

ಇಲ್ಲಿ ಆಕಾರದ ಮುಂದಿನ ಪದಾಂತ್ಯವಿಸರ್ಗಕ್ಕೆ ಶಕ್ಯವಿದ್ದಾಗ ಲೋಪವನ್ನು ಮಾಡಿ (ಪಾ. ೨೯) ಓದಿರಿ. (ಮುಂದಿನ ವರ್ಣವು ಸ್ವರವಾಗಿದ್ದರೆ ಅಥವಾ ಮೃದುವರ್ಣವಾದರೆ ಲೋಪವಾಗಬಹುದು). ವಾಕ್ಯವನ್ನು ಕನ್ನಡಿಸಿರಿ :

१. रामं प्रजाः अनुगच्छन्ति (ಹಿಂಬಾಲಿಸುತ್ತಾರೆ) । २. गृहं ब्राह्मणाः आगच्छन्ति । ३. तस्य भार्याः इति वदन्ति । ४. पापाः[1] स्वर्गं न गच्छन्ति । ५. असुराः ईश्वरं न भजन्ति । ६. बालकाः[2] कुत्र क्रीडन्ति ? ७. चोराः ऊर्मिकां हरन्ति (ಕದಿಯುತ್ತಾರೆ) । ८. कृपणाः औदार्यं न पश्यन्ति । ९. सेवकाः घटान् नयन्ति । १०. बालकाः गणयन्ति फलानि । ११. धनेन सह चोराः धावन्ति । १२. दूताः भरतम् आनयन्ति । १३. भार्याः पायसं भक्षयन्ति । १४. परिव्राजकाः (ಸಂನ್ಯಾಸಿಗಳು) मठे तिष्ठन्ति (ಇರುತ್ತಾರೆ) । १५. पापाः यमदूतान् पश्यन्ति । १६. लिपिकराः (ಬರೆಯುವ ಮುನಷಿಗಳು) लेखिनीं कुत्र रक्षन्ति ? १७. बालाः हसन्ति ॥

## ಅಭ್ಯಾಸ ೬

ಈ ವಾಕ್ಯಗಳಲ್ಲಿ ವಿಸರ್ಗಕ್ಕೆ ಆಗಿರುವ ಸಂಧಿಕಾರ್ಯಗಳೇನು ? ವಿಸರ್ಗವನ್ನು ಬಿಡಿಸಿ ಓದಿರಿ. ವಾಕ್ಯಗಳನ್ನು ಕನ್ನಡಿಸಿರಿ :

१. वेदाश्चत्वारः । २. बोधकाश्छात्राश्च मठे वसन्ति । ३. लक्ष्मणश्च

---

ವಿಶೇಷ : 1. ಶ ಷ ಸ ಗಳ ಹಿಂದಿನ ವಿಸರ್ಗವು ಹಾಗೆಯೇ ನಿಲ್ಲುತ್ತದೆ ; ಇಲ್ಲದಿದ್ದರೆ ಅದಕ್ಕೆ ಕ್ರಮವಾಗಿ ಶ ಷ ಸಕಾರಗಳು ಬರುವವು. ಉದಾ : **ಸೂದಾಃ ಶಾಕಮ್, ಬಾಲಾಃ ಷಟ್, ಸೇವಕಾಃ ಸ್ವಾಮಿನಮ್** (ಅಥವಾ) **ಸೂದಾಶ್ಶಾಕಮ್, ಬಾಲಾಷ್ಷಟ್, ಸೇವಕಾಸ್ಸ್ವಾಮಿನಮ್.**

2. ಕ, ಖ, ಪ, ಫ - ಇವುಗಳ ಹಿಂದಿನ ವಿಸರ್ಗದ ಉಚ್ಚಾರಣೆಯನ್ನು ಬಲ್ಲವರಿಂದ ಕೇಳಿ ತಿಳಿದುಕೊಳ್ಳಬೇಕು.

शत्रुघ्नश्च क्रीडतः । ४. चीनाष्टीपर्णपानं (ಟೀಸೊಪ್ಪಿನ ಪಾನಕವನ್ನು) इच्छन्ति । ५. पुनष्ठकार आगतः । ६. विश्वामित्रस्तूष्णीम् (ಸುಮ್ಮನೆ) उपविशति । ७. अमृतं मूर्खस्थूत्करोति (ಉಗುಳುತ್ತಾನೆ) । ८. रक्षापुरुषाश्च (ಪೋಲೀಸಿನವರು) वेगेन आगताः, चोराश्च धाविताः (ಓಡಿದರು) । ९. यूयं नदीस्तत्र न पश्यथ । १०. कौ सुमित्रायास्सुतौ ? ११. अकारान्तः पुल्लिङ्गश्शङ्करशब्दः । १२. पुनष्षट् फलानि नयन्ति ॥

ವಿಶೇಷ : ವಿಸರ್ಗಕ್ಕೆ ಚ, ಛ ಗಳು ಪರವಾದರೆ ಶ, ಟ ಠ ಗಳು ಪರವಾದರೆ ಷ, ತ ಥ ಗಳು ಪರವಾದರೆ ಸ - ಹೀಗೆ ಆದೇಶ.

## ೨. ಇಕಾರಾಂತ ಮತ್ತು ಉಕಾರಾಂತ ನಾಮಗಳು

೩. ಅಕಾರಾಂತಶಬ್ದಗಳ ರೂಪಾವಳಿಯನ್ನು ಹಿಂದೆ (ಪಾ. ೩೧) ತೋರಿಸಿರುತ್ತದೆ. ಹಿಂದಿನ ಭಾಗದಲ್ಲಿ ಮುಖ್ಯವಾಗಿ ಅಕಾರಾಂತಶಬ್ದಗಳನ್ನೇ ಉಪಯೋಗಿಸಲಾಗಿದೆ.

### ಅಭ್ಯಾಸ ೭

ಈ ಸಂಸ್ಕೃತವಾಕ್ಯಗಳಲ್ಲಿ **ಪುಲ್ಲಿಂಗಶಬ್ದಗಳ** ದ್ವಿತೀಯಾಬಹುವಚನ, ತೃತೀಯೈಕವಚನ, ಷಷ್ಠೀಬಹುವಚನ - ಈ ರೂಪಗಳನ್ನೂ **ನಪುಂಸಕಲಿಂಗಶಬ್ದಗಳ** ಪ್ರಥಮಾ ದ್ವಿತೀಯಾ ಬಹುವಚನ, ತೃತೀಯೈಕವಚನ, ಷಷ್ಠೀಬಹುವಚನ - ಇವುಗಳನ್ನೂ ಬರೆಯಿರಿ. ಪ್ರತ್ಯಯದಲ್ಲಿ ನಕಾರವಿರುವ ರೂಪಗಳನ್ನೂ ಣಕಾರವಿರುವ ರೂಪಗಳನ್ನೂ ವಿಂಗಡಿಸಿರಿ. ಕನ್ನಡದ ಅನುವಾದವನ್ನು ಊಹಿಸಿರಿ ; ಆಮೇಲೆ ಕೆಳಗೆ ಬರೆದಿರುವ ಅನುವಾದವನ್ನು ನೋಡಿರಿ :

१. अर्चकः पुष्पेण देवं पूजयति । २. रामेण कृष्णेन वा युष्माकं सुखं भवति । ३. वृक्षेषु पुष्पाणि फुल्लन्ति । ४. कौरवस्य सुखं कर्णेन, कर्णस्य राज्यं कौरवेण । ५. वानरो वृक्षाणां फलानि खादति । ६. ऋणेन पुत्राणां दुःखं भवति । ७. हिरण्याक्षस्य वराहेण मरणं प्राप्तम् । ८. वृद्धानां दण्डेन किं प्रयोजनम् ? ९. दशरथः पुत्रान् हर्षेण कुस्यति । १०. सीता वृक्षान् पश्यति, फलानि इच्छति ॥

೧. ಪೂಜಾರಿ ಹೂವಿನಿಂದ ದೇವರನ್ನು ಪೂಜಿಸುತ್ತಾನೆ. ೨. ರಾಮನಿಂದ ಅಥವಾ ಕೃಷ್ಣನಿಂದ ನಿಮಗೆ ಸುಖವು ಆಗುತ್ತದೆ. ೩. ಮರಗಳಲ್ಲಿ ಹೂಗಳು ಅರಳುತ್ತಿವೆ. ೪. ಕೌರವನ ಸುಖವು ಕರ್ಣನಿಂದ, ಕರ್ಣನ ರಾಜ್ಯವು ಕೌರವನಿಂದ. ೫. ಕೋತಿ ಮರಗಳ ಹಣ್ಣುಗಳನ್ನು ತಿನ್ನುತ್ತದೆ. ೬. ಸಾಲದಿಂದ ಮಕ್ಕಳಿಗೆ ದುಃಖವಾಗುತ್ತದೆ. ೭. ಹಿರಣ್ಯಾಕ್ಷನಿಗೆ (ಕಾಡು)ಹಂದಿಯಿಂದ ಸಾವು ಒದಗಿತು. ೮. ಮುದುಕರಿಗೆ ಕೋಲಿನಿಂದ ಏನು ಪ್ರಯೋಜನ ? ೯. ದಶರಥನು ಮಕ್ಕಳನ್ನು ಹರ್ಷದಿಂದ ಅಪ್ಪಿಕೊಳ್ಳುತ್ತಾನೆ. ೧೦. ಸೀತೆ ಮರಗಳನ್ನು ನೋಡುತ್ತಾಳೆ, ಹಣ್ಣುಗಳನ್ನು ಇಚ್ಛಿಸುತ್ತಾಳೆ.

| | | |
|---|---|---|
| ಇಲ್ಲಿ ಪುಲ್ಲಿಂಗ ಶಬ್ದಗಳ | ದ್ವಿ. ಬ. | **पुत्रान्, वृक्षान् ;** |
| | ತೃ. ಏ. | **रामेण, कृष्णेन, कर्णेन ;** |
| | | **कौरवेण, वराहेण, दण्डेन, हर्षेण ;** |
| ನಪುಂಸಕಲಿಂಗ ಶಬ್ದಗಳ | ಪ್ರ. ದ್ವಿ. ಬ. | **पुष्पाणि, फलानि ;** |
| | ತೃ. ಏ. | **ऋणेन ;** |
| ಪುಲ್ಲಿಂಗ | ಷ. ಬ. | **वृक्षाणाम्, पुत्राणाम्, वृद्धानाम्.** |

**ಸಂಧಿನಿಯಮ** : ಋ, ರ, ಅಥವಾ ಷ - ಈ ವರ್ಣಗಳಿರುವ ಶಬ್ದಗಳ ರೂಪದಲ್ಲಿ ಮಾತ್ರ ನಕಾರಕ್ಕೆ ಣಕಾರ ಬರುತ್ತದೆ ; ಋ, ರ, ಷ - ಇವಕ್ಕೂ ಪ್ರತ್ಯಯದ ನಕಾರಕ್ಕೂ ನಡುವೆ ಸ್ವರ, ಹ, ಯ, ವ, ರ - ಇವೂ ಕವರ್ಗದ ಮತ್ತು ಪವರ್ಗದ ಅಕ್ಷರ - ಇವುಗಳಲ್ಲಿ ಯಾವದು ಇದ್ದರೂ ಹೀಗೆ ಣಕಾರವು ಬರುತ್ತದೆ. ಆದರೆ ಪದದ ಕೊನೆಯ ನಕಾರಕ್ಕೆ ಣಕಾರವಿಲ್ಲ.

## ಣಕಾರವು ಬಾರದೆ ಇರುವ ಉದಾಹರಣೆಗಳು

| | | |
|---|---|---|
| **कष्टेन, षष्ठेन, कृष्णेन, कर्णेन** | - | ಇಲ್ಲಿ ಟವರ್ಗದ ಅಕ್ಷರಗಳು ನಡುವೆ ಇವೆ.[1] |
| **वृश्चिकेन, प्रजानाम्** | - | ಇಲ್ಲಿ ಚವರ್ಗಾಕ್ಷರಗಳು ನಡುವೆ ಇವೆ. |
| **वनानाम्, रथेन** | - | ಇಲ್ಲಿ ತವರ್ಗಾಕ್ಷರಗಳು ನಡುವೆ ಇವೆ. |
| **पुत्रान्, वृक्षान्, दोषान्** | - | ಇಲ್ಲಿ ಪದದ ಕೊನೆಯಲ್ಲಿ ನಕಾರವಿದೆ. |

1. ಕಷ್ಟೇನ ಎಂಬಲ್ಲಿ ಕ, ಷ್, ಟ, ಏ, ನ - ಇಲ್ಲಿ ಷಕಾರಕ್ಕೂ ನಕಾರಕ್ಕೂ ನಡುವೆ ಟ ಇದೆ ; ಹೀಗೆಯೇ ಮುಂದಕ್ಕೂ ತಿಳಿದುಕೊಳ್ಳಬೇಕು

# ಅಭ್ಯಾಸ ೮

ಏಳನೆಯ ಅಭ್ಯಾಸದಲ್ಲಿರುವ ಪುಲ್ಲಿಂಗಶಬ್ದಗಳಿಗೆ ತೃತೀಯೈಕವಚನ, ಷಷ್ಠೀಬಹುವಚನ ಇವನ್ನೂ ನಪುಂಸಕಲಿಂಗಶಬ್ದಗಳಿಗೆ ಪ್ರಥಮಾ ದ್ವಿತೀಯಾ ಬಹುವಚನಗಳು, ತೃತೀಯೈಕವಚನ, ಷಷ್ಠೀಬಹುವಚನ - ಇವನ್ನೂ ಬರೆಯಿರಿ. ಇವುಗಳಲ್ಲಿ ಣಕಾರವು ಬಂದಿದ್ದರೆ ಏಕೆ ? ಬರಬೇಕಾಗಿದ್ದೂ ಬಾರದಿದ್ದರೆ ಏಕೆ ? - ಎಂಬುದನ್ನು ಗೊತ್ತುಮಾಡಿ.

೪. ಈ ವಾಕ್ಯಗಳಲ್ಲಿರುವ ನಾಮಪದಗಳ ವಿಭಕ್ತಿವಚನಗಳನ್ನು ಹೇಳಿರಿ. ಆಯಾ ವಿಭಕ್ತಿಯ ಮೂರು ವಚನಗಳನ್ನೂ ಊಹಿಸಿರಿ. (ಕನ್ನಡದ ಅನುವಾದದಿಂದ ಸಹಾಯವನ್ನು ತೆಗೆದುಕೊಳ್ಳಿರಿ.)

१. कवीन् जनाः प्रशंसन्ति । २. मेघा वारीणि सिञ्चन्ति । ३. मनुष्याणां देवानां ऋषीणां पशूनां मृगाणां च परमेश्वर एव रक्षकः । ४. ब्राह्मणाः धेनूः पूजयन्ति । ५. शिष्या गुरून् नमन्ति । ६. वैद्यो मधु घृतं च मिश्रयति । ७. पेटिकायां कानि वस्तूनि रक्षसि ? ८. परमेश्वर एव सर्वेभ्यो विद्यां बुद्धिं च यच्छति ॥

೧. ಕವಿಗಳನ್ನು ಜನರು ಹೊಗಳುತ್ತಾರೆ. ೨. ಮೋಡಗಳು ನೀರುಗಳನ್ನು (= ನೀರನ್ನು) ಚಿಮುಕಿಸುತ್ತವೆ. ೩. ಮನುಷ್ಯರಿಗೂ ದೇವತೆಗಳಿಗೂ ಋಷಿಗಳಿಗೂ ಪಶುಗಳಿಗೂ ಮೃಗಗಳಿಗೂ ಪರಮೇಶ್ವರನೇ ರಕ್ಷಕನು. ೪. ಬ್ರಾಹ್ಮಣರು ಹಸುಗಳನ್ನು ಪೂಜಿಸುತ್ತಾರೆ. ೫. ಶಿಷ್ಯರು ಗುರುಗಳನ್ನು ನಮಸ್ಕರಿಸುತ್ತಾರೆ. ೬. ವೈದ್ಯನು ಜೇನುತುಪ್ಪವನ್ನೂ ತುಪ್ಪವನ್ನೂ ಬೆರೆಯಿಸುತ್ತಾನೆ. ೭. ಪೆಟ್ಟಿಗೆಯಲ್ಲಿ ಯಾವ ವಸ್ತುಗಳನ್ನು ಕಾಪಾಡುತ್ತೀಯೆ (= ಇಟ್ಟುಕೊಂಡಿದ್ದೀಯೆ) ? ೮. ಪರಮೇಶ್ವರನೇ ಎಲ್ಲರಿಗೂ ವಿದ್ಯೆಯನ್ನೂ ಬುದ್ಧಿಯನ್ನೂ ಕೊಡುತ್ತಾನೆ.

[ಇಕಾರಾಂತ : ಕವೀನ್, ಋಷೀಣಾಮ್, - ಇವು ಪುಲ್ಲಿಂಗ ; ಬುದ್ಧಿಮ್ - ಸ್ತ್ರೀ ; ವಾರೀಣಿ - ನಪುಂಸಕ.

ಉಕಾರಾಂತ : ಪಶೂನಾಮ್, ಗುರೂನ್ - ಇವು ಪುಲ್ಲಿಂಗ ; ವಸ್ತೂನಿ - ನಪುಂಸಕ.]

೫. ಈ ಕೆಳಗೆ ಇಕಾರಾಂತ ಪುಲ್ಲಿಂಗ ಸ್ತ್ರೀಲಿಂಗ ಶಬ್ದರೂಪಗಳನ್ನು ಹೋಲಿಕೆಗಾಗಿ ಕೊಟ್ಟಿದೆ :

ಇಕಾರಾಂತ ಪು. कविः कवे कविम् कविना कवये कवेः कवेः कवौ

ಇಕಾರಾಂತ ಸ್ತ್ರೀ. मतिः मते मतिम् मत्या मत्यै / मतये | मत्याः / मतेः | मत्याः / मतेः | मत्याम् / मतौ

[ಏಕವಚನದ ಸ್ತ್ರೀಲಿಂಗದಲ್ಲಿ 'ಕವಿನಾ' ಎಂಬಂತೆ ನಾ ಬಂದಿಲ್ಲ ; ಚತುರ್ಥಿಯಿಂದ ಮುಂದಕ್ಕೆ ಪುಲ್ಲಿಂಗದ ರೂಪವೂ ಇದೆ ; ಮತ್ತೊಂದು ರೂಪವೂ ಇದೆ. ]

ಈಗ ಈಕಾರಾಂತ, ಇಕಾರಾಂತ ಸ್ತ್ರೀಲಿಂಗ ರೂಪಗಳನ್ನು ಹೋಲಿಸೋಣ :

ಈ : नदी नदि नदीम् नद्या नद्यै नद्याः नद्याः नद्याम्

ಇ : मतिः मते मतिम् मत्या मत्यै / मतये | मत्याः / मतेः | मत्याः / मतेः | मत्याम् / मतौ

[ಈಕಾರಾಂತ (ಸ್ತ್ರೀ) ಪ್ರಥಮಾ ಸಂಬೋಧನಾವಿಭಕ್ತಿಗಳ ರೂಪಗಳು ಬೇರೆಬೇರೆ ; ಇಕಾರಾಂತಕ್ಕೆ ತೃತೀಯಾವಿಭಕ್ತಿಯಿಂದ ಈಕಾರಾಂತದ ರೂಪವೂ ಇದೆ ; ಪುಲ್ಲಿಂಗದ ರೂಪವೂ ಇದೆ.]

೬. ಇಲ್ಲಿ ಕೊಟ್ಟಿರುವ ಮಣಿ, ಮತಿ - ಈ ಶಬ್ದಗಳ ರೂಪಗಳನ್ನು ಹೋಲಿಸಿರಿ :

| | ಮಣಿ - ರತ್ನ ಪುಲ್ಲಿಂಗ | | | ಮತಿ - ಅಭಿಪ್ರಾಯ ಸ್ತ್ರೀಲಿಂಗ | | |
|---|---|---|---|---|---|---|
| १. | मणिः | मणी | मणयः | मतिः | मती | मतयः |
| २. | मणे | मणी | मणयः | मते | मती | मतयः |
| ३. | मणिम् | मणी | मणीन् | मतिम् | मती | मतीः |
| ४. | मणिना | मणिभ्याम् | मणिभिः | मत्या | मतिभ्याम् | मतिभिः |
| ५. | मणये | मणिभ्याम् | मणिभ्यः | मत्यै, मतये | मतिभ्याम् | मतिभ्यः |
| ६. | मणेः | मणिभ्याम् | मणिभ्यः | मत्याः, मतेः | मतिभ्याम् | मतिभ्यः |
| ७. | मणेः | मण्योः | मणीनाम् | मत्याः, मतेः | मत्योः | मतीनाम् |
| ८. | मणौ | मण्योः | मणिषु | मत्याम् , मतौ | मत्योः | मतिषु |

**ವಿಶೇಷ** : ಇಕಾರಾಂತ ಶಬ್ದಗಳಲ್ಲಿ ಹಿಂದೆ (೩)[1] ಹೇಳಿರುವಂತೆ ನಕಾರಕ್ಕೆ ಣಕಾರವು ಬರುವ ಸ್ಥಳಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿರಬೇಕು. ಉದಾ : ಋಷೀಣಾಮ್, ರಾತ್ರೀಣಾಮ್.

1. (೩) = ಹೀಗೆ ಕಂಸದಲ್ಲಿ ಹಾಕಿರುವ ಸಂಖ್ಯೆ ಈ ಭಾಗದ ಖಂಡವನ್ನು ಸೂಚಿಸುತ್ತದೆ.

## ಅಭ್ಯಾಸ ೯

ಈ ವಾಕ್ಯಗಳಲ್ಲಿ ಇಕಾರಾಂತ ಪುಲ್ಲಿಂಗಶಬ್ದಗಳನ್ನೂ ಸ್ತ್ರೀಲಿಂಗಶಬ್ದಗಳನ್ನೂ ವಿಂಗಡಿಸಿರಿ. ('ಮಣಿ' ಶಬ್ದದಂತೆ ರೂಪವಿದ್ದರೆ ಪುಲ್ಲಿಂಗ, 'ಮತಿ' ಶಬ್ದದಂತೆ ಇದ್ದರೆ ಸ್ತ್ರೀಲಿಂಗ.) ವಿಶೇಷ್ಯವು ಯಾವ ಲಿಂಗವೋ ವಿಶೇಷಣವೂ ಅದೇ ಲಿಂಗ. ಸ್ತ್ರೀಲಿಂಗಕ್ಕೆ ಎರಡೆರಡು ರೂಪಗಳಿದ್ದರೆ ಇನ್ನೊಂದು ರೂಪವನ್ನು ಕಂಸದಲ್ಲಿಟ್ಟಿದೆ.

१. रात्रौ (रात्र्याम्) राक्षसा भूमौ (भूम्याम्) सञ्चरन्ति । २. ते ऋषय अग्नौ होमं कुर्वन्ति । ३. बुद्धेः (बुद्ध्याः) शुद्ध्यै (शुद्धये) गायत्रीं जपन्ति । ४. गायत्री विश्वामित्रेण ऋषिणा दृष्टा । ५. ऋषीणां बुभुक्षा कन्दैः मूलैश्च अपगच्छति । ६. अत्र देवं परया भक्त्या पूजयन् ऋषिः उत्तमां सिद्धिम्,[1] आत्यन्तिकीं मुक्तिं च प्राप्तवान् । ७. सूत्रे प्रोता मणयो हारः । ८. हे मुने, भीकरात् कान्तारात् निर्गताः स्मः । ९. अस्य गिरेः समीपे वृक्षषण्डम् अस्ति । १०. अयम् ऋषेः कस्यचित् आश्रमः इति मे मतिः । ११. एवं श्रुतेः[2] स्मृतेश्च अयं धर्मो भवति । १२. भूपतिः सर्वाः प्रजाः धर्मेण पालयति ; अत एव तस्य धवला कीर्तिः सर्वत्र व्याप्ता ॥

೧. ರಾತ್ರಿಯಲ್ಲಿ ರಾಕ್ಷಸರು ಭೂಮಿಯ ಮೇಲೆ ಓಡಾಡುತ್ತಿರುತ್ತಾರೆ. ೨. ಆ ಋಷಿಗಳು ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾರೆ. ೩. ಬುದ್ಧಿಯ ಶುದ್ಧಿಗಾಗಿ ಗಾಯತ್ರಿಯನ್ನು ಜಪಿಸುತ್ತಾರೆ. ೪. ಗಾಯತ್ರಿಯು ವಿಶ್ವಾಮಿತ್ರಋಷಿಯಿಂದ ಕಂಡು ಹಿಡಿಯಲ್ಪಟ್ಟಿತು. ೫. ಋಷಿಗಳ ಹಸಿವು ಗೆಡ್ಡೆಗಳಿಂದಲೂ ಬೇರುಗಳಿಂದಲೂ ಹೋಗುತ್ತದೆ. ೬. ಇಲ್ಲಿ ದೇವರನ್ನು ಹೆಚ್ಚಿನ ಭಕ್ತಿಯಿಂದ ಪೂಜಿಸುತ್ತಾ ಋಷಿಯು ಉತ್ತಮವಾದ ಸಿದ್ಧಿಯನ್ನೂ ನಾಶವಿಲ್ಲದ ಮುಕ್ತಿಯನ್ನೂ ಪಡೆದುಕೊಂಡನು. ೭. ದಾರದಲ್ಲಿ ಪೋಣಿಸಿದ ರತ್ನಗಳು ಹಾರ. ೮. ಎಲೈ ಮುನಿಯೆ, ಭಯಂಕರವಾದ ಕಾಡಿನಿಂದ ಹೊರಕ್ಕೆ ಬಂದಿರುತ್ತೇವೆ. ೯. ಈ ಬೆಟ್ಟದ ಹತ್ತಿರ ಮರಗಳ ತೋಪು ಇದೆ. ೧೦. ಇದು ಯಾರೋ ಒಬ್ಬ ಋಷಿಯ ಆಶ್ರಮವು ಎಂದು ನನ್ನ ಅಭಿಪ್ರಾಯ

1. ತಿ, ತ್ತಿ, ದ್ಧಿ - ಇವು ಕೊನೆಯಲ್ಲಿರುವ ಶಬ್ದಗಳು ಬಲುಮಟ್ಟಿಗೆ ಸ್ತ್ರೀಲಿಂಗದವು. ಉದಾ : ಶ್ರುತಿಃ, ಸ್ಮೃತಿಃ, ವೃತ್ತಿಃ, ಭಿತ್ತಿಃ, ಸಿದ್ಧಿಃ, ಬುದ್ಧಿಃ ।

2. ಹೇತುವನ್ನು (Reason) ತಿಳಿಸುವದಕ್ಕೆ ಪಂಚಮೀವಿಭಕ್ತಿಯನ್ನು ಪ್ರಯೋಗಿಸುತ್ತಾರೆ.

(= ನನಗೆ ತೋರುತ್ತದೆ) ೧೧. ಹೀಗೆಂದು ಶ್ರುತಿಯಿರುವದರಿಂದಲೂ ಸ್ಮೃತಿ ಇರುವದರಿಂದಲೂ ಇದು ಧರ್ಮವಾಗುತ್ತದೆ. ೧೨. ದೊರೆಯು ಎಲ್ಲಾ ಪ್ರಜೆಗಳನ್ನೂ ಧರ್ಮದಿಂದ ಕಾಪಾಡುತ್ತಾನೆ ; ಆದ್ದರಿಂದಲೇ ಅವನ ಶುಭ್ರವಾದ ಕೀರ್ತಿ ಎಲ್ಲೆಲ್ಲಿಯೂ ಹಬ್ಬಿಕೊಂಡಿದೆ.

## ಅಭ್ಯಾಸ ೧೦

ಇಲ್ಲಿರುವ ವಿಶೇಷ್ಯಗಳಿಗೆ ತಕ್ಕಂತೆ ವಿಶೇಷಣಗಳನ್ನು, ಅಥವಾ ವಿಶೇಷಣಕ್ಕೆ ತಕ್ಕಂತೆ ವಿಶೇಷ್ಯವನ್ನು, ಆಯಾ ವಿಭಕ್ತಿವಚನಗಳಲ್ಲಿಟ್ಟು ಹೊಂದಿಸಿ ಬರೆಯಿರಿ. ಉದಾ : **ಭಗವತೇ ವಿಶ್ವಾಮಿತ್ರಾಯ** । ಕಂಸದಲ್ಲಿರುವ ಶಬ್ದಕ್ಕೆ ವಿಭಕ್ತಿವಚನಗಳನ್ನು ಹಾಕಬೇಕು

१. गायत्री (भगवत्) विश्वामित्रेण दृष्टा । २. वैश्येन (धीमत्) ब्राह्मणाय सर्वं धनं दत्तम् । ३. गभीरायां (नदी) मीनाः भवन्ति । ४. (रुचिर) मणिं पश्य । ५. पूज्यानां (मुनि) दर्शनेन कुलं पवित्रं भवति ॥

## ಅಭ್ಯಾಸ ೧೧

ಈ ವಿಶೇಷಣವಿಶಿಷ್ಟಪದಗಳ ಆಯಾ ವಿಭಕ್ತಿಯ ರೂಪಗಳನ್ನೆಲ್ಲ ಬರೆಯಿರಿ :

१. धवलां कीर्तिम् । २. भगवत्याः श्रुतेः । ३. वदान्येन (ದಾನಶೂರನಾದ) भूपतिना । ४. अतिथीनां ब्राह्मणानाम् । ५. मणिना भूषितः सर्पः ॥

೭. ಇಕಾರಾಂತಶಬ್ದಗಳ ರೂಪವನ್ನು ನೆನಪಿನಲ್ಲಿಟ್ಟುಕೊಂಡರೆ ಉಕಾರಾಂತ ರೂಪಗಳನ್ನು ಸುಲಭವಾಗಿ ನೆನಪಿಟ್ಟುಕೊಳ್ಳಬಹುದು. ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಮೊದಲನೆಯದರಲ್ಲಿ ಇಕಾರಾಂತಶಬ್ದದ ರೂಪವನ್ನೂ ಅದರ ಮುಂದಿನ ವಾಕ್ಯದಲ್ಲಿ ಉಕಾರಾಂತಶಬ್ದದ ಅದೇ ವಿಭಕ್ತಿಯ ರೂಪವನ್ನೂ ಕೊಟ್ಟಿದೆ. ಅರ್ಥವನ್ನು ಊಹಿಸಿ ; ಗೊತ್ತಾಗದೆ ಇದ್ದಾಗ ಅನುವಾದವನ್ನು ನೋಡಿಕೊಳ್ಳಿ.

१. बहुमूल्योऽयं मणिः । २. सुन्दरोऽयं शिशुः । ३. कविना काव्यं कृतम् ; प्रभुणा स्वर्णहारो दत्तः । ५. ज्ञानं मुक्त्यै (मुक्तये) भवति । ५. घासं धेन्वै (धेनवे) यच्छामि । ६. कान्तारे रात्रीः श्रमेण नयन्ति । ७. गोपालो धेनूः कुत्र चारयति ? ८. ऋषीणाम् आश्रमा रम्याः । ९. गुरूणाम् आशीर्वादः

शिष्याणां भूत्यै (भूतये) भवति । १०. शुक्लपक्षे रात्र्यां (रात्रौ) चन्द्रिका मूर्छति । ११. भ्रान्तो रज्ज्वां (रज्जौ) सर्पं पश्यति ॥

೧. ಈ ರತ್ನವು ಬಲುಬೆಲೆಯುಳ್ಳದ್ದು. ೨. ಈ ಮಗು ಸುಂದರ. ೩. ಕವಿಯಿಂದ ಕಾವ್ಯವು ಮಾಡಲ್ಪಟ್ಟಿತು, ದೊರೆಯಿಂದ ಚಿನ್ನದ ಸರವು ಕೊಡಲ್ಪಟ್ಟಿತು. ೪. ಜ್ಞಾನವು ಮುಕ್ತಿಗೆ (ಕಾರಣ)ವಾಗುತ್ತದೆ. ೫. (ಹಸಿ)ಹುಲ್ಲನ್ನು ಹಸುವಿಗೆ ಕೊಡುತ್ತೇನೆ (ಹಾಕುತ್ತೇನೆ). ೬. ಕಾಡಿನಲ್ಲಿ ರಾತ್ರಿಗಳನ್ನು ಆಯಾಸದಿಂದ ಕಳೆಯುತ್ತಾರೆ. ೭. ದನಕಾಯುವವನು ಹಸುಗಳನ್ನು ಎಲ್ಲಿ ಮೇಯಿಸುತ್ತಾನೆ ? ೮. ಋಷಿಗಳ ಆಶ್ರಮಗಳು (ಮನಸ್ಸಿಗೆ) ಒಪ್ಪು. ೯. ಗುರುಗಳ ಆಶೀರ್ವಾದವು ಶಿಷ್ಯರ ಏಳಿಗೆಗೆ (ಕಾರಣ)ವಾಗುತ್ತವೆ. ೧೦. ಶುಕ್ಲಪಕ್ಷದಲ್ಲಿ ರಾತ್ರಿಯಲ್ಲಿ ಬೆಳುದಿಂಗಳು ಹರಡಿಕೊಂಡಿರುತ್ತದೆ. ೧೧. ಭ್ರಾಂತನು ಹಗ್ಗದಲ್ಲಿ ಹಾವನ್ನು ಕಾಣುತ್ತಾನೆ.

**ವಿಶೇಷ :** ಇಕಾರಾಂತ ಶಬ್ದಗಳಲ್ಲಿ ಇಕಾರ, ಏಕಾರ, ಯಕಾರ -- ಇವುಗಳಿರುವ ಸ್ಥಳಗಳಲ್ಲಿ ಉಕಾರಾಂತಗಳಲ್ಲಿ ಕ್ರಮವಾಗಿ ಉಕಾರ, ಓಕಾರ, ವಕಾರಗಳು ಇರುವದನ್ನು ಲಕ್ಷಿಸಿರಿ.

೮. ಇಲ್ಲಿ ಕೊಟ್ಟಿರುವ ಅಗ್ನಿ, ವಾಯು - ಈ ಶಬ್ದಗಳ ವಿಭಕ್ತಿರೂಪಗಳನ್ನು ಹೋಲಿಸಿರಿ :

| ಇಕಾರಾನ್ತಃ ಪುಲ್ಲಿಙ್ಗಃ<br>ಅಗ್ನಿ -- ಅಗ್ನಿದೇವತೆ, ಬೆಂಕಿ | | | ಉಕಾರಾನ್ತಃ ಪುಲ್ಲಿಙ್ಗಃ<br>ವಾಯು - ವಾಯುದೇವತೆ, ಗಾಳಿ | | |
|---|---|---|---|---|---|
| अग्निः | अग्नी | अग्नय. | वायुः | वायू | वायवः |
| हे अग्ने | ” | ” | हे वायो | ” | ” |
| अग्निम् | ” | अग्नीन् | वायुम् | ” | वायून् |
| अग्निना | अग्निभ्याम् | अग्निभिः | वायुना | वायुभ्याम् | वायुभिः |
| अग्नये | ” | अग्निभ्यः | वायवे | ” | वायुभ्यः |
| अग्नेः | ” | ” | वायोः | ” | ” |
| ” | अग्न्योः | अग्नीनाम् | ” | वाय्वोः | वायूनाम् |
| अग्नौ | ” | अग्निषु | वायौ | ” | वायुषु |

**ವಿಶೇಷ :** ಶಬ್ದರೂಪದಲ್ಲಿ (,,) ಈ ಚಿಹ್ನೆಯನ್ನು ಹಾಕಿದ್ದರೆ ಮೇಲಿನಂತೆಯೇ ರೂಪವೆಂತ ಸೂಚನೆ. ಅಕಾರಾಂತಶಬ್ದಗಳಂತೆಯೇ ಇಕಾರಾಂತ, ಉಕಾರಾಂತ ಶಬ್ದಗಳಿಗೂ

ದ್ವಿವಚನದಲ್ಲಿ ಪ್ರ. ಸಂ. ದ್ವಿ. ವಿಭಕ್ತಿಗಳಿಗೆ ಒಂದೇ ರೂಪ. ಇಕಾರಾಂತ, ಉಕಾರಾಂತ ಎರಡಕ್ಕೂ ಏಕವಚನದಲ್ಲಿ ಪಂ.ಷ. ವಿಭಕ್ತಿಗಳಿಗೆ ಒಂದೇ ರೂಪ ; ದ್ವಿವಚನದಲ್ಲಿ ತೃ.ಚ.ಪಂ. ವಿಭಕ್ತಿಗಳಲ್ಲಿ ಒಂದೇ ರೂಪ. ಬಹುವಚನದಲ್ಲಿ ಪ್ರ.ಸಂ. ವಿಭಕ್ತಿಗಳಿಗೂ ಚ.ಪಂ. ವಿಭಕ್ತಿಗಳಿಗೂ ಒಂದೇ ರೂಪ. ಸಂದರ್ಭಕ್ಕೆ ತಕ್ಕಂತೆ ಅರ್ಥವನ್ನು ಮಾಡಿಕೊಳ್ಳಬೇಕಾಗುತ್ತದೆ.

೯. ಇಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಒಂದೇ ರೂಪದ ಪದಗಳಿಗೆ ಬೇರೆಬೇರೆಯ ಅರ್ಥವು ಬಂದಿರುವದನ್ನು ನೋಡಿರಿ :

**१. हे कवी, युवाभ्यां कति काव्यानि रचितानि ?** - ಎಲೈ (ಇಬ್ಬರು) ಕವಿಗಳಿರಾ, ನಿಮ್ಮಿಂದ ಎಷ್ಟು ಕಾವ್ಯಗಳು ರಚಿತ(ವಾಗಿವೆ) ? **२. भूपतिः कवी सम्भावयति ।** - ದೊರೆಯು (ಇಬ್ಬರು) ಕವಿಗಳನ್ನು ಸಂಭಾವಿಸುತ್ತಾನೆ (ಗೌರವಿಸುತ್ತಾನೆ). **३. भोः, अतिथयो यथेच्छं भोजनं कुर्वन्तु ?** - ಏನಯ್ಯ, ಅತಿಥಿಗಳು ಅವರ ಇಚ್ಛೆಯಂತೆ ಭೋಜನಮಾಡಲಿ. **४. ताभ्यां ऋषिभ्यां किं कृतम् ?** - ಆ (ಇಬ್ಬರು) ಋಷಿಗಳಿಂದ ಏನು ಮಾಡಲ್ಪಟ್ಟಿತು ? **५. एताभ्यां ऋषिभ्यां किं यच्छामः ?** - ಈ (ಇಬ್ಬರು) ಋಷಿಗಳಿಗೆ ಏನು ಕೊಡೋಣ ? **६. ऋषिभ्यो नमः** - ಋಷಿಗಳಿಗೆ ನಮಸ್ಕಾರ ! **७. अग्निभ्यो विस्फुलिङ्गा व्युच्चरन्ति ।** - ಅಗ್ನಿಗಳಿಂದ ಕಿಡಿಗಳು ಸಿಡಿದೇಳುತ್ತವೆ. **८. एतयोः मण्योः स्वामी कः ?** - ಈ (ಎರಡು) ರತ್ನಗಳ ಒಡೆಯನು ಯಾರು ? **९. तयोः मण्योः रन्ध्रं नास्ति** - ಆ (ಎರಡು) ರತ್ನಗಳಲ್ಲಿ ತೂತು ಇಲ್ಲ.

## ಅಭ್ಯಾಸ ೧೨

ಅರ್ಥಕ್ಕೆ ಹೊಂದುವ ವಿಭಕ್ತಿಯನ್ನು ಲಕ್ಷ್ಯದಲ್ಲಿಟ್ಟು ವಾಕ್ಯಗಳನ್ನು ಕನ್ನಡಿಸಿರಿ. ದ್ವಿವಚನ ರೂಪಗಳಿಗೆ ಅರ್ಥವನ್ನು ಕಂಸದಲ್ಲಿ ಕೊಟ್ಟಿದೆ.

१. प्रभुः कवये द्वौ मणी (ರತ್ನಗಳನ್ನು) यच्छति । २. प्रभुणा द्वौ मणी (ರತ್ನಗಳು) दत्तौ । ३. स मणिभ्यां (ರತ್ನಗಳಿಂದ) किं करोति ? ४. मणिभ्यां (ರತ್ನಗಳಿಗೆ) सूत्रम् इच्छति । ५. मणिभ्यां (ರತ್ನಗಳ ಕಡೆಯಿಂದ) निर्गच्छति कान्तिः । ६. मण्योः (ರತ್ನಗಳು) कान्तिः सर्वत्र प्रसरति । ७. मण्योः

(ರತ್ನಗಳೊಳಗೆ) पिपीलिका (ಇರುವೆ) प्रविशति । ८. इमे मम बन्धवः । ९. हे बन्धवः, अहं विदेशं गच्छामि । १०. बन्धोरेव मम दुःखं प्राप्तम् । ११. मम बन्धोः पुत्रोऽयम् । १२. बन्धुभ्यः किं यच्छसि ? १३. अयं चारो (ಸೇವಕ) मम बन्धुभ्यस्तव समीपम् आगतवान् ॥

೧೦. ಇಕಾರಾಂತ ಮತ್ತು ಉಕಾರಾಂತ ನಪುಂಸಕಲಿಂಗದ ಶಬ್ದಗಳ ರೂಪವನ್ನು ಇಲ್ಲಿ ಕೊಟ್ಟಿದೆ.

| ವಾರಿ - ನೀರು | | | ಮಧು - ಜೇನುತುಪ್ಪ | | |
|---|---|---|---|---|---|
| वारि | वारिणी | वारीणि | मधु | मधुनी | मधूनि |
| हे वारे, वारि | वारिणी | वारीणि | मधो मधु | मधुनी | मधूनि |
| वारि | वारिणी | वारीणि | मधु | मधुनी | मधूनि |
| वारिणा | वारिभ्याम् | वारिभिः | मधुना | मधुभ्याम् | मधुभिः |
| वारिणे | " | वारिभ्यः | मधुने | मधुभ्याम् | मधुभ्यः |
| वारिणः | " | " | मधुनः | मधुभ्याम् | मधुभ्यः |
| " | वारिणोः | वारीणाम् | मधुनः | मधुनोः | मधूनाम् |
| वारिणि | " | वारिषु | मधुनि | मधुनोः | मधुषु |

ವಿಶೇಷ : ಇಕಾರಾಂತ ವಾರಿಶಬ್ದವು ನಕಾರಾಂತವಾಗಿದ್ದರೆ ಹೇಗೋ ಹಾಗೆ (ಉದಾ : **ಗುಣಿನ್** ಶಬ್ದದಂತೆ) ಏಕವಚನದಲ್ಲಿ ವಾರಿಣಾ, ವಾರಿಣೇ, ವಾರಿಣಃ, ವಾರಿಣಿ - ಎಂಬ ರೂಪಗಳನ್ನು ಪಡೆದಿದೆ ; ಉಕಾರಾಂತನಪುಂಸಕಗಳಿಗೂ ಹೀಗೆಯೇ ರೂಪಗಳು. ಇಲ್ಲಿ 'ನ'ಕ್ಕೆ ಣಕಾರವು ಬರುವ ಸ್ಥಳಗಳನ್ನು ಮನಸ್ಸಿಗೆ ತಂದುಕೊಳ್ಳಬೇಕು.

೧೧. ಇಕಾರಾಂತವಾದ ನಪುಂಸಕ (ಸಮಸ್ತವಲ್ಲದ, ಕೇವಲ) ಶಬ್ದಗಳು ಬಲು ಕಡಿಮೆ. ಆದರೆ ವಿಶೇಷಣಶಬ್ದಗಳು ಸಿಕ್ಕುತ್ತವೆ. ಇಲ್ಲಿ ಇಕಾರಾಂತ ಮತ್ತು ಉಕಾರಾಂತನಪುಂಸಕಲಿಂಗದ ವಿಶೇಷಣರೂಪಗಳನ್ನು ಹೋಲಿಕೆಗಾಗಿ ಕೊಟ್ಟಿರುತ್ತದೆ :

| | | | | | |
|---|---|---|---|---|---|
| शुचि | शुचिनी | शुचीनि | मृदु | मृदुनी | मृदूनि |
| हे शुचे, हे शुचि | ” | ” | हे मृदो मृदु | ” | ” |
| शुचि | ” | ” | मृदु | ” | ” |
| शुचिना | शुचिभ्याम् | शुचिभिः | मृदुना | मृदुभ्याम् | मृदुभिः |
| शुचिने शुचये | ” | शुचिभ्यः | मृदुने मृदवे | ” | मृदुभ्यः |
| शुचिनः शुचेः | ” | ” | मृदुनः मृदोः | ” | ” |
| ” | शुचिनोः शुच्योः | शुचीनाम् | ” | मृदुनोः मृद्वोः | शुचीनाम् |
| शुचिनि शुचौ | ” | शुचिषु | मृदुनि मृदौ | ” | मृदुषु |

ಇಲ್ಲಿ ಏಕವಚನದಲ್ಲಿ ಚತುರ್ಥೀವಿಭಕ್ತಿಯಿಂದ ವಾರಿಣೇ - ಶುಚಿನೇ, ಶುಚಯೇ ; ವಾರಿಣಃ - ಶುಚಿನಃ, ಶುಚೇಃ ; ವಾರಿಣಃ - ಶುಚಿನಃ, ಶುಚೇಃ ; ವಾರಿಣಿ - ಶುಚಿನಿ, ಶುಚೌ ; ವಾರಿಣೋಃ - ಶುಚಿನೋಃ, ಶುಚ್ಯೋಃ ॥ ಮತ್ತು

ಮಧುನೇ - ಮೃದುನೇ, ಮೃದವೇ ; ಮಧುನಃ -ಮೃದುನಃ - ಮೃದೋಃ ; ಮಧುನಃ - ಮೃದುನಃ, ಮೃದೋಃ ; ಮಧುನೋಃ - ಮೃದುನೋಃ, ಮೃದ್ವೋಃ ; ಮಧುನಿ - ಮೃದುನಿ, ಮೃದೌ - ಎಂದು ದ್ವಿವಚನ ಷಷ್ಠೀ, ಸಪ್ತಮೀ ವಿಭಕ್ತಿಗಳಿಗೆ ಎರಡೆರಡು ರೂಪಗಳು ಇರುವದನ್ನು ಲಕ್ಷಿಸಿರಿ.

## ಅಭ್ಯಾಸ ೧೩

ಶುಚೌ ದೇಶೇ (ಅಗ್ನಿ ಶಬ್ದದಂತೆ) ; ಶುಚೌ (ಭೂಮ್ಯಾಮ್) ; ಶುಚಿನಿ, ಶುಚೌ, ಜಲೇ ಈ ವಿಶೇಷ್ಯವಿಶೇಷಣ ಶಬ್ದಗಳಿಗೆ ಆಯಾ ವಿಭಕ್ತಿಯ ರೂಪಗಳನ್ನೆಲ್ಲ ಬರೆಯಿರಿ.

೧೨. ಉ, ಊಕಾರಾಂತ ಸ್ತ್ರೀಲಿಂಗಶಬ್ದಗಳ ರೂಪಗಳನ್ನು ಹೋಲಿಸುವದಕ್ಕಾಗಿ ಇಲ್ಲಿ ತೋರಿಸಿದೆ. (ಊಕಾರಾಂತ ಸ್ತ್ರೀಲಿಂಗ ಶಬ್ದಗಳು ಬಹಳ ಕಡಿಮೆ.) ಹಿಂದಿನ ವಿಭಕ್ತಿಯ ರೂಪವೇ ಇದ್ದಲ್ಲಿ (,,) ಹೀಗೆ ಗುರುತುಮಾಡಿದೆ.

**ಉಕಾರಾಂತ ಸ್ತ್ರೀಲಿಂಗ**

**ಧೇನು - ಹಸು**

| | | |
|---|---|---|
| धेनुः | धेनू | धेनवः |
| धेनो | ” | ” |
| धेनुम् | ” | धेनूः |
| धेन्वा | धेनुभ्याम् | धेनुभिः |
| धेन्वै / धेनवे | ” | धेनुभ्यः |
| धेन्वाः / धेनोः | | |
| ” | धेन्वोः / धेनोः | धेनूनाम् |
| धेन्वाम् / धेनौ | ” | धेनुषु |

**ಊಕಾರಾಂತ ಸ್ತ್ರೀಲಿಂಗ**

**ವಧೂ - ಮದುವಣಗಿತ್ತಿ, ಹೆಂಡತಿ, ಸೊಸೆ**

| | | |
|---|---|---|
| वधूः | वध्वौ | वध्वः |
| वधु | ” | ” |
| वधूम् | ” | वधूः |
| वध्वा | वधूभ्याम् | वधूभिः |
| वध्वै | ” | वधूभ्यः |
| वध्वाः | ” | ” |
| ” | वध्वोः | वधूनाम् |
| वध्वाम् | ” | वधूषु |

**ವಿಶೇಷ** : (1) ಉಕಾರಾಂತ ಸ್ತ್ರೀಲಿಂಗಕ್ಕೆ ಚತುರ್ಥೀವಿಭಕ್ತಿಯಿಂದ ಮುಂದಕ್ಕೆ ಏಕವಚನದಲ್ಲಿ ಊಕಾರಾಂತ ಶಬ್ದದ ರೂಪವೂ ಇದ್ದು ಉಕಾರಾಂತ ಪುಲ್ಲಿಂಗದ ರೂಪಗಳೂ ಇವೆ. ಇ, ಈಕಾರಾಂತ ಸ್ತ್ರೀಲಿಂಗಗಳನ್ನು ಹೇಳೋ ಹಾಗೆ ಇವುಗಳ ಏಕವಚನರೂಪವನ್ನು ಒಂದರ ಕೆಳಗೆ ಒಂದನ್ನಿಟ್ಟು ಹೋಲಿಸಬಹುದು :

| | | | | | | | |
|---|---|---|---|---|---|---|---|
| वधूः, | वधु, | वधून्, | वध्वा, | वध्वै, | वध्वाः, | वध्वाः, | वध्वाम् |
| धेनुः | धेनो, | धेनुम्, | धेन्वा, | धेन्वै / धेनवे | धेन्वाः / धेनोः | धेन्वाः / धेनोः | धेन्वाम् / धेनौ |

(2) ಹಿಂದೆ ಇ ಈ ಏಯ್‌ಗಳು ಇದ್ದ ಸ್ಥಲಗಳಲ್ಲಿ ಈಗ ಉ ಊ ಓವ್ ಗಳು ಬಂದಿರುವದು ಹೊರತು ಮತ್ತೆ ಯಾವ ಹೆಚ್ಚುಕಡಮೆಯೂ ಈ ರೂಪಗಳಲ್ಲಿಲ್ಲ.

## ಅಭ್ಯಾಸ ೧೪

ಈ ವಾಕ್ಯಗಳನ್ನು ಕನ್ನಡಿಸಿರಿ. ಇಕಾರಾಂತ ಮತ್ತು ಉಕಾರಾಂತಶಬ್ದಗಳಿಗೆ ಆಯಾ ವಿಭಕ್ತಿಯ ಎಲ್ಲಾ ವಚನಗಳನ್ನೂ ಬರೆಯಿರಿ :

ಈ ಶಬ್ದಗಳು ಪುಲ್ಲಿಂಗ : बाहुः - ತೋಳು ; पाणिः - ಕೈ ; भिक्षुः - ತಿರುಕ, ಸಂನ್ಯಾಸಿ ; मृत्युः - ಸಾವು, ಯಮ ; अन्धकारः - ಕತ್ತಲು ; कीटः - ಹುಳು ; ईदृशः - ಇಂಥ ; वत्सः - ಕರು.

ಇವು ಸ್ತ್ರೀಲಿಂಗ : हनुः - ದವಡೆ ; रज्जुः - ಹಗ್ಗ ; चञ्चुः - ಕೊಕ್ಕು.

१. ब्राह्मणस्य बाहू दीर्घौ, हनुस्तु न दृढा । २. तस्य भिक्षोः पाणौ ईदृशः कमण्डलुः , दण्डो वा नास्ति । ३. अस्मै भिक्षवे किं यच्छसि ? ४. अन्धकारे रज्जौ (रज्ज्वां) सर्पं पश्यति । ५. साधवो मृत्योः[1] पश्यन्ति नो भयम् । ६. तव रज्ज्वाः (रज्जोः) का भीतिः ? ७. अग्नये[2] नमः, वायवे नमः, आदित्याय नमः । ८. काकः कीटं चञ्च्वा[3] नयति । ९. ब्राह्मणस्य धेन्वाः (धेनोः) पञ्च वत्साः ॥

೧೩. ವಿಸರ್ಗದ ಹಿಂದೆ ಅಆಕಾರಗಳ ಹೊರತು ಬೇರೆಯ ಸ್ವರಗಳಿದ್ದು ಮುಂದೆ ಸ್ವರವಾಗಲಿ ಮೃದುವರ್ಣವಾಗಲಿ ಬಂದಿರುವಲ್ಲಿ ವಿಸರ್ಗಕ್ಕೆ ರೇಫ(ರಕಾರ)ವು ಬರುತ್ತದೆ. ಈ ರೇಫದ ಮುಂದೆ ಮತ್ತೊಂದು ರೇಫವಿದ್ದರೆ ಇದಕ್ಕೆ ಲೋಪ ; ಇದರ ಹಿಂದೆ ಹ್ರಸ್ವಸ್ವರವಿದ್ದರೆ ಅದಕ್ಕೆ ದೀರ್ಘವಾಗುತ್ತದೆ.

ಉದಾಹರಣೆ : मुनिः अयम् - मुनिरयम् ; मणीः इच्छति - मणीरिच्छति ; धेनुः इयम् - धेनुरियम् ; सरयूः नाम - सरयूर्नाम ॥ ಹೀಗೆಯೇ हरेर्गजः, भिक्षोर्भोजनम् ; पुष्पैरर्चनम् ; धेनोर्वत्सः ॥ गिरिः रम्यः - गिरिर् रम्यः - गिरी रम्यः ॥

---

1. ಏತರಿಂದ ಅಂಜಿಕೆಯಾಗುತ್ತದೆಯೋ ಅದರ ಹೆಸರಿಗೆ ಪಂಚಮೀವಿಭಕ್ತಿಯಿರುವದು.

2. ನಮಃ - ಅವ್ಯಯ ; ಈ ಅವ್ಯಯವು ಚತುರ್ಥೀವಿಭಕ್ತಿಯನ್ನು ಬಯಸುತ್ತದೆ. ಆದರೆ 'ನಮಾಮಿ' ಹೀಗೆ ಕ್ರಿಯಾಪದವಿದ್ದರೆ ದ್ವಿತೀಯಾವಿಭಕ್ತಿ ಬೇಕು. ಉದಾ : 'ಅಗ್ನಿಂ ನಮಾಮಿ'.

3. ಯಾವ ಅವಯವದಿಂದ ಒಯ್ಯುತ್ತಾರೋ ಅದನ್ನು ತೃತೀಯಾವಿಭಕ್ತಿಯಿಂದ ತಿಳಿಸಬೇಕು.

## ಅಭ್ಯಾಸ ೧೫

ಈ ವಾಕ್ಯಗಳಲ್ಲಿರುವ ಸಂಧಿಗಳನ್ನು ಬಿಡಿಸಿರಿ ; ವಾಕ್ಯಗಳನ್ನು ಕನ್ನಡಿಸಿರಿ :

[ಮಾದರಿ : अस्ति कालिदासो नाम कविरुज्जयिन्याम् । (कालिदासः नाम कविः उज्जयिन्याम् ।) ಉಜ್ಜಯಿನಿಯಲ್ಲಿ ಕಾಲಿದಾಸನೆಂಬ ಕವಿಯುಂಟು.]

१. कोऽत्र कवेरभिप्रायः ? २. सेनयोर्मध्ये रथोऽस्ति । ३. ऋषेर्बुभुक्षा कन्दैर्मूलैश्च अपगच्छति । ४. गोपालो धेनूर्वनात् आनयति । ५. दशरथस्य वधूरिह पश्यामः । ६. भिक्षुर्गृहम् आगच्छति । ७. भटानां नास्ति मृत्योर्भयम् । ८. दशरथो भक्तिमतीर्भार्याः पश्यति । ९. किं भिक्षोरस्ति कमण्डलुर्दण्डो वा । १०. हरिर्हरति पापानि दुष्टचित्तैरपि स्मृतः । ११. वायू रात्रौ वेगेन वाति किम् ?

## ೩. ಧಾತುಗಳೂ ಕ್ರಿಯಾಪದಗಳೂ

೧೪. ನಾಮಪದದ ಪ್ರಕೃತಿಗೆ **ಪ್ರಾತಿಪದಿಕ** (base) ಎಂದೂ, ಕ್ರಿಯಾಪದದ ಮೂಲಪ್ರಕೃತಿಗೆ **ಧಾತು** (root) ಎಂದೂ ಹೆಸರು. ಸಂಸ್ಕೃತಧಾತುಗಳನ್ನು ಹತ್ತು ಗಣಗಳಾಗಿ ವಿಂಗಡಿಸಿರುತ್ತಾರೆ.

೧. रामं नमति । बालः क्रीडति । सूदः पचति । ಇವೆಲ್ಲ ಒಂದನೆಯ ಗಣದ ಧಾತುಗಳಿಂದಾಗಿರುವ ಕ್ರಿಯಾಪದಗಳು.

೨. मूषको बिलं विशति । कण्टकः (ಮುಳ್ಳು) पादं तुदति । (ನೋಯಿಸುತ್ತದೆ). ऋषिमार्गं दिशति । (ತೋರಿಸುತ್ತಾನೆ). ಇವು ಆರನೆಯ ಗಣದ ಧಾತುಗಳಿಂದಾಗಿರುವ ಕ್ರಿಯಾಪದಗಳು.

೩. दशरथः पुत्रं कुप्यति । बालो नृत्यति । धनं नश्यति । ಇವು ನಾಲ್ಕನೆಯ ಗಣದಿಂದಾಗಿರುವ ಕ್ರಿಯಾಪದಗಳು.

೪. वाल्मीकिः कथयति रामायणम् । बालो गणयति फलानि । अर्चकः पूजयति देवम् । ಇವು ಹತ್ತನೆಯ ಗಣದ ಧಾತುಗಳಿಂದಾದ ಕ್ರಿಯಾಪದಗಳು.

ಈ ಭಾಗದಲ್ಲಿ ನಾವು ಈ ನಾಲ್ಕು ಗಣಗಳ ಕ್ರಿಯಾಪದಗಳನ್ನೇ ಮುಖ್ಯವಾಗಿ ಬಳಸುವೆವು.

೧೫. ಮೇಲೆ ನಾವು ಉದಾಹರಿಸಿರುವ ಕ್ರಿಯಾಪದಗಳೆಲ್ಲ ವರ್ತಮಾನಕಾಲ (Present Tense) ದವು. ಇವುಗಳನ್ನು ಹೀಗೆ ಕನ್ನಡಿಸಬೇಕು : **नमति** - ನಮಸ್ಕರಿಸುತ್ತಾನೆ, ನಮಸ್ಕರಿಸುತ್ತಿದಾನೆ, **विशति** - ಹೊಗುತ್ತಾನೆ, ಹೋಗುತ್ತಿದಾನೆ ; **कुप्यति** - ಅಪ್ಪಿಕೊಳ್ಳುತ್ತಾನೆ, ಅಪ್ಪಿಕೊಳ್ಳುತ್ತಿದಾನೆ ; **कथयति** ಹೇಳುತ್ತಾನೆ, ಹೇಳುತ್ತಿದಾನೆ.

೧೬. ಸಂಸ್ಕೃತದಲ್ಲಿ ಕ್ರಿಯಾಪದಗಳಿಗೆ ಲಿಂಗಸೂಚಕಪ್ರತ್ಯಯಗಳಿರುವದಿಲ್ಲ. ಈ ವಾಕ್ಯಗಳನ್ನು ನೋಡಿ : **ऋषिर्मार्गं दिशति** - ಋಷಿಯು ದಾರಿಯನ್ನು ತೋರಿಸುತ್ತಾನೆ ; **ब्राह्मणी मार्गं दिशति** - ಬ್ರಾಹ್ಮಣಿಯು ದಾರಿಯನ್ನು ತೋರಿಸುತ್ತಾಳೆ ; **नदी मार्गं दिशति** - ನದಿಯು ದಾರಿಯನ್ನು ತೋರಿಸುತ್ತದೆ. ಆದ್ದರಿಂದ ಸಂದರ್ಭಕ್ಕೆ ತಕ್ಕಂತೆ ಕ್ರಿಯಾಪದವನ್ನು ಆಯಾ ಲಿಂಗದ ಶಬ್ದದಿಂದ ಕನ್ನಡಿಸಬೇಕಾಗುವದು.

೧೭. ಈ ಕೆಳಗಿನ ವಾಕ್ಯಗಳಲ್ಲಿ ಕ್ರಿಯಾಪದಗಳ ರೂಪಗಳನ್ನು ನೋಡಿ ಅವುಗಳ ಪ್ರತ್ಯಯಗಳನ್ನು ವಿಂಗಡಿಸೋಣ :

**अहं नारायणं नमामि । आवां नगरे वसावः । वयम् अनृतं न कथयामः । त्वं सत्यं वदसि । युवां नदीं विशथ । यूयं देवं पूजयथ । गुरुः कुप्यति । बालौ तत्र क्रीडतः । ते किं कथयन्ति ?**

**अस्मद्** ಶಬ್ದದ (ಅಹಮ್, ಆವಾಮ್, ವಯಮ್ ಎಂಬ) ಪ್ರಥಮಾವಿಭಕ್ತಿಗೆ ಹೊಂದುವ ಕ್ರಿಯಾಪದಗಳು **ಉತ್ತಮಪುರುಷ** (First Person) ; **युष्मद्** ಎಂಬುದರ (ತ್ವಮ್, ಯುವಾಮ್, ಯೂಯಮ್ ಎಂಬ) ಪ್ರಥಮಾವಿಭಕ್ತಿಗೆ ಹೊಂದುವ ಕ್ರಿಯಾಪದಗಳು **ಮಧ್ಯಮಪುರುಷ** (Second Person) ; ಎಲ್ಲಾ ನಾಮಗಳಿಗೂ **तद्** ಶಬ್ದದ (ಸಃ, ತೌ, ತೇ ; ಸಾ, ತೇ ತಾಃ ; ತತ್, ತೇ, ತಾನಿ ಎಂಬ) ರೂಪಗಳಿಗೂ ಹೊಂದುವ ರೂಪಗಳು **ಪ್ರಥಮಪುರುಷ** (Third Person).[1]

---

1. ಕನ್ನಡದಲ್ಲಿ ಪ್ರಥಮಪುರುಷ ಎಂಬುದನ್ನು ಇಂಗ್ಲಿಷಿನಲ್ಲಿ (Third Person) ಮೂರನೆಯ ಪುರುಷ ಎಂದು ಕರೆಯುತ್ತಾರೆ ; ಉತ್ತಮಪುರುಷವನ್ನು (First Person) ಮೊದಲನೆಯ ಪುರುಷ ಎನ್ನುವರು. ಇದನ್ನು ನೆನಪಿನಲ್ಲಿಡಬೇಕು.

೧೭. ಆಯಾ ಗಣದ ಧಾತುವಿಗೆ ಗಣಚಿಹ್ನೆಯು ಸೇರಿದಮೇಲೆಯೇ ಕ್ರಿಯಾಪದದ (ಆಖ್ಯಾತ) ಪ್ರತ್ಯಯವು ಸೇರುವದು. ಉದಾ :

नम् + अ + ति = नमति ; विश् + अ + ति = विशति ;

नृत् + य + ति = नृत्यति ; कथ् + अय + ति = कथयति ।

ಗಣಚಿಹ್ನೆಗೆ ವಿಕರಣ(ಪ್ರತ್ಯಯ) ಎಂದು ಹೆಸರು.

ವಿಶೇಷ : ವಿಕರಣಪ್ರತ್ಯಯದಿಂದ ಗಣವನ್ನು ಗೊತ್ತುಮಾಡಬಹುದು. ಆಖ್ಯಾತ ಪ್ರತ್ಯಯಗಳು ಮಾತ್ರ ಎಲ್ಲಾ ಗಣಕ್ಕೂ ಒಂದೇ ಆಗಿರುತ್ತವೆ.

೧೮. ವರ್ತಮಾನಕಾಲದ ಆಖ್ಯಾತಪ್ರತ್ಯಯಗಳು

| | ಪ್ರತ್ಯಯಗಳು | | | ಕ್ರಿಯಾರೂಪಗಳು | | |
|---|---|---|---|---|---|---|
| ಪ್ರಥಮ | ति | तस् | अन्ति | वदति | वदतः | वदन्ति |
| ಮಧ್ಯಮ | सि | थस् | थ | वदसि | वदथः | वदथ |
| ಉತ್ತಮ | मि | वस् | मस् | वदामि | वदावः | वदामः |

ವಿಶೇಷ : ಪ್ರತ್ಯಯದ ಕೊನೆಯ ಸಕಾರವು ವಿಸರ್ಗವಾಗಿದೆ ; ಉತ್ತಮಪುರುಷದ ನಕಾರ ಮಕಾರಗಳ ಹಿಂದಿನ ಸ್ವರವು ದೀರ್ಘವಾಗಿದೆ. 'ಅನ್ತಿ' ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪವಾಗಿದೆ.

೧೯. ಒಂದನೆಯ ಗಣ, ಆರನೆಯ ಗಣ - ಈ ಎರಡಕ್ಕೂ अ ಎಂಬ ವಿಕರಣವೇ ಸೇರುತ್ತದೆ. ಆದರೆ ಒಂದು ವೈಲಕ್ಷಣ್ಯವಿದೆ. ಉದಾಹರಣೆಗೆ बुध् - ತಿಳಿ (೧ನೆಯ ಗಣ). ಇದಕ್ಕೆ बोधति, बोधतः, बोधन्ति ಎಂಬಂತೆ ರೂಪಗಳಾಗುವವು. ಇಲ್ಲಿ ಧಾತುವಿನ ಉಕಾರಕ್ಕೆ ಓ ಬಂದಿದೆ. तुद् - ನೋಯಿಸು (೬ನೆಯ ಗಣ). ಇದಕ್ಕೆ तुदति, तुदतः, तुदन्ति ಎಂಬಂತೆ ರೂಪಗಳಾಗುವವು ; ಇಲ್ಲಿ ಉಕಾರಕ್ಕೆ ಓಕಾರವು ಬಂದಿಲ್ಲ.

ವಿಶೇಷ : ಒಂದನೆಯ ಗಣದ ಧಾತುವಿಗೆ ಕೊನೆಯಲ್ಲಿರುವ, ಅಥವಾ ಉಪಾಂತ್ಯದ (ಕೊನೆಯ ವರ್ಣದ ಹಿಂದಿನ) ಹ್ರಸ್ವಸ್ವರಗಳಾದ ಇ, ಉ, ಋ, ೡ ಗಳಿಗೆ ಏ, ಓ, ಅರ್, ಅಲ್ - ಹೀಗೆ ಗುಣವು ಆದೇಶವಾಗುವದು ; ಗುಣವಾದ ಮೇಲೆಯೇ ವಿಕರಣವು ಸೇರುವದು. ಆರನೆಯ ಗಣದ ಧಾತುವಿನಲ್ಲಿ ಈ ಮಾರ್ಪಾಡು ಆಗುವದಿಲ್ಲ.

೨೦. ಧಾತುವಿನ ಅಂತ್ಯಸ್ವರಕ್ಕೆ ಅಥವಾ ಉಪಾಂತ್ಯಹ್ರಸ್ವಸ್ವರಕ್ಕೆ ಗುಣವು ಆದೇಶವಾಗಿ ಬರುವದಕ್ಕೆ ಈ ವಾಕ್ಯಗಳಲ್ಲಿರುವ ಕ್ರಿಯಾಪದಗಳು ಉದಾಹರಣೆಗಳು.

**१. योधाः शत्रून् जयन्ति । २. तव पुत्रः शूरो भवति । ३. प्लवेन नदीं तरामः । ४. वयं तां भाषां न बोधामः । ५. सूदा भक्ष्याणि नयन्ति ।**

೧. ಯುದ್ಧಮಾಡುವವರು ಶತ್ರುಗಳನ್ನು ಸೋಲಿಸುತ್ತಾರೆ. ೨. ನಿನ್ನ ಮಗನು ಶೂರನಾಗುತ್ತಾನೆ. ೩. ತೆಪ್ಪದಿಂದ (ತೆಪ್ಪದ ಮೇಲೆ) ನದಿಯನ್ನು ದಾಟುತ್ತೇವೆ. ೪. ನಾವು ಆ ಭಾಷೆಯನ್ನು ಅರಿಯುವದಿಲ್ಲ (= ಅರಿಯೆವು, ನಮಗೆ ಆ ಭಾಷೆ ತಿಳಿಯದು). ೫. ಅಡಿಗೆಯವರು ಭಕ್ಷ್ಯಗಳನ್ನು ಒಯ್ಯುತ್ತಾರೆ.

ಇಲ್ಲಿ ಉಪಯೋಗಿಸಿರುವ ಧಾತುಗಳೆಲ್ಲ ಒಂದನೆಯ ಗಣದವು. ಇವುಗಳಲ್ಲಿ **१. जयन्ति ।** ಇಲ್ಲಿ ಧಾತು **जि** (ಗೆಲ್ಲು, ಸೋಲಿಸು ; ಅಂತ್ಯಹ್ರಸ್ವಸ್ವರಕ್ಕೆ ಗುಣವಾದ ಮೇಲೆ ವಿಕರಣವನ್ನು ಸೇರಿಸಿದರೆ जे + अ + अन्ति । ಹೀಗೆಯೇ **२. भवति ।** ಧಾತು **भू** (ಇರು, ಆಗು). ಅಂತ್ಯಸ್ವರಕ್ಕೆ ಗುಣವಾಗಿ ವಿಕರಣವನ್ನೂ ಕ್ರಿಯಾಪ್ರತ್ಯಯವನ್ನೂ ಸೇರಿಸಿದರೆ **भो + अ + ति ।**

**ಸಂಧಿನಿಯಮ : ಏ ಓಕಾರಗಳಿಗೆ ಮುಂದೆ ಸ್ವರವು ಬಂದರೆ ಅವಕ್ಕೆ ಕ್ರಮವಾಗಿ ಅಯ್, ಅವ್ - ಎಂಬ ಆದೇಶ.**

ಆದ್ದರಿಂದ **जे + अ + अन्ति = जय् + अ + अन्ति = जयन्ति** (ಅನ್ತಿ ಹಿಂದಿನ ಅಕಾರಕ್ಕೆ ಲೋಪ) ಹೀಗೆಯೇ **भो + अ + ति = भव् + अ + ति = भवति ।**

**३. बोधामः** ಇದಕ್ಕೆ ಧಾತು **बुध्** (ತಿಳಿ) ; ಉಪಾಂತ್ಯಹ್ರಸ್ವಸ್ವರಕ್ಕೆ ಗುಣ. **बोध् + अ + मः** (ಮಕಾರದ ಹಿಂದಿನ ಅಕ್ಕೆ ದೀರ್ಘವಾಗಿ) **बोधामः ।**

४. **तरामः ।** ಇದಕ್ಕೆ ಧಾತು **तृ** ; ಗುಣವಾಗಿ **तर् + अ + मः =** (ಮಕಾರದ ಹಿಂದಿನ ಅಕಾರಕ್ಕೆ ದೀರ್ಘ) **तरामः ।**

ಉತ್ತಮಪುರುಷರೂಪವಾದ ಮಕಾರಗಳ ಪ್ರತ್ಯಯದ ಹಿಂದಿನ ಸ್ವರಕ್ಕೆ ದೀರ್ಘವಾಗುವದೆಂದೂ ಅನ್ತಿ ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪವಾಗುವದೆಂದೂ ಹಿಂದೆ (೩೦. ೧೮) ಹೇಳಿರುವದನ್ನು ನೆನಪಿಡಬೇಕು.

೨೧. ಆರನೆಯ ಗಣದ ಧಾತುಗಳಿಗೆ ಒಂದನೆಯ ಗಣದ ಧಾತುಗಳಲ್ಲಿ ಆಗುವ ಗುಣಾದೇಶವಾಗದೆಯೇ ಪ್ರತ್ಯಯಗಳು ಸೇರುತ್ತವೆ. ಉದಾ :

विशति, विशतः, विशन्ति । विशसि, विशथः, विशथ । विशामि, विशावः, विशामः ।

तुदति, तुदतः, तुदन्ति । तुदसि, तुदथः, तुदथ । तुदामि, तुदावः, तुदामः ।

दिशति, दिशतः, दिशन्ति । दिशसि दिशथः, दिशथ । दिशामि, दिशावः, दिशामः ।

(ಇಲ್ಲಿಯೂ ವಕಾರ ಮಕಾರಗಳ ಹಿಂದಿನ ಅಕಾರಕ್ಕೆ ದೀರ್ಘವುಂಟು ; ಅನ್ತಿ ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪವೂ ಆಗಿವೆ. ಆದರೆ ವೇಶತಿ, ತೋದತಿ, ದೇಶತಿ - ಎಂಬಂತೆ ಗುಣಾದೇಶವಾಗಿರುವದಿಲ್ಲ.)

## ಅಭ್ಯಾಸ ೧೬

ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ ಕ್ರಿಯಾಪದಗಳನ್ನು ಮೂರುಪುರುಷ ಗಳಲ್ಲಿಯೂ ನಡೆಯಿಸಿರಿ. ೨೧ನೆಯ ಖಂಡದಲ್ಲಿ ಉಪಯೋಗಿಸಿರುವ ಕ್ರಿಯಾಪದಗಳಿಗೂ ಎಲ್ಲಾ ರೂಪಗಳನ್ನೂ ಬರೆಯಿರಿ.

१. मूषका बिलं विशन्ति । २. देव एव सर्वं सृजति । (ಸೃಷ್ಟಿಸುತ್ತಾನೆ.) ३. वृद्धो मार्गं दिशति । ४. व्याधयो मां तुदन्ति । (ರೋಗಗಳು ನನ್ನನ್ನು ನರಳಿಸುತ್ತವೆ).

೨೨. ಪ್ರಥಮಪುರುಷದ ಕ್ರಿಯಾಪದಗಳಿಗೆ **ಅಸ್ಮದ್, ಯುಷ್ಮದ್** - ಈ ಶಬ್ದಗಳನ್ನು ಬಿಟ್ಟು ಮಿಕ್ಕ ಯಾವ ಸರ್ವನಾಮದ ಅಥವಾ ನಾಮಪದದ ಪ್ರಥಮಾ ವಿಭಕ್ತಿಯನ್ನಾದರೂ ಉದ್ದೇಶ(Subject)ವಾಗಿ ಮಾಡಿಕೊಳ್ಳಬಹುದು. ಈ ಕೆಳಗಿನ ವಾಕ್ಯಗಳನ್ನು ನೋಡಿರಿ :

१. पञ्चभूतानि कः सृजति ? २. मांसं सर्वे न खादन्ति । ३. केचित् एवं वदन्ति । ४. मार्जारो मूषकान् खादति । ५. स कुत्र वसति ? ६. तत्र दीर्घाः सर्पाः सरन्ति । ७. चौरौ[1] वसुगुप्तस्य पेटिकां हरतः । ८. भवन्तौ किं धावतः ? ९. सा पायसं भक्षयति । १०. जातानि भूतानि ईश्वरेणैव जीवन्ति । ११. ते बालिके अत्र क्रीडतः । १२. तत् फलं आम्लं भवति । १३. तानि कस्य पुस्तकानि

1. ಚೋರ, ಚೌರ - ಈ ಎರಡಕ್ಕೂ ಕಳ್ಳ ಎಂದೇ ಅರ್ಥ.

भवन्ति ? १४. रामश्च लक्ष्मणश्च विश्वामित्रम् अनुसरतः । १५. तौ केन सह क्रीडतः ?

೧. ಐದು ಭೂತಗಳನ್ನು ಯಾವಾತನು ಸೃಷ್ಟಿಸುತ್ತಾನೆ ? ೨. ಮಾಂಸವನ್ನು ಎಲ್ಲರೂ ತಿನ್ನುವದಿಲ್ಲ. ೩. ಕೆಲವರು ಹೀಗೆಂದು ಹೇಳುತ್ತಾರೆ. ೪. ಬೆಕ್ಕು ಇಲಿಗಳನ್ನು ತಿನ್ನುತ್ತದೆ. ೫. ಅವನು ಎಲ್ಲಿ ವಾಸವಾಗಿದಾನೆ ? ೬. ಅಲ್ಲಿ ಉದ್ದನೆಯ ಹಾವುಗಳು ಹರಿದಾಡುತ್ತಿರುತ್ತವೆ. ೭. (ಇಬ್ಬರು) ಕಳ್ಳರು ವಸುಗುಪ್ತನ ಪೆಟ್ಟಿಗೆಯನ್ನು ಕದಿಯುತ್ತಿದಾರೆ.[1] ೮. ನೀವಿಬ್ಬರೂ[2] ಏತಕ್ಕೆ ಓಡುತ್ತಿದ್ದೀರಿ ? ೯. ಆಕೆ ಪಾಯಸವನ್ನು ತಿನ್ನುತ್ತಾಳೆ. ೧೦. ಹುಟ್ಟಿದ ಪ್ರಾಣಿಗಳು ಈಶ್ವರನಿಂದಲೇ ಬದುಕಿರುತ್ತವೆ. ೧೧. ಆ (ಇಬ್ಬರು) ಹುಡುಗಿಯರು ಅಲ್ಲಿ ಆಡುತ್ತಾರೆ. ೧೨. ಆ ಹಣ್ಣು ಹುಳಿಯಾಗಿರುತ್ತದೆ. ೧೩. ಅವು ಯಾರ ಪುಸ್ತಕಗಳಾಗಿವೆ ? ೧೪. ರಾಮನೂ ಲಕ್ಷ್ಮಣನೂ ವಿಶ್ವಾಮಿತ್ರನನ್ನು ಹಿಂಬಾಲಿಸುತ್ತಾರೆ. ೧೫. ಅವರಿಬ್ಬರೂ ಯಾವನೊಡನೆ ಆಡುತ್ತಾರೆ ?

## ಅಭ್ಯಾಸ ೧೭

೧೬ನೆಯ ಅಭ್ಯಾಸದಲ್ಲಿರುವ ವಾಕ್ಯಗಳಲ್ಲಿ ಕಾಣುವ ಕ್ರಿಯಾಪದಗಳ ಏಕವಚನವನ್ನು ಬಹುವಚನವಾಗಿಯೂ, ಬಹುವಚನವನ್ನು ಏಕವಚನವನ್ನಾಗಿಯೂ ಕ್ರಿಯಾಪದಕ್ಕೆ ತಕ್ಕಂತೆ ಆಯಾ ಉದ್ದೇಶದ ವಚನವನ್ನೂ ಬದಲಾಯಿಸಿರಿ. ಹೀಗೆ ಹೊಸದಾಗಿ ಸಿದ್ಧವಾದ ವಾಕ್ಯಗಳನ್ನು ಕನ್ನಡಿಸಿರಿ.

## ಅಭ್ಯಾಸ ೧೮

ಇಲ್ಲಿ ಕಂಸದಲ್ಲಿ ಕೊಟ್ಟಿರುವ ಧಾತುಗಳಿಂದಾದ ಕ್ರಿಯಾಪದವನ್ನುಪಯೋಗಿಸಿ ವಾಕ್ಯಗಳನ್ನು ಸಂಸ್ಕೃತಕ್ಕೆ ತಿರುಗಿಸಿ. ಬೇಕಾದ ಸಂಸ್ಕೃತಶಬ್ದಗಳು ಈ ಪಾಠದಲ್ಲಿಯೇ ಸಿಕ್ಕುತ್ತವೆ.

೧. ಕೋತಿ ಹಣ್ಣನ್ನು ತಿನ್ನುತ್ತದೆ (खाद्). ೨. ಅವರಿಬ್ಬರೂ ಎಲ್ಲಿ ವಾಸಮಾಡುತ್ತಾರೆ ? (वस्) ೩. ಸೀತೆ ರಾಮನನ್ನು ನಮಸ್ಕರಿಸುತ್ತಾಳೆ (नम्) ೪. ಸಿಪಾಯಿಗಳು (भटाः) ನದಿಯನ್ನು ದಾಟುತ್ತಾರೆ (तॄ). ೫. ಮುಳ್ಳುಗಳು ಕಾಲನ್ನು ನೋಯಿಸುತ್ತವೆ (तुद्). ೬. ನೀವು (भवन्तः) ಯಾವಾಗಲೂ ಕುಣಿದಾಡುತ್ತಿರುತ್ತೀರಿ (नृत्).

---

1. ಕಳು ಧಾತುವಾದರೂ ಮೈಸೂರಿನ ಈ ಭಾಗದಲ್ಲಿ 'ಕದಿ' ಎಂದೇ ಪ್ರಯೋಗಿಸುತ್ತಾರೆ.

2. ಭವತ್ ಎಂಬ ಶಬ್ದಕ್ಕೆ ನೀನು ಎಂದೇ ಅರ್ಥವಾದರೂ ಅದಕ್ಕೆ ಪ್ರಥಮಪುರುಷದ ಕ್ರಿಯಾಪದವೇ ಬೇಕು (ಪಾ. ೩೫).

೨೩. ಸಂಸ್ಕೃತದಲ್ಲಿ ಕೆಲವು ಧಾತುಗಳಿಗೆ **ಪರಸ್ಮೈಪದದ**, ಕೆಲವು ಧಾತುಗಳಿಗೆ **ಆತ್ಮನೇಪದದ**, ಮತ್ತೆ ಕೆಲವಕ್ಕೆ ಈ ಎರಡೂ ಪದಗಳ ಪ್ರತ್ಯಯಗಳು ಸೇರುತ್ತವೆ. ಉದಾಹರಣೆಗೆ ಇಲ್ಲಿ ನೋಡಿ :

ಪರಸ್ಮೈಪದ ನಮ್ - ನಮಸ್ಕರಿಸು — ಆತ್ಮನೇಪದ ವನ್ದ್ - ವಂದಿಸು

| | | | | | | |
|---|---|---|---|---|---|---|
| ಪ್ರ. | नमति | नमतः | नमन्ति | वन्दते | वन्देते | वन्दन्ते |
| ಮ. | नमसि | नमथः | नमथ | वन्दसे | वन्देथे | वन्दध्वे |
| ಉ. | नमामि | नमावः | नमामः | वन्दे | वन्दावहे | वन्दामहे |

ವಿಶೇಷ : ನಮ್ ಧಾತುವಿನಂತೆ ನಡೆಯುವ ಧಾತುಗಳು **ಪರಸ್ಮೈಪದಿಗಳು**, ವನ್ದ್ ಧಾತುವಿನಂತೆ ನಡೆಯುವವು **ಆತ್ಮನೇಪದಿಗಳು** ; ಎರಡೂ ವಿಧದಲ್ಲಿ ನಡೆಯುವವು **ಉಭಯ ಪದಿಗಳು**. ಯಾವ ಧಾತುವಿಗೆ ಯಾವ ಪದದ ಪ್ರತ್ಯಯಗಳು ಸೇರುವವೆಂಬುದನ್ನು ಪ್ರಯೋಗದಿಂದಲೂ ವ್ಯಾಕರಣದಿಂದಲೂ ತಿಳಿದುಕೊಳ್ಳಬೇಕು.

## ಪ್ರತ್ಯಯಗಳು

ಪರಸ್ಮೈ : ति तस् अन्ति । सि थस् थ । मि वस् मस् ।

ಆತ್ಮನೇ : ते इते अन्ते । से इथे ध्वे । इ वहे महे ।

ವಿಶೇಷ : ಪರಸ್ಮೈಪದಕ್ಕೆ (೩೦. ೧೮) ಹೇಳಿರುವಂತೆ ಆತ್ಮನೇಪದಕ್ಕೂ ವಿಕರಣವು ಸೇರುತ್ತದೆ ; ಒಂದನೆಯ ಗಣದ ಧಾತುಗಳಿಗೆ ಅಂತ್ಯಸ್ವರಕ್ಕೂ ಉಪಾಂತ್ಯಹ್ರಸ್ವಸ್ವರಕ್ಕೂ ಗುಣವಾಗುತ್ತದೆ ; ವಮಕಾರಾದಿಪ್ರತ್ಯಯಗಳ ಹಿಂದಿನ ಅಕಾರಕ್ಕೆ ದೀರ್ಘವಾಗುತ್ತದೆ ; ಅನ್ತೇ ಪ್ರತ್ಯಯದ ಹಿಂದಿನ ಅಕಾರಕ್ಕೆ ಲೋಪ. ಉದಾ. ವನ್ದ್ + ಅ + ಇತೇ = ವನ್ದೇತೇ ; ವನ್ದ್ + ಅ + ಇಥೇ = ವನ್ದೇಥೇ ; ವನ್ದ್ + ಅ + ಇ = ವನ್ದೇ. ಇಲ್ಲೆಲ್ಲ ಅಕಾರವೂ ಇಕಾರವೂ ಸೇರಿ ಗುಣವಾಗಿ ಏಕಾರವಾಗಿದೆ.

## ಅಭ್ಯಾಸ ೧೯

**ईक्ष्** - ನೋಡು ; **कम्प्** - ನಡುಗು ; **भाष्** - ಮಾತಾಡು ; **लभ्** - ಪಡೆ ; **वृत्** (**वर्त्**) - ಇರು ; **मुद्** (**मोद्**) - ಆನಂದದಿಂದಿರು ; **शुभ्** (**शोभ्**) - ಚೆನ್ನಾಗಿರು, ಒಪ್ಪು ; **शिक्ष्** - ಕಲಿ - ಈ ಒಂದನೆಯ ಗಣದ ಧಾತುಗಳನ್ನು ವಾಕ್ಯಗಳಲ್ಲಿ ಉಪಯೋಗಿಸಿದೆ. (ಕಂಸದಲ್ಲಿಟ್ಟಿರುವದು ಗುಣವಾದ ರೂಪ). ವಾಕ್ಯಗಳನ್ನು ಕನ್ನಡಿಸಿರಿ :

१. वानराः शीतेन कम्पन्ते । २. बालिका आकाशे चन्द्रं ईक्षन्ते । ३. त्वं धनेन धर्मं लभसे । ४. मम पुस्तकानि कुत्र वर्तन्ते ? ५. मित्र, त्वं साधु (ಸರಿಯಾಗಿ, ಚೆನ್ನಾಗಿ) भाषसे । ६. पापाः नरकं गच्छन्ति ; पुण्याः स्वर्गे मोदन्ते । ७. भूषणं तव शोभते । ८. त्वं हिन्दीं शिक्षसे, अहं संस्कृतं शिक्षे ॥

## ೪. ಧಾತುಗಳೂ ಕ್ರಿಯಾಪದಗಳೂ (ಮುಂದುವರಿದದ್ದು)

೨೪. ನಾಲ್ಕು, ಆರು - ಈ ಗಣಗಳ ಕೆಲವು ಧಾತುಗಳನ್ನೂ ಅವುಗಳ ಪ್ರಥಮಪುರುಷೈಕವಚನವನ್ನೂ ಈ ಕೆಳಗೆ ಕೊಟ್ಟಿರುತ್ತೇವೆ. ಅವು ಪರಸ್ಮೈಪದಿಗಳೋ ಆತ್ಮನೇಪದಿಗಳೋ, ಕ್ರಿಯಾಪದದ ರೂಪದಿಂದ ಗೊತ್ತುಮಾಡಿಕೊಳ್ಳಿ :-

| ೪ನೆಯ ಗಣ | ೬ನೆಯ ಗಣ |
|---|---|
| पुष् (पुष्यति) - ಪೋಷಿಸು | लिख् (लिखति) - ಬರೆ |
| तुष् (तुष्यति) - ತೃಪ್ತನಾಗು | कृष् (कृषति, कृषते) - ಉಳು |
| कुप् (कुप्यति) - ಸಿಟ್ಟಾಗು | स्पृश् (स्पृशति) - ಮುಟ್ಟು |
| विद् (विद्यते) - ಇರು | मृ (म्रियते) - ಸಾಯು |
| युध् (युध्यते) - ಕಾದಾಡು | क्षिप् (क्षिपति, क्षिपते) - ಎಸೆ |
| मन् (मन्यते) - ತಿಳಿ, ಅಭಿಪ್ರಾಯಪಡು | नू (नुवति) - ಹೊಗಳು |

**ವಿಶೇಷ** : ಆರನೆಯ ಗಣದ ಧಾತುವಿನ ಅಂತ್ಯದಲ್ಲಿರುವ ಇ ಉಕಾರ (ಹ್ರಸ್ವ ಅಥವಾ ದೀರ್ಘ)ಗಳಿಗೆ ಕ್ರಮವಾಗಿ ಇಯ್ ಉವ್ ಎಂಬಾದೇಶಗಳು ಬರುತ್ತವೆ ; ಋಕಾರಕ್ಕೆ ರಿ ಬಂದು ವಿಕರಣವು ಸೇರುವಾಗ 'ರಿಯ್' ಎಂದಾಗುತ್ತದೆ.

### ಅಭ್ಯಾಸ ೨೦

ಈ ವಾಕ್ಯಗಳನ್ನು ಕನ್ನಡಿಸಿರಿ :

१. क्षीरं शिशुं पुष्यति । २. लिपिकरः (ಬರೆಯುವ ಕೆಲಸದವ, ಮುನಷಿ) किं लिखति ? ३. शूरा भटा धैर्येण युध्यन्ते । ४. दुष्टो बालः कुक्कुरं प्रति

(ನಾಯಿಯ ಕಡೆಗೆ) पाषाणं (ಕಲ್ಲನ್ನು) क्षिपति । ५. अत्र किं मन्यते भवान् ? ६. गुरवः कुप्यन्ति, वाक्यानाम् अनुवादं (ಭಾಷಾಂತರವನ್ನು) लिखामः । ७. अस्मिन् देशे कदा क्षेत्राणि (ಹೊಲಗದ್ದೆಗಳನ್ನು) कृषन्ति ? ८. गृहे तण्डुला[1] (ಅಕ್ಕಿ) न विद्यन्ते, ओदनं (ಅನ್ನ) कथं भवति ? ९. दरिद्रोऽल्पेनापि तुष्यति । १०. किं पापाः शीघ्रं म्रियन्ते ? ११. भक्ता देवं नुवन्ति ॥

೨೫. ಹತ್ತನೆಯ ಗಣದ ಧಾತುಗಳಿಗೆ ಅಯ ಎಂಬ ವಿಕರಣವು ಬರುತ್ತದೆ. ಅವು ಸಾಧಾರಣವಾಗಿ ಪರಸ್ಮೈಪದ, ಆತ್ಮನೇಪದ - ಈ ಎರಡು ಪ್ರತ್ಯಯಗಳನ್ನೂ ಹೊಂದುತ್ತವೆ. ಈ ಕೆಳಗಿನ ಧಾತುಗಳಲ್ಲಿ ವಿಕರಣವು ಸೇರುವ ಮುನ್ನ ಆಗಿರುವ ಮಾರ್ಪಾಡುಗಳನ್ನು ಲಕ್ಷಿಸಿರಿ :-

೧೦ನೆಯ ಗಣ

चुर् (चोरयति) - ಕಳವುಮಾಡು
घुष् (घोषयति) - ಸಾರುವಂತೆ ಮಾಡು, ಡಂಗುರ ಹೊಡೆಯಿಸು
तुल् (तोलयति) - ತೂಕಮಾಡು
कृत् (कीर्तयति) - ಕೂಗಿ ಹೇಳು
तड् (ताडयति) - ಹೊಡೆ
रच् (रचयति) - ರಚಿಸು
भक्ष् (भक्षयति) - ತಿನ್ನು
चित् (चेतयते) - ಅರಿ, ತಿಳಿ
धृ (धारयति) - ಧರಿಸು
स्पृह् (स्पृहयते) - ಆಸೆಪಡು
भू (भावयति) - ಭಾವಿಸು, ಮಿಶ್ರಮಾಡು

**ವಿಶೇಷ** : (1) ಹತ್ತನೆಯ ಗಣದಲ್ಲಿ ಕೆಲವು ಧಾತುಗಳನ್ನು ಬಿಟ್ಟು ಮಿಕ್ಕವುಗಳ ಉಪಾಂತ್ಯಹ್ರಸ್ವಸ್ವರಕ್ಕೆ (ಒಂದನೆಯ ಗಣದಲ್ಲಾಗುವಂತೆ) ಗುಣ ; ಅಂತ್ಯಸ್ವರಕ್ಕೆ ಉಪಾಂತ್ಯ ಅಕಾರಕ್ಕೆ ವೃದ್ಧಿ - ಎಂದರೆ ಅಕಾರಕ್ಕೆ ಆಕಾರ, ಈಕಾರಗಳಿಗೆ ಐ, ಉ ಊಗಳಿಗೆ ಔ, ಋಕಾರಕ್ಕೆ ಆರ್.

(2) ಧಾತುವಿನ ಉಪಾಂತ್ಯದಲ್ಲಿರುವ ಅಥವಾ ಅಂತ್ಯದಲ್ಲಿರುವ ೠಕಾರಕ್ಕೆ ಗುಣ ವಾಗಲಿ ವೃದ್ಧಿಯಾಗಲಿ ಆಗದೆ ಇರುವಾಗ ಅದು ಇರ್ ಆಗುವದು ; ಆದರೆ ಆ ೠಕಾರ ಓಷ್ಠವರ್ಣಕ್ಕೆ ಅಥವಾ ವಕಾರಕ್ಕೆ ಮುಂದಿದ್ದರೆ ಅದು ಉರ್ ಆಗುವದು ; ವ್ಯಂಜನದ ಹಿಂದಿರುವ ಇರ್ ಅಥವಾ ಉರ್ ಎಂಬುದಕ್ಕೆ ಈರ್, ಊರ್ ಎಂಬ ಆದೇಶವಾಗುತ್ತದೆ.

---

1. ಧಾನ್ಯದ ಹೆಸರುಗಳು ಬಹುವಚನದಲ್ಲಿರಬೇಕು.

ಉದಾ : जृ - जीर्यति (ಹಳತಾಗುತ್ತದೆ, ಮುಪ್ಪಾಗುತ್ತದೆ) ; कृत् - कीर्तयति (ಗಟ್ಟಿಯಾಗಿ ಹೇಳುತ್ತಾನೆ). पृ (ತುಂಬು) - पिपुरति, पिपूर्मः[1] ।

## ಅಭ್ಯಾಸ ೨೧

ಕನ್ನಡಿಸಿರಿ :

१. मालाकारो (ಹೂವಾಡಿಗ) रम्यां मालां रचयति । २. मूषकाः मोदकान् (ಕಡುಬುಗಳನ್ನು) भक्षयन्ति । ३. निद्रायां जना न चेतयन्ते । ४. भटो लोहकवचं (ಉಕ್ಕಿನ ಕವಚವನ್ನು) धारयति । ५. वैश्यो धनाय[2] स्पृहयते ॥

೨೬. ಸಾಮಾನ್ಯವಾಗಿ ಯಾವ ಗಣದ ಧಾತುಗಳಿಗಾದರೂ 'ಅಯ' ಪ್ರತ್ಯಯವನ್ನು ಸೇರಿಸಿದರೆ **ಪ್ರೇರಣಾರ್ಥಕ** (Causative) ಧಾತುವಾಗುತ್ತದೆ ; ಹತ್ತನೆಯ ಗಣಕ್ಕೆ ಮೂಲಕ್ರಿಯಾಪದದ ರೂಪವೇ ಪ್ರೇರಣಾರ್ಥಕವಾಗುತ್ತದೆ ; ಮತ್ತೆ 'ಅಯ' ಪ್ರತ್ಯಯವನ್ನು ಸೇರಿಸಬೇಕಾದದ್ದಿಲ್ಲ. ಮುಂದಿನ ಅಭ್ಯಾಸದಲ್ಲಿ ಉದಾಹರಣೆಗಳಿವೆ.

## ಅಭ್ಯಾಸ ೨೨

ಕನ್ನಡಿಸಿರಿ :

१. छात्राः पठन्ति, गुरुस्तान् पाठयति (ಓದಿಸು) । २. सूदः पचति (ಅಡಿಗೆಮಾಡು) ; भीमः सूदैरोदनं (ಅನ್ನವನ್ನು) पाचयति (ಅಡಿಗೆ ಮಾಡಿಸು) । ३. धनं कालेन (ಕಾಲಾನುಕಾಲಕ್ಕೆ) नश्यति, लुब्धस्य (ಜಿಪುಣನ) धनं दैवं (ಅದೃಷ್ಟವು) नाशयति (ನಾಶಗೊಳಿಸು) । ४. बालको लिखति, गुरुस्तं लेखयति (ಬರೆಯಿಸುತ್ತಾನೆ) । ५. कौसल्या पायसं भक्षयति ; वसिष्ठस्तया पायसं भक्षयति ॥

---

1. ಇದು ಮೂರನೆಯ ಗಣದ ಧಾತು. ಈ ಭಾಗದಲ್ಲಿ ಇದನ್ನು ಉಪಯೋಗಿಸಿಲ್ಲ ; ಉದಾಹರಣೆಗೆಂದು ಇಲ್ಲಿ ಕೊಟ್ಟಿದೆ.

2. ಏತಕ್ಕೆ ಆಸೆಪಡುವರೋ ಅದರ ಹೆಸರಿಗೆ ಸಂಸ್ಕೃತದಲ್ಲಿ ಚತುರ್ಥೀವಿಭಕ್ತಿ ಬೇಕಾಗುವದು.

೨೬. ಪುನರಾವೃತ್ತಿಗಾಗಿ ಇಲ್ಲಿ ನಾಲ್ಕು ಗುಣಗಳ ಧಾತುಗಳ ಕ್ರಿಯಾಪದದ ರೂಪಗಳನ್ನು ಕೊಟ್ಟಿರುತ್ತದೆ.

ಪರಸ್ಮೈಪದ ವರ್ತಮಾನ ಆತ್ಮನೇಪದ

| ೧. ಬುಧ್ - ತಿಳಿ | | | ೧. ಸ್ಪನ್ದ್ - ಅಲುಗಾಡು | | |
|---|---|---|---|---|---|
| बोधति | बोधतः | बोधन्ति | स्पन्दते | स्पन्देते | स्पन्दन्ते |
| बोधसि | बोधथः | बोधथ | स्पन्दसे | स्पन्देथे | स्पन्दध्वे |
| बोधामि | बोधावः | बोधामः | स्पन्दे | स्पन्दावहे | स्पन्दामहे |
| **೪. ಕುಪ್ - ಸಿಟ್ಟಾಗು** | | | **೪. ವಿದ್ - ಇರು** | | |
| कुप्यति | कुप्यतः | कुप्यन्ति | विद्यते | विद्येते | विद्यन्ते |
| कुप्यसि | कुप्यथः | कुप्यथ | विद्यसे | विद्येथे | विद्यध्वे |
| कुप्यामि | कुप्यावः | कुप्यामः | विद्ये | विद्यावहे | विद्यामहे |
| **೬. ಸ್ಫುಟ್ - ಅರಳು** | | | **೬. ಜುಷ್ - ಸೇವಿಸು** | | |
| स्फुटति | स्फुटतः | स्फुटन्ति | जुषते | जुषेते | जुषन्ते |
| स्फुटसि | स्फुटथः | स्फुटथ | जुषसे | जुषेथे | जुषध्वे |
| स्फुटामि | स्फुटावः | स्फुटामः | जुषे | जुषावहे | जुषामहे |
| **೧೦. ಕ್ಷಾಲ್ - ತೊಳೆ** | | | **೧೦. ಅರ್ಥ್ - ಬೇಡು** | | |
| क्षालयति | क्षालयतः | क्षालयन्ति | अर्थयते | अर्थयेते | अर्थयन्ते |
| क्षालयसि | क्षालयथः | क्षालयथ | अर्थयसे | अर्थयेथे | अर्थयध्वे |
| क्षालयामि | क्षालयावः | क्षालयामः | अर्थये | अर्थयावहे | अर्थयामहे |

## ಅಭ್ಯಾಸ ೨೩

लिखामि, दिशति, भावयन्ति, विशति, मोदेथे, विद्यते, शोभते नाशयन्ति - ಈ ಮಾತುಗಳನ್ನು ಕೆಳಗಿನ ವಾಕ್ಯಗಳಲ್ಲಿ ಸ್ಥಲಬಿಟ್ಟಿರುವ ಕಡೆಯಲ್ಲಿ ಅರ್ಥವಾಗುವಂತೆ ಸೇರಿಸಿ ಬರೆಯಿರಿ :

१. भूपतिः पत्तनं .... । २. वृद्धो मार्गं .... । ३. मुनयोऽर्थम्

अनर्थं .... । ४. मित्राय कुशलपत्रं .... । ५. गृहे किं किं .... ? ६. गिरिर्वृक्षैः .... । ७. युवां स्वर्गे सुखेन .... । ८. भटाः शत्रूणां सैन्यं .... ॥

## ಅಭ್ಯಾಸ ೨೪

ಈ ವಾಕ್ಯಗಳನ್ನು, ಕಂಸದೊಳಗಿಟ್ಟ ಶಬ್ದಗಳ ಯೋಗ್ಯ ವಿಭಕ್ತಿವಚನಗಳನ್ನು ಉಪಯೋಗಿಸಿಕೊಂಡು, ಪೂರ್ಣಮಾಡಿರಿ :-

१. रामम् आश्रमे (ऋषि) पूजयन्ति । २. वयं (धेनु) क्षीरं लभामहे । ३. यूयं कदा (पाणि) पादौ च क्षालयथ ? ४. चौरो रक्षापुरुषेण (रज्जु) बद्धः (ಕಟ್ಟಲ್ಪಟ್ಟನು), (लगुड) ताडितश्च (ಹೊಡೆಯಲ್ಪಟ್ಟನು) । ५. सत्राजितः स्यमन्तकेन (मणि) शोभते । ६. साधवः (शत्रु), मित्रेषु, (बन्धु) च समा भवन्ति ॥

## ೫. ಕೆಲವು ಸ್ವರಸಂಧಿಗಳು

೨೮. ಈ ಕೆಳಗೆ ಕೊಟ್ಟಿರುವ ಶ್ಲೋಕದಲ್ಲಿರುವ ಪದಗಳನ್ನು ವಿಂಗಡಿಸೋಣ :-

रोगा हरन्ति सततं प्रबलाश्शरीरम्
कामादयोऽप्यनुदिनं प्रदहन्ति चित्तम् ।
मृत्युश्च नृत्यति सदा कलयन् दिनानि
तस्मात्त्वमेव शरणं मम दीनबन्धो ॥

### ಪದವಿಭಾಗ

रोगाः हरन्ति, सततम् (ಅ) प्रबलाः, शरीरम् । कामादयः, अपि (ಅ) अनुदिनम् (ಅ), प्रदहन्ति, चित्तम् । मृत्युः, च (ಅ), नृत्यति, सदा (ಅ), कलयन्, दिनानि । तस्मात्, त्वम्, एव (ಅ), शरणम्, मम, दीनबन्धो ॥

ಪ್ರಕೃತಿಪ್ರತ್ಯಯಗಳಿಗೆ ಅಥವಾ ಪದಗಳಿಗೆ ಒಂದಕ್ಕೊಂದರ ಸೇರುವೆಯಾಗುವಾಗ ಲೋಪ (ವರ್ಣಗಳು ಇಲ್ಲವಾಗಿಬಿಡುವದು), ಆಗಮ (ವರ್ಣವು ಬಂದು

ಸೇರುವದು), ಆದೇಶ (ಇರುವ ವರ್ಣದ ಸ್ಥಾನದಲ್ಲಿ ಬೇರೆಯ ವರ್ಣವು ಬರುವದು) - ಇವು ಸಂಧಿ. ಈ ವಿಷಯದಲ್ಲಿ ಒಂದು ಶ್ಲೋಕವುಂಟು :

**ಸಂಹಿತೈಕಪದೇ ನಿತ್ಯಾ, ನಿತ್ಯಾ ಧಾತೂಪಸರ್ಗಯೋಃ ।**
**ನಿತ್ಯಾ ಸಮಾಸೇ ವಾಕ್ಯೇ ತು ಸಾ ವಿವಕ್ಷಾಮಪೇಕ್ಷತೇ ॥**

[ಸಾಮಾನ್ಯವಾಗಿ ವಾಕ್ಯದಲ್ಲಿ ವಿವಕ್ಷೆಯಂತೆ (ಮಾತನಾಡುವವರ ಅಭಿಪ್ರಾಯಕ್ಕೆ ತಕ್ಕಂತೆ) ಸಂಧಿಕಾರ್ಯವು ಆಗಬಹುದು. ಅದು ಧಾತುಗಳಿಗೂ ಉಪಸರ್ಗ (ಪ್ರ, ಪರಾ ಮುಂತಾದವು) ಗಳಿಗೂ ನಿತ್ಯ, ಆಗಲೇಬೇಕು ; ಉದಾಹರಣೆ : **ಅಧ್ಯಸ್ಯತಿ**. (ಇಲ್ಲಿ 'ಅಧಿ' ಎಂದು ಬಿಡಿಸುವದಕ್ಕೆ ಆಗುವದಿಲ್ಲ). ಸಮಾಸದಲ್ಲಿ (ಎರಡು ಅಥವಾ ಹೆಚ್ಚು ಪದಗಳು ಸೇರಿ ಒಂದೇ ಪದವಾಗಿರುವಲ್ಲಿ) ನಿತ್ಯ, ಸಂಧಿಯಾಗಲೇಬೇಕು ; ಉದಾ : **ದೇಹೇನ್ದ್ರಿಯಾಣಿ** ('ದೇಹ ಇನ್ದ್ರಿಯಾಣಿ' ಎಂದು ಬಿಡಿಸುವದಕ್ಕೆ ಆಗುವದಿಲ್ಲ). ಅದು ಒಂದೇ ಪದದಲ್ಲಿ (ಪ್ರಕೃತಿ ಪ್ರತ್ಯಯಗಳು ಸೇರುವಾಗ) ನಿತ್ಯ, ಆಗಲೇಬೇಕು ; ಉದಾ : **ರಾಮಃ** (ಇಲ್ಲಿ 'ರಾಮ ಅಸ್' ಎಂದಾಗುವದೇ ಇಲ್ಲ) ; **ದಹನ್ತಿ** (ಇಲ್ಲಿ 'ದಹ ಅನ್ತಿ' ಎಂದಾಗುವದೇ ಇಲ್ಲ).]

ಯಾವದಾದರೊಂದು ಶ್ಲೋಕದಲ್ಲಿ ಪದವಿಭಾಗವನ್ನು ಮಾಡುವಾಗ ನಾಮ ಪದ, ಕ್ರಿಯಾಪದ, ಅವ್ಯಯ - ಇವುಗಳನ್ನು ಪೂರ್ಣವಾಗಿ ವಿಂಗಡಿಸಿ ತೋರಿಸ ಬೇಕು. ಮೇಲೆ ನಾವು ಕೊಟ್ಟಿರುವ ಉದಾಹರಣೆಯಲ್ಲಿ ಬಿಡಿಸಿ ತೋರಿಸಿದೆ ; ಒಂದು ಪದದ ಮುಂದೆ (ಅ) ಎಂದಿದ್ದರೆ ಅದು ಅವ್ಯಯವೆಂದರ್ಥ.

ಹಿಂದೆ ಉದಾಹರಿಸಿರುವ ಶ್ಲೋಕದಲ್ಲಿ -

(೧) ರೋಗಾಃ ಹರನ್ತಿ = ರೋಗಾ ಹರನ್ತಿ ; (೨) ಪ್ರಬಲಾಃ ಶರೀರಮ್ = ಪ್ರಬಲಾಶ್ಶರೀರಮ್ ; (೩) ಕಾಮಾದಯಃ ಅಪಿ = ಕಾಮಾದಯೋಽಪಿ ; (೪) ಮೃತ್ಯುಃ ಚ = ಮೃತ್ಯುಶ್ಚ - ಇವೆಲ್ಲ ವಿಸರ್ಗಸಂಧಿಗಳು. (ಇವನ್ನು ೧ನೆಯ ಪಾಠದಲ್ಲಿ ವಿವರಿಸಲಾಗಿದೆ). ಮಿಕ್ಕ ಸಂಧಿಕಾರ್ಯಗಳನ್ನು[1] ಮುಂದೆ ವಿವರಿಸಲಾಗುವದು.

## ಸವರ್ಣದೀರ್ಘಸಂಧಿ

೨೯. ಇಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಸ್ವರಸಂಧಿಯಾಗಿರುವ ಕಡೆಗಳಲ್ಲಿ ಅಲ್ಲಲ್ಲಿ ಬಿಡಿಸಿದ ಪದಗಳನ್ನು ಕಂಸದಲ್ಲಿ ಇಟ್ಟಿದೆ. ಅರ್ಥವನ್ನು ಮೊದಲು ಊಹಿಸಿ ಆಮೇಲೆ ಕನ್ನಡದ ಅನುವಾದವನ್ನು ನೋಡಿ :

---

1. ಈ ಭಾಗದಲ್ಲಿ ಆದಷ್ಟುಮಟ್ಟಿಗೂ ಸಂಧಿಯನ್ನು ಬಿಡಿಸಿಯೇ ವಾಕ್ಯಗಳನ್ನು ಬರೆದಿದೆಯಾದರೂ ನಿತ್ಯವಾಗಿ ಸಂಧಿಯಾಗಲೇಬೇಕಾದ ಸ್ಥಳಗಳಲ್ಲಿ ಸಂಧಿಬಿಡಿಸುವ ಬಗೆಯನ್ನು ಓದುಗರು ತಿಳಿದುಕೊಂಡಿರಬೇಕು.

१. अत्रान्तरे ( = अत्र अन्तरे) कश्चित् तत्राऽऽगतः ( = तत्र आगतः) । २. तदाऽस्य ( = तदा अस्य) मित्रमपि[1] ( = मित्रम् अपि) प्रीत्याऽऽगतम् ( = प्रीत्या आगतम्) । ३. अस्तीश्वरोऽतीव ( = अस्ति ईश्वरः अति इव) दयालुः[2] । ४. सर्वेषामपि शङ्करीश्वरी ( = शङ्करी ईश्वरी) । ५. नदीयं ( = नदी इयं) गभीरा । ६. कृषीवलानां बहूपकरोति ( = बहु उपकरोति) साधुर्वसुगुप्तः ( = साधुः वसुगुप्तः) । ७. हन्तॄणं ( = हन्तृ ऋणं) सर्वस्य । ८. रामस्य तूर्मिका ( = तु ऊर्मिका) बहुमूल्या ॥

೧. ಈ ನಡುವೆ ಯಾವನೋ ಒಬ್ಬನು ಅಲ್ಲಿಗೆ ಬಂದನು. ೨. ಆಗ ಇವನ ಮಿತ್ರನೂ ಪ್ರೀತಿಯಿಂದ ಬಂದನು. ೩. ಬಹಳ ದಯಾಳುವಾದ ಈಶ್ವರನು ಇದಾನೆ. ೪. ಎಲ್ಲರಿಗೂ ಶಂಕರಿಯು ಈಶ್ವರಿಯು. ೫. ಈ ನದಿ ಆಳ. ೬. ಸಾಹುಕಾರ ವಸುಗುಪ್ತನು ಬೇಸಾಯಗಾರರಿಗೆ ಬಹಳ ಉಪಕಾರಮಾಡುತ್ತಾನೆ. ೭. ಸಾಲವು ಪ್ರತಿಯೊಬ್ಬನನ್ನೂ ಕೊಲ್ಲತಕ್ಕದ್ದು. ೮. ಆದರೆ ರಾಮನ ಉಂಗುರವು ಬಲುಬೆಲೆಯುಳ್ಳದ್ದು.

೩೦. ಪದಗಳ ಅರ್ಥವು ಒಂದಕ್ಕೊಂದು ಹೊಂದಿಕೊಳ್ಳುವಂತೆ ಅವುಗಳನ್ನು ಜೋಡಿಸಿಕೊಳ್ಳುವ ಪ್ರಕಾರಕ್ಕೆ **ಅನ್ವಯಕ್ರಮವೆಂದು** ಹೆಸರು. ನಾವು ಉದಾಹರಿಸಿರುವ ಶ್ಲೋಕವನ್ನು ಹೀಗೆ ಜೋಡಿಸಿದಾಗ ವಾಕ್ಯಗಳಾಗುವವು.

## ಅನ್ವಯಕ್ರಮದಲ್ಲಿ ವಾಕ್ಯಗಳು

१. प्रबलाः रोगाः, शरीरं सततं हरन्ति । २. कामादयोऽपि चित्तम् अनुदिनं प्रदहन्ति । ३. मृत्युश्च सदा दिनानि कलयन् नृत्यति । ४. (हे) दीनबन्धो, तस्मात् (अद्य) त्वम् एव मम शरणम् ॥

**(ಅನುವಾದ)**

೧. ಬಹಳ ಬಲವಾಗಿರುವ ರೋಗಗಳು ಶರೀರವನ್ನು ಯಾವಾಗಲೂ

---

1. ಗೆಳೆಯ ಎಂಬರ್ಥದ ಮಿತ್ರಶಬ್ದವು ಸಂಸ್ಕೃತದಲ್ಲಿ ನಪುಂಸಕಲಿಂಗ.

2. ಸಂಸ್ಕೃತದ ವಾಕ್ಯಗಳಲ್ಲಿ ಪದಗಳು ಇಂಥ ಕ್ರಮದಲ್ಲಿಯೇ ಇರಬೇಕೆಂಬ ನಿಯಮವಿರುವದಿಲ್ಲ. ಅನ್ವಯಕ್ರಮದಿಂದ ಅದನ್ನು ಜೋಡಿಸಿಕೊಂಡು ಕನ್ನಡಿಸಬೇಕು.

ನಾಶಗೊಳಿಸುತ್ತಿರುವವು. ೨. ಆಶೆಯೇ ಮುಂತಾದವುಗಳೂ ಚಿತ್ತವನ್ನು ದಿನದಿನವೂ ಸುಡುತ್ತಿರುವವು. ೩. ಮತ್ತು ಮೃತ್ಯುವು (ಸಾವು) ಯಾವಾಗಲೂ ದಿವಸಗಳನ್ನು ಎಣಿಸುತ್ತಾ ಕುಣಿಯುತ್ತಿದೆ. ೪. (ಎಲೈ) ದೀನರಿಗೆ ಬಂಧುವಾದವನೆ, ಆದ್ದರಿಂದ ಈಗ ನೀನೇ ನನಗೆ ರಕ್ಷಕನು.

**ಸಂಧಿನಿಯಮ** : ಸವರ್ಣ(ಒಂದೇ ಜಾತಿಯ) ಸ್ವರಗಳು ಒಂದಕ್ಕೊಂದು ಸೇರುವಾಗ ಆ ಎರಡಕ್ಕೂ ಆ ಜಾತಿಯ ದೀರ್ಘವು ಆದೇಶವಾಗುವದು (ಇದು **ಸವರ್ಣದೀರ್ಘಸಂಧಿ**). (ಅಆ, ಇಈ, ಉಊ, ಋೠ, - ಇವುಗಳು ಒಂದಕ್ಕೊಂದು ಸವರ್ಣ. ಉದಾಹರಣೆಗೆ ಅಕ್ಕೆ ಆಕಾರವೂ, ಆಕಾರಕ್ಕೆ ಅಕಾರವೂ ಸವರ್ಣ ; ಇವೆರಡಕ್ಕೂ ಆಕಾರವೇ ಸವರ್ಣದೀರ್ಘ. ಹೀಗೇಯೇ ಈಕಾರಾದಿ ದೀರ್ಘಗಳನ್ನು ತಿಳಿಯಬೇಕು.) ಉದಾಹರಣೆ : **ಅತ್ರ ಅನ್ತರೇ = ಅತ್ರಾನ್ತರೇ ; ತತ್ರ ಆಗತಃ = ತತ್ರಾಽಽಗತಃ**[1] ।

१. तदा अस्य = तदाऽस्य ; प्रीत्या आगतम् = प्रीत्याऽऽगतम्

२. अस्ति ईश्वरः = अस्तीश्वरः ; शङ्करी ईश्वरी = शङ्करीश्वरी ; नदी इयम् = नदीयम्

३. बहु उपकरोति = बहूपकरोति ४. हन्तृ ऋणम् = हन्तॄणम् ॥

## ಗುಣಸಂಧಿ

೩೧. ಅಸವರ್ಣ (ಸಮಾನಜಾತೀಯವರ್ಣವಲ್ಲದ) ಸ್ವರಗಳು ಕೂಡಿಕೊಂಡಾಗ ಆಗುವ ಸಂಧಿಕಾರ್ಯವನ್ನು ಈ ಕೆಳಗಿನ ವಾಕ್ಯಗಳಲ್ಲಿ ಬಿಡಿಸಿ ತೋರಿಸಿದೆ :

**१. कस्येदं** ( = कस्य इदं) **वनम् ? २. ताटकेत्थं** ( = ताटका इत्थं) **गर्जति । ३. ममेश्वर** ( = मम ईश्वर) **एव शरणम् । ४. तस्येदृशम्** ( = तस्य ईदृशम्) **ऐश्वर्यम् । ५. तत्रोपविष्टं** ( = तत्र उपविष्टं) **ब्राह्मणं नमामः । ६. तवोर्मिका** ( = तव ऊर्मिका) **कुत्र गता ? ७. जनकोऽर्घ्येणर्षिं** ( = जनकः अर्घ्येण ऋषिं) **पूजयति ॥**

೧. ಈ ಕಾಡು ಯಾರದು ? ೨. ತಾಟಕೆಯು ಹೀಗೆ ಕೂಗುತ್ತಿದಾಳೆ. ೩. ನನಗೆ ಈಶ್ವರನೇ ರಕ್ಷಕನು. ೪. ಅವನದು ಇಂಥ ಐಶ್ವರ್ಯ. ೫. ಅಲ್ಲಿ ಕುಳಿತಿರುವ

1. ಮುಂದಿನ ಅಕಾರವು ಸಂಧಿಯಲ್ಲಿ ಸೇರಿಹೋಗಿದೆ. ಽ ಹೀಗೆ ಅವಗ್ರಹಚಿಹ್ನೆಯಿಂದ ತೋರಿಸುತ್ತಾರೆ ; ಆಕಾರವು ಸೇರಿಹೋಗಿದೆಯೆಂಬುದನ್ನು ಎರಡು ಅವಗ್ರಹಚಿಹ್ನೆಗಳಿಂದ ತೋರಿಸುವರು. ಉದಾ : ಈಶ್ವರೋಽಸ್ತಿ, ತತ್ರಾಽಽಗತಮ್ ।

ಬ್ರಾಹ್ಮಣನನ್ನು ನಮಸ್ಕರಿಸೋಣ. ೬. ನಿನ್ನ ಉಂಗುರವು ಎಲ್ಲಿ ಹೋಯಿತು ? ೭. ಜನಕನು ಅರ್ಘ್ಯದಿಂದ ಋಷಿಯನ್ನು ಪೂಜಿಸುತ್ತಾನೆ.

ಸಂಧಿನಿಯಮ : ಅಆಕಾರಗಳಿಗೆ ಇಈ, ಉಊ, ಋ(ೠ, ಌ ಈ ಸ್ವರಗಳು ಪರವಾದರೆ ಹಿಂದುಮುಂದಿನ ಸ್ವರಗಳೆರಡಕ್ಕೂ ಗುಣವು ಆದೇಶವಾಗುತ್ತದೆ. ಎಂದರೆ ಇಈಗಳು ಪರವಾದಾಗ ಏ, ಉಊಗಳು ಪರವಾದಾಗ ಓ, ಋೠಗಳು ಪರವಾದಾಗ ಅರ್, ಌಕಾರವು ಪರವಾದರೆ ಅಲ್ - ಹೀಗೆ ಬರುತ್ತವೆ.

## ಅಭ್ಯಾಸ ೨೫

ಇಲ್ಲಿ ಸಂಧಿಯಾಗಿರುವ ಕಡೆಗಳಲ್ಲಿ ಸಂಧಿಯನ್ನು ಬಿಡಿಸಿ ವಾಕ್ಯಗಳನ್ನು ಕನ್ನಡಿಸಿರಿ :

१. अस्य जैनस्याम्बरं श्वेतम् । २. अत्रोपविशन्तु भवन्तः (ತಾವು) । ३. तत्रोर्मिका तिष्ठति (ಇದೆ) । ४. ममाऽऽसन्दी (ಕುರ್ಚಿ) कुत्रास्ति ? ५. तवेयं भार्या किम् ? ६. तस्य भार्याऽस्य पुत्री । ७. सा नद्यां पतिव्रवतीति वदन्ति । ८. इहोक्तं (ಹೇಳಲ್ಪಟ್ಟಿದೆ) सर्वम्, तत्र तूह्यम् (ಊಹಿಸಿಕೊಳ್ಳಬೇಕಾದದ್ದು) ।

## ಅಭ್ಯಾಸ ೨೬

ಈ ವಾಕ್ಯಗಳಲ್ಲಿ + ಹೀಗೆ ಗುರುತುಮಾಡಿರುವ ಕಡೆಗಳಲ್ಲಿ ಸಂಧಿಯನ್ನು ಮಾಡಿರಿ. ವಾಕ್ಯಗಳನ್ನು ಕನ್ನಡಿಸಿರಿ :

१. वानराः स्वादूनि (ರುಚಿಯಾದ) फलानि खादन्ति । २. बालको लिखति + इव (ಬರೆಯುವಂತೆ ಇದಾನೆ) । ३. गोपालस्य धेनुर्नीली (ಕರಿಯದು); गोविन्दस्य + अपि तथा इति वदन्ति । ४. अत्र + ऋषिरेव + ईश्वरः (ಒಡೆಯ) । ५. मल्लस्य + इमे महिषाः (ಕೋಣಗಳು) । ६. वापीषु (ಭಾವಿಗಳಲ್ಲಿ) + ऊर्मिकाः पतन्ति । ७. अस्ति + ईश्वर इति देवा वदन्ति ; न + अस्ति + इति राक्षसाः ॥

# ವೃದ್ಧಿಸಂಧಿ

೩೨. ಈ ಕೆಳಗಿನ ವಾಕ್ಯಗಳಲ್ಲಿ ಐಕಾರವೂ ಔಕಾರವೂ ಆದೇಶವಾಗಿ ಬಂದಿರುವ ಸ್ಥಲಗಳಲ್ಲಿ ಸಂಧಿಯನ್ನು ಬಿಡಿಸಿರುವ ಕ್ರಮವನ್ನು ಲಕ್ಷಿಸಿರಿ. ಬಿಡಿಸಿ ಕಂಸದಲ್ಲಿಟ್ಟಿರುವ ಎರಡು ಪದಗಳಲ್ಲಿ ಪೂರ್ವ (ಹಿಂದಿನ) ಪದದ ಕೊನೆಯಲ್ಲಿ ಯಾವ ಸ್ವರವಿದೆ ? ಪರ (ಮುಂದಿನ ) ಪದದ ಮೊದಲಿನಲ್ಲಿ ಯಾವ ಸ್ವರವಿದೆ ?

१. तस्यैव (= तस्य एव) पर्यङ्कः (ಮಂಚ) सः । २. इन्द्रस्यैरावतो (= इन्द्रस्य ऐरावतो) नाम (ಎಂಬ) गजोऽस्ति । ३. हिमालये तत्रौषधयः (= तत्र ओषधयः. ಗಿಡಗಳು) काः काः सन्ति ? ४. अस्माकं तत्रौत्सुक्यं (= तत्र औत्सुक्यं ಕುತೂಹಲವು) नास्ति । ५. कैवं (= का एवं) वदति । ६. तथैश्वर्यं (= तथा ऐश्वर्यं) कस्यास्ति ? ७. अहं वदामि सौषधिः (= सा ओषधिः) न हिमालयेऽस्तीति । ८. तदौत्सुक्यं (= तदा औत्सुक्यं) भवति ।।

ಸಂಧಿನಿಯಮ : ಅಆಕಾರಗಳಿಗೆ ಏಐಕಾರಗಳು ಪರವಾದರೆ ಪೂರ್ವೋತ್ತರ (ಹಿಂದು ಮುಂದಿನ) ಸ್ವರಗಳೆರಡಕ್ಕೂ ಐಕಾರವೂ, ಓಔಕಾರಗಳು ಪರವಾದರೆ ಅವೆರಡಕ್ಕೂ ಔಕಾರವೂ ಆದೇಶವಾಗುತ್ತದೆ. (ಇದು ವೃದ್ಧಿಸಂಧಿ)

## ಅಭ್ಯಾಸ ೨೭

ಮೇಲಿನ ವಾಕ್ಯಗಳನ್ನು ಕನ್ನಡಿಸಿರಿ.

೩೩. ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಸಂಧಿಯನ್ನು ಮಾಡದೆ ಇರುವ ರೂಪಗಳನ್ನು + ಈ ಗುರುತಿನಿಂದ ತೋರಿಸಿ ಮೊದಲು ಬರೆದಿದೆ. ಬಳಿಕ ಸಂಧಿ ಕಾರ್ಯವು ಆದಮೇಲಿನ ರೂಪವನ್ನು ಕಂಸದಲ್ಲಿಟ್ಟಿದೆ. ಸಂಧಿಯಾದ ಬಳಿಕ ಎರಡು ರೂಪಗಳು ಇದ್ದರೆ ರೂಢಿಯಲ್ಲಿ ಕಾಣಬರುವದನ್ನು ಮೊದಲು ಬರೆದಿದೆ.

१. गुरो + अस्य ( = गुरोऽस्य) व्याकरणे इच्छा वर्तते । २. प्रभो + अस्मिन् ( = प्रभोऽस्मिन्) जने कृपा कर्तव्या । ३. ते + इति ( = त इति, तयिति) वदन्ति । ४. के + इह ( = क इह, कयिह) वसन्ति । ५. तस्मै + ऊर्मिकां ( = तस्मा ऊर्मिकाम्, तस्मायूर्मिकां) यच्छामि । ६. हरौ + अस्ति ( = हरावस्ति, हरा अस्ति) भक्तिः ।।

ಸಂಧಿನಿಯಮ[1] : ಏ, ಓ, ಐ, ಔ, - ಇವುಗಳ ಮುಂದೆ ಸ್ವರವು ಬಂದಿರುವಾಗ ಇವಕ್ಕೆ ಕ್ರಮವಾಗಿ ಅಯ್, ಅವ್, ಆಯ್, ಆವ್ - ಎಂಬ ಆದೇಶಗಳು ಬರುತ್ತವೆ. ಆಗ ಅವನ್ನು ಮುಂದಿನ ಸ್ವರಕ್ಕೆ ಸೇರಿಸಿ ಬರೆಯುತ್ತಾರೆ.

**ವಿಶೇಷ** : ಸಂಬೋಧನಾವಿಭಕ್ತಿಯ ಮುಂದೆ ಈ ಸಂಧಿಕಾರ್ಯವು ಆಗದೆಯೂ ಇರಬಹುದು. ಉದಾ : **ಪ್ರಭೋ ಅತ್ರ**.

## ಅಭ್ಯಾಸ ೨೮

ಇಲ್ಲಿ + ಹೀಗೆ ಗುರುತುಮಾಡಿರುವ ಕಡೆಗಳಲ್ಲಿ ಸಂಧಿಮಾಡಿ ; ವಾಕ್ಯಗಳನ್ನು ಕನ್ನಡಿಸಿರಿ :

**१. धनी ब्राह्मण्यै + आणकं (ಆಣೆಯನ್ನು) यच्छति । २. दशरथः प्रासादे (ಅರಮನೆಯಲ್ಲಿ) + अस्ति । ३. गोपालस्य वृषभौ + अत्र स्तः । ४. रुग्णस्य + औषधं विषं भवति । ५. ऋषयो वने + आश्रमं रचयन्ति । ६. महानसे (ಅಡಿಗೆಯ ಮನೆಯಲ್ಲಿ) सूदौ + ओदनं पचतः । ७. कुबेरस्य + एव तथा + ऐश्वर्यमस्ति । ८. सः + अपि तथा + एव वदति । ९. वयं न + एव पायसं वाञ्छामः ॥**

೩೪. ಈ ವಾಕ್ಯಗಳಲ್ಲಿ ಆಗಿರುವ ಸಂಧಿಕಾರ್ಯಗಳನ್ನು ವಿವರಿಸಿ ಕನ್ನಡಿಸಿರಿ ; (ಮಾದರಿ :- भवत्यग्रे = भवति + अग्रे । ಇಲ್ಲಿ ಇಕಾರಕ್ಕೆ ಅಕಾರವು ಪರವಾಗಿದೆ ; ಪೂರ್ವಾಪರಸ್ವರಗಳೆರಡರ ಸ್ಥಲದಲ್ಲಿ ಯಕಾರವು ಆದೇಶವಾಗಿ ಬಂದಿದೆ.)

**१. रामो भवत्यग्रे । २. इदानीं लक्ष्मणोऽप्यनुसरति** (अपि अनुसरति) **तम्**[2] । **३. अस्त्याचार्यः** (= अस्ति आचार्यः) **पर्यङ्के । ४. तावप्यूर्मिका** (= अपि ऊर्मिका) **नास्ति किम् ? ५. इत्येव** (= इति एव ) **वदन्ति सर्वे । ६. सूदाः पचन्त्योदनम्** ( = पचन्ति ओदनम् ) । **७. तस्याप्यैश्वर्यम्** ( = तस्यापि

1. ಈ ಭಾಗದಲ್ಲಿ ಈ ಸಂಧಿನಿಯಮವನ್ನು ಅನುಸರಿಸುವ ವಾಕ್ಯಗಳನ್ನು ಉಪಯೋಗಿಸುವದಿಲ್ಲ ; ಆದರೂ ಸ್ವರಸಂಧಿಗಳ ವಿಷಯಜ್ಞಾನದ ಪರಿಪೂರ್ತಿಗಾಗಿ ಇಲ್ಲಿ ಕೊಟ್ಟಿದೆ.

2. ವಾಕ್ಯದ ಕೊನೆಯಲ್ಲಿ ಅನುಸ್ವಾರ(ಸೊನ್ನೆ)ವನ್ನು ಉಪಯೋಗಿಸಬೇಡಿ ; ಮ್ ಎಂದೇ ಬರೆಯಿರಿ.

ऐश्वर्यं) न शाश्वतम् । ८. नास्त्यौषधं (= नास्ति औषधं) तत्र । ९. कैकेय्यत्र (= कैकेयी अत्र) कोष्ठे (ಕೋಣೆಯಲ್ಲಿ) अस्ति । १०. गौर्युपविशति (= गौरी उपविशति) शङ्करस्य समीपे । ११. ते त्वेवं (= तु एवं) मन्यन्ते । १२. मम त्वियं (= तु इयं) लेखिनी । १३. अस्य सर्वस्य कर्त्रस्ति (= कर्तृ अस्ति) दैवम् (ಅದೃಷ್ಟ) ॥

ಸಂಧಿನಿಯಮ : ಇಉಋಌ[1] ಗಳಿಗೆ ವಿಜಾತೀಯ (ಅಸವರ್ಣ) ಸ್ವರಗಳು ಪರವಾದರೆ ಕ್ರಮವಾಗಿ ಯವರಲಗಳು ಆದೇಶವಾಗುವವು. ಈ ವರ್ಣಗಳಿಗೆ ಪಾಣಿನಿಯ ವ್ಯಾಕರಣದಲ್ಲಿ ಯಣ್ ಎಂದು ಹೆಸರು ; ಆದ್ದರಿಂದ ಇದನ್ನು ಯಣ್ಸಂಧಿ ಎನ್ನುವರು.

## ಅಭ್ಯಾಸ ೨೯

ಇಲ್ಲಿ ವಾಕ್ಯದ ಕೊನೆಯಲ್ಲಿರುವ ಪದವನ್ನು ಮೊದಲು ಬರೆದುಕೊಂಡು ವಾಕ್ಯವನ್ನು ಓದಿರಿ. ಆಗುವ ಕಡೆಯಲ್ಲಿ ಸಂಧಿಯನ್ನು ಮಾಡಿರಿ :

१. अयोध्यायां कोऽपि नास्ति । २. एषु पत्तनेषु ते धनिनः सन्ति । ३. आभ्यां ग्रामाभ्यां गोप्यः क्षीरम् आनयन्ति । ४. ईश्वर एव शरणं मम ।[2] ५. इयम् ऊर्मिका न तव, मम तु[2] । ६. ऊर्मिला पुत्रं कुस्यति ॥

# ೬. ಎಂಥ ಎಂಬುದನ್ನು ಹೇಳುವ ವಿಶೇಷಣಗಳು

೩೫. ಈ ವಾಕ್ಯಗಳಲ್ಲಿ ಎಂಥ ? ಎಷ್ಟು (ಪರಿಮಾಣ, ಸಂಖ್ಯೆ) ? ಯಾವ ? - ಎಂಬುದನ್ನು ತಿಳಿಸುವ ವಿಶೇಷಣಗಳನ್ನು ಕಂಡುಹಿಡಿಯಿರಿ :

१. अस्ति वर्धमाने नाम नगरे बहुधनो नाम साधुः । २. तस्य कोशे प्रभूतानि अनर्घाणि रत्नानि सन्ति । ३. अयं मणिः सूर्येण सत्राजिताय दत्तः । ४. स कश्चन विदेशीयः । ५. तस्य सर्वमपि धनं केनचित् चोरेण अपहृतम् । ६. नगराध्यक्षस्थाने बहवो जना मिलन्ति । ७. चौरोऽर्धं धनं रक्षापुरुषाय यच्छति ॥

---

1. ಌ + ಆಕೃತಿಃ = ಲಾಕೃತಿಃ (ಌಕಾರದ ಆಕಾರ) ಎಂದು ಌಕಾರಕ್ಕೆ ಉದಾಹರಣೆಯನ್ನು ಕೊಡುತ್ತಾರೆ. 2. ಮಮ, ತು - ಇವೆರಡನ್ನು ವಾಕ್ಯದ ಮೊದಲಿಗೆ ಇಡಿ.

೧. ವರ್ಧಮಾನವೆಂಬ ನಗರದಲ್ಲಿ ಬಹುಧನನೆಂಬ ಸಾಹುಕಾರನು ಇದಾನೆ (ಇದ್ದನು). ೨. ಅವನ ಕೋಶದಲ್ಲಿ ಬೆಲೆಯಿಲ್ಲದ (= ಬಹಳ ಬೆಲೆಯುಳ್ಳ) ರತ್ನಗಳು ಇವೆ. ೩. ಈ ರತ್ನವು ಸೂರ್ಯನಿಂದ ಸತ್ರಾಜಿತನಿಗೆ ಕೊಡಲ್ಪಟ್ಟದ್ದು. ೪. ಅವನು ಯಾವನೋ ಒಬ್ಬ ವಿದೇಶದವನು. ೫. ಅವನು ಧನವೆಲ್ಲವೂ ಯಾವನೋ ಒಬ್ಬ ಕಳ್ಳನಿಂದ ಕದಿಯಲ್ಪಟ್ಟಿತು. ೬. ನಗರದ ಅಧ್ಯಕ್ಷನ ಠಾಣೆಯಲ್ಲಿ ಬಹುಜನರು ಸೇರಿರುತ್ತಾರೆ. ೭. ಕಳ್ಳನು ಅರ್ಧ ಧನವನ್ನು ಪೋಲೀಸಿನವನಿಗೆ ಕೊಡುತ್ತಾನೆ.

**ವಿಶೇಷ** : (1) ವರ್ಧಮಾನೇ ನಾಮ (ನಗರೇ), ಬಹುಧನೋ ನಾಮ (ಸಾಧುಃ) ಇವುಗಳಲ್ಲಿ ನಾಮ ಎಂಬ ಮಾತನ್ನು 'ಎಂಬ' ಎಂದು ಕನ್ನಡಿಸಬೇಕು. ಈ ಅವ್ಯಯಕ್ಕೆ ಹಿಂದೆಯೂ ಮುಂದೆಯೂ ಇರುವ ಶಬ್ದಗಳು ಒಂದೇ ವಿಭಕ್ತಿಯಲ್ಲಿರಬೇಕು.

(2) ವಿಶೇಷಣಗಳನ್ನು ಕಂಡುಹಿಡಿಯುವದಕ್ಕೆ ಎಂಥ (**ಕೀದೃಶ**), ಎಷ್ಟು ಪರಿಮಾಣ (**ಕಿಯತ್**), ಎಷ್ಟು ಸಂಖ್ಯೆ (**ಕತಿ, ಕಿಯತ್**), ಯಾವ (**ಕಿಮ್, ಕತರ, ಕತಮ**) - ಎಂಬ ಪ್ರಶ್ನೆಗಳನ್ನು ಹಾಕಬೇಕು. ಇವಕ್ಕೆ ಬೇಕಾದ ಸರ್ವನಾಮಗಳ ರೂಪಗಳನ್ನು ಮುಂದೆ ತಿಳಿಸಿ ಕೊಡಲಾಗುವದು.

೩೬. ವಿಶೇಷಣಗಳು ಪೂರ್ವ (attributive) ವಿಶೇಷಣಗಳೆಂದೂ ವಿಧೇಯ (predicative) ವಿಶೇಷಣಗಳೆಂದೂ ಎರಡು ಬಗೆ. ನೇರಾಗಿಯೇ ಪೂರ್ವವಿಶೇಷಣಗಳಾಗಿರಲಿ, ವಾಕ್ಯದ ವಿಧೇಯದಲ್ಲಿದ್ದುಕೊಂಡು ವಿಧೇಯವಿಶೇಷಣಗಳಾಗಿರಲಿ, ಅವಕ್ಕೆ ತಮ್ಮ ತಮ್ಮ ವಿಶೇಷ್ಯಗಳ ಲಿಂಗವಿಭಕ್ತಿವಚನಗಳೇ ಇರಬೇಕು. ಉದಾಹರಣೆಗೆ ಈ ವಾಕ್ಯಗಳನ್ನು ನೋಡಿ :

## ಪೂರ್ವವಿಶೇಷಣಗಳು

१. विश्वामित्रोऽयोध्यां नाम नगरीं गतः । २. ब्राह्मणो ज्येष्ठं (ಹಿರಿಯ) पुत्रं कुप्यति । ३. दशरथः कनिष्ठायै (ಕಿರಿಯ) भार्यायै वरौ यच्छति । ४. बहुषु ग्रामेषु वाप्यो (ಭಾವಿಗಳು) न सन्ति । ५. मूर्खयोः पुत्रयोः कलहो भवति । ६. अयोध्यायां रम्याणि गृहाणि वर्तन्ते ॥

| | | | | |
|---|---|---|---|---|
| १) अयोध्यां नाम नगरीम् | ಇವು | ಸ್ತ್ರೀ. | ದ್ವಿ. | ಏಕವಚನ |
| २) ज्येष्ठं पुत्रम् | | ಪು. | ದ್ವಿ. | ಏಕ.. |
| ३) कनिष्ठायै भार्यायै | | ಸ್ತ್ರೀ. | ಚ. | ಏಕ. |

| | | | | |
|---|---|---|---|---|
| ४) बहुषु ग्रामेषु | ಇವು | ಪು. | ಸ. | ಬಹು. |
| ५) मूर्खयोः पुत्रयोः | | ಪು. | ಸ. | ದ್ವಿ. |
| ६) रम्याणि गृहाणि | | ನ. | ಪ್ರ. | ಬಹು. |

ಹೊಸಗನ್ನಡದಲ್ಲಿ ವಿಶೇಷಣಗಳನ್ನು 'ಎಂಬ', 'ಆದ', ಉಳ್ಳ' ಮುಂತಾದ ಶಬ್ದ ಚಿಹ್ನೆಗಳಿಂದ ತಿಳಿಯಬೇಕಾಗುವದು. 'ಆವರನ್ನಿಬ್ಬರನ್ನು' ಎನ್ನುವದಕ್ಕಿಂತ 'ಅವರಿಬ್ಬರನ್ನು' ಎಂದು ಉಪಯೋಗಿಸುವದೇ ಹೆಚ್ಚು ವಾಡಿಕೆಯಲ್ಲಿದೆ. ಹಳೆಗನ್ನಡದಲ್ಲಿ ಸಂಸ್ಕೃತದಂತೆಯೇ 'ವೀರಂಗೆ ದೇವಂಗೆ', 'ಪಾಡುವವಂ ತುಂಬಿಗಳಂ' ಎಂಬಂತೆ ಸಮಾನವಿಭಕ್ತಿವಚನಗಳಿಂದ ತಿಳಿಸುವ ವಾಡಿಕೆಯೂ ಇದ್ದಿತು.

## ವಿಧೇಯವಿಶೇಷಣಗಳು

१. भूपतेर्भटाः शूराः । २. ऋषेः पर्णशाला संकुचिता । ३. साधोर्गृहं (ಸಾಹುಕಾರನ ಮನೆ) विशालम् । ४. तस्य उष्णीषः (ರುಮ್ಮಾಲು) शाटी (ಪಂಚೆ) च शुक्लौ[1] । ५. वसुगुप्तः, तस्य भार्या, मित्रं च सुशीलानि (ಒಳ್ಳೆಯ ಸ್ವಭಾವದವರು) । ६. नद्याः जलं शीतलम् । ७. तव मतिः शोभना ।।

## ಅಭ್ಯಾಸ ೩೦

ಪೂರ್ವವಿಶೇಷಣಗಳಿಗೆ ತೋರಿಸಿರುವಂತೆ ಇಲ್ಲಿಯೂ ವಿಶೇಷ್ಯವಿಶೇಷಣಗಳ ಲಿಂಗವಿಭಕ್ತಿ ವಚನಗಳನ್ನು ಪಟ್ಟಿಮಾಡಿ ಬರೆಯಿರಿ.

೩೭. ಈ ಕೆಳಗಿನ ವಾಕ್ಯಗಳಲ್ಲಿರುವ ವಿಶೇಷಣಗಳ ಲಿಂಗವಚನವಿಭಕ್ತಿಗಳನ್ನು ಹೇಳಿ. ಇಲ್ಲಿ (ಅಕಾರಾಂತ, ಇಕಾರಾಂತ, ಉಕಾರಾಂತ) ಶಬ್ದಗಳ ಸ್ತ್ರೀಲಿಂಗರೂಪವು ಹೇಗೆ ಆಗಿದೆಯೋ ನೋಡಿ :-

१. गभीरायां नद्यां शिशुः पतितवान् । २. शूरेण भटेन स उद्धृतः (ಎತ್ತಲ್ಪಟ್ಟಿತು) । ३. रामस्य कल्याण्याः कथायाः श्रवणेन जनानां कल्याणं फलं भवति । ४. कोकिलस्य ध्वनिः काकस्येव न कर्कशः, किं तु

1. ನಪುಂಸಕಲಿಂಗದ ಶಬ್ದದೊಡನೆ ಬೇರೆಯ ಲಿಂಗದ ವಿಶೇಷ್ಯಗಳು ಸೇರಿದ್ದರೆ ಇವುಗಳ ಒಟ್ಟು ವಿಶೇಷಣವು ನಪುಂಸಕವಾಗಿರಬೇಕು ; ನಪುಂಸಕಲಿಂಗವಿಲ್ಲದೆ ಪುಲ್ಲಿಂಗಸ್ತ್ರೀಲಿಂಗದ ಶಬ್ದಗಳು ಒಟ್ಟಾಗಿ ಸೇರಿದ್ದರೆ ಅದು ಪುಲ್ಲಿಂಗವಾಗಿರುವದು.

(ಮತ್ತೇನೆಂದರೆ) स मृदुर्मधुरश्च । ५. मधुराधिपतेर्मालापि मधुरा । ६. मल्लस्य वृषभः (ಎತ್ತು) शुक्लः, महिषी तु नीली । ७. ब्राह्मणाः शुचिः, तस्य भार्याऽपि शुचिः ॥

| ಪು. ಮತ್ತು ನ. | | ಸ್ತ್ರೀ. | ಪು. ಮತ್ತು ನ. | | ಸ್ತ್ರೀ. |
|---|---|---|---|---|---|
| बाल | ಚಿಕ್ಕ | बाला | सुरभि | ಒಳ್ಳೆಯ ವಾಸನೆಯ | सुरभि |
| वृद्ध | ಬೆಳೆದ, ಮುದಿ | वृद्धा | भूरि | ಬಹಳ | भूरि |
| दीर्घ | ಉದ್ದನೆಯ | दीर्घा | ऋजु | ನೆಟ್ಟಗಿರುವ | ऋजु / ऋज्वी |
| ह्रस्व | ಗಿಡ್ಡ, ಮೊಟಕು | ह्रस्वा | मृदु | ಮೆತ್ತನೆಯ | मृदु / मृद्वी |
| कृश | ಬಡಕಲಾದ | कृशा | बहु | ಬಹಳ | बहु / बह्वी |
| कर्कश | ಬಿರುಸು, ತರಕಲು | कर्कशा | साधु | ಒಳ್ಳೆಯ | साधु / साध्वी |
| गभीर | ಆಳವಾದ | गभीरा | स्वादु | ಸವಿಯಾದ | स्वादु / स्वाद्वी |
| कल्याण | ಮಂಗಳಕರ | कल्याणी | गुरु | ದೊಡ್ಡ, ಭಾರವಾದ | गुरु / गुर्वी |
| शाश्वत | ಎಂದೆಂದಿಗೂ ಇರುವ | शाश्वती | | | |
| नील | ಕರಿಯ | नीला / नीली | | | |

ಸಾಮಾನ್ಯನಿಯಮ : ಅಕಾರಾಂತ ವಿಶೇಷಣಗಳ ಸ್ತ್ರೀಲಿಂಗಗಳು ಸಾಮಾನ್ಯವಾಗಿ ಆಕಾರಾಂತವಾಗುವವು ; ಮತ್ತೆ ಕೆಲವು ಆಕಾರಾಂತವೂ ಈಕಾರಾಂತವೂ ಆಗುವವು. ಇಕಾರಾಂತವಾಗಿರುವ ವಿಶೇಷಣಗಳು ಇಕಾರಾಂತವಾಗಿಯೇ ಸ್ತ್ರೀಲಿಂಗರೂಪಗಳಾಗುವವು ; ಉಕಾರಾಂತ ವಿಶೇಷಣಗಳಿಗೆ - ಉಕಾರದ ಹಿಂದೆ ಸಂಯುಕ್ತಾಕ್ಷರವಿಲ್ಲದಾಗ - ಸ್ತ್ರೀಲಿಂಗವು ಉಕಾರಾಂತ ಅಥವಾ ಈಕಾರಾಂತ - ಹೀಗೆ ಎರಡೂ ಬಗೆಯಲ್ಲಿ ಆಗುವವು.

೩೮. ಇಕಾರಾಂತ ಮತ್ತು ಉಕಾರಾಂತ ವಿಶೇಷಣಗಳ ವಿಭಕ್ತಿಮಾಲೆಯನ್ನು ಹಿಂದೆ (ಇದೇ ಪುಸ್ತಕದ ೧೪ನೆಯ ಪುಟದಲ್ಲಿ) ಕೊಟ್ಟಿದೆ. ಅವುಗಳನ್ನು ವಿಶೇಷ್ಯಕ್ಕೆ ತಕ್ಕಂತೆ ಲಿಂಗ ವಿಭಕ್ತಿವಚನಗಳಲ್ಲಿ ನಡೆಯಿಸಿಕೊಳ್ಳಬೇಕು..

## ಅಭ್ಯಾಸ ೩೧

ಈ ವಾಕ್ಯಗಳಲ್ಲಿ ವಿಶೇಷ್ಯವಿಶೇಷಣಗಳನ್ನು ಒಟ್ಟಿಗೆ ಆಯಾ ವಿಭಕ್ತಿಯ ಎಲ್ಲಾ ವಚನಗಳಲ್ಲಿಯೂ ನಡೆಯಿಸಿರಿ. (ಮಾದರಿ : ಮೊದಲನೆಯ ವಾಕ್ಯದಲ್ಲಿ परया भक्त्या, पराभ्यां, भक्तिभ्याम्, पराभिर्भक्तिभिः - ಎಂದು ರೂಪಗಳನ್ನು ಹೇಳಬೇಕು.)

१. अयं ब्राह्मणो देवालये ईश्वरं परया भक्त्या पूजयति । २. तस्य वस्त्राणि सदा शुचीनि भवन्ति । ३. अस्यां गभीरायां नद्यां बहवो मीनाः सन्ति । ४. तस्या अजायाः बह्व्यः प्रजाः । ५. योगी कल्याणान् लोकान् गच्छति, तत्र च शाश्वतीः समाः[1] वसति । ६. रक्षापुरुषो गुरुणा दण्डेन चोरं ताडयति । ७. भोः, इमां चमूं पश्य । ८. अर्जुन, मम तव च बहूनि जन्मानि व्यतीतानि । ९. शुचिनि (शुचौ) कुले एव तस्य जन्म भवति । १०. अस्मै साधवे भक्ताः स्वाद्वी द्राक्षाः, सुरभीणि पुष्पाणि च आनयन्ति ॥

೧. ಈ ಬ್ರಾಹ್ಮಣನು ದೇವಾಲಯದಲ್ಲಿ ಈಶ್ವರನನ್ನು ಹೆಚ್ಚಿನ ಭಕ್ತಿಯಿಂದ ಪೂಜಿಸುತ್ತಾನೆ. ೨. ಅವನ ಬಟ್ಟೆಗಳು ಯಾವಾಗಲೂ ಶುಚಿಯಾಗಿರುತ್ತವೆ. ೩. ಈ ಆಳವಾದ ನದಿಯಲ್ಲಿ ಬಹಳ ಮೀನುಗಳು ಇವೆ. ೪. ಆ ಆಡಿಗೆ ಬಹಳ ಮಕ್ಕಳು (= ಮರಿಗಳು). ೫. ಯೋಗಿಯು ಮಂಗಲಕರವಾದ ಲೋಕಗಳನ್ನು ಹೊಂದುತ್ತಾನೆ, ಅಲ್ಲಿ ಶಾಶ್ವತಗಳಾದ (= ಬಹಳ) ವರ್ಷಗಳವರೆಗೆ[2] ವಾಸಮಾಡಿ ಕೊಂಡಿರುತ್ತಾನೆ. ೬. ಪೋಲೀಸಿನವನು ತೂಕವಾದ ಕೋಲಿನಿಂದ ಕಳ್ಳನನ್ನು ಹೊಡೆಯುತ್ತಿದಾನೆ. ೭. ಎಲೈ (= ಏನಯ್ಯ) ಈ ದೊಡ್ಡ ಸೇನೆಯನ್ನು ನೋಡು. ೮. ಅರ್ಜುನ, ನನಗೂ ನಿನಗೂ ಬಹಳ ಜನ್ಮಗಳು ಕಳೆದುಹೋಗಿವೆ. ೯. ಶುದ್ಧವಾದ ಕುಲದಲ್ಲಿಯೇ ಅವನಿಗೆ ಜನ್ಮವಾಗುತ್ತದೆ. ೧೦. ಈ ಸಾಧುವಿಗೆ ಭಕ್ತರು ಸವಿಯಾದ ದ್ರಾಕ್ಷಿಗಳನ್ನೂ ಸುವಾಸನೆಯ ಹೂಗಳನ್ನೂ ತಂದು(ಕೊಡುತ್ತಾರೆ).

---

1. ಇದು ಆಕಾರಾಂತ ಸ್ತ್ರೀಲಿಂಗ. 2. 'ವರೆಗೆ' ಎಂಬರ್ಥದಲ್ಲಿ ಕಾಲ ವಾಚಕಶಬ್ದಕ್ಕೆ ದ್ವಿತೀಯಾವಿಭಕ್ತಿ ಬರುವದು ; 'ಅವಧಿಯ ಒಳಗೆ' ಎಂಬರ್ಥದಲ್ಲಿ ತೃತೀಯಾವಿಭಕ್ತಿ ಬರುವದು. ಉದಾ : ಮಾಸಂ ಪಠತಿ = ಒಂದು ತಿಂಗಳವರೆಗೆ ಓದುತ್ತಾನೆ ; ಮಾಸೇನ ಸಮಾಪ್ತಂ ಭವತಿ = ತಿಂಗಳೊಳಗೆ ಮುಗಿಯುವದು.

## ಅಭ್ಯಾಸ ೩೨

ಇಲ್ಲಿ ವಿಶೇಷ್ಯಗಳಿಗೆ ಕಂಸದಲ್ಲಿರುವ ವಿಶೇಷಣಗಳ ತಕ್ಕ ರೂಪವನ್ನು ಉಪಯೋಗಿಸಿ ವಾಕ್ಯಗಳನ್ನು ಬರೆಯಿರಿ. ವಾಕ್ಯಗಳನ್ನು ಕನ್ನಡಿಸಿರಿ :

१. अस्य बाहू (ह्रस्व), नेत्रे तु (विशाल) । २. (साध्वी ಪತಿವ್ರತೆ) भार्याया वचनं कस्य न (प्रिय) ? ३. अनया (कृश) महिष्या किं करोषि ? ४. विमलां (ऋजु) सृतिं (ಮಾರ್ಗವನ್ನು) अनुसर ॥

# ೭. ಧಾತುಗಳೂ ಕ್ರಿಯಾಪದಗಳೂ

೩೯. ಒಂದು ನಾಲ್ಕು, ಆರು, ಹತ್ತು - ಈ ಗಣಗಳ ಕೆಲವು ಧಾತುಗಳು ಯಾವ ನಿಯಮವೂ ಇಲ್ಲದೆ ರೂಪಾಂತರವನ್ನು ಹೊಂದಿದ ಮೇಲೆಯೇ ಕ್ರಿಯಾಪದದ ಪ್ರತ್ಯಯಗಳನ್ನು ಪಡೆಯುವವು.

೧ನೆಯ ಗಣ

| | |
|---|---|
| पा (पिबति) - ಕುಡಿ | दृश् (पश्यति) - ನೋಡು |
| घ्रा (जिघ्रति) - ಮೂಸು | गम् (गच्छति) - ಹೋಗು |
| ध्मा (धमति) - ಊದು | सृ (धावति) - ಓಡು |
| स्था (तिष्ठति) - ನಿಲ್ಲು | ऋ (ऋच्छति) - ಹೋಗು, ಹೊಂದು |
| दा (यच्छति) - ಕೊಡು | यम् (यच्छति) - ಹಿಡಿತದಲ್ಲಿಡು |

**ವಿಶೇಷ** : ಸೃ ಧಾತುವಿಗೆ 'ಹೋಗು', 'ಹರಿದಾಡು' ಎಂಬರ್ಥವಿರುವಾಗ ಸರತಿ ಎಂದು ಕ್ರಿಯಾರೂಪ.

## ಅಭ್ಯಾಸ ೩೩

ಕನ್ನಡಿಸಿರಿ :

१. अहं टीपानं वा काफीपानं वा न जिघ्रामि, औषधस्थाने (ಔಷಧಿಯಾಗಿ) एव तु ते पिबामि । २. गिरयः सदा तिष्ठन्ति । ३. इयं बाष्पशकटश्रेणी (ಆವಿಯ ಬಂಡಿಗಳ ಸಾಲು, ರೈಲುಗಾಡಿ) कुत्र गच्छति ?

४. पश्य, इदानीं प्रधूमितोऽग्निः (ಹೊಗೆಯಾಡಿತು) । ५. सूदो धमन्या (ಊದುಗೊಳವಿಯಿಂದ) धमति । ६. पापा अनर्थम् ऋच्छन्ति । ७. वयं चलच्चित्रं (ಸಿನೆಮಾ) न पश्यामः ॥

೪೧. ಈ ಕೆಳಗೆ ನಾಲ್ಕನೆಯ ಮತ್ತು ಆರನೆಯ ಗಣದ ಧಾತುಗಳು ಕೆಲವನ್ನು ಕೊಟ್ಟಿದೆ. ಅವುಗಳಿಗೆ ಆಖ್ಯಾತ (ಕ್ರಿಯಾಪದ) ಪ್ರತ್ಯಯವು ಸೇರುವ ಮುಂಚೆ ಆಗುವ ಮಾರ್ಪಾಡನ್ನು ಕಂಸದಲ್ಲಿ ಹಾಕಿದೆ :

| ೪ನೆಯ ಗಣ | ೬ನೆಯ ಗಣ |
|---|---|
| दिव् (दीव्यति) - ಹೊಳೆ, ಪಗಡೆಯಾಡು | इष् (इच्छति) - ಬಯಸು |
| भ्रम् (भ्राम्यति) - ಅಲೆದಾಡು, ಭ್ರಾಂತನಾಗು | प्रच्छ् (पृच्छति) - ಕೇಳು, ಪ್ರಶ್ನಿಸು |
| शम् (शाम्यति) - ಶಾಂತನಾಗು | कृत् (कृन्तति) - ಕತ್ತರಿಸು |
| सिव् (सीव्यति) - ಹೊಲೆ | सिच् (सिञ्चति) - ಚಿಮುಕಿಸು |
| जन् (जायते) - ಹುಟ್ಟು | मुच् (मुञ्चति) - ಬಿಡು |
| तुष् (तुष्यति) - ತೃಪ್ತನಾಗು | मस्ज् (मज्जति) - ಮುಳುಗು |
| शुष् (शुष्यति) - ಒಣಗು | कृ (किरति) - ಚೆಲ್ಲಾಡು |

## ಅಭ್ಯಾಸ ೩೪

ಕನ್ನಡಿಸಿರಿ :

**१. कैकेयी किम् इच्छति ? २. भिक्षुका वीथिषु भ्राम्यन्ति । ३. नायं सर्पः, किमेवं भ्राम्यसि ? ४. सूचिकः** (ದರ್ಜಿ) **चित्रवस्त्रं** (ಚೀಟಿ ಬಟ್ಟೆ) **सीव्यति ; कवचं कञ्चुकं चोलकं चण्डातकं वा** (ಅಂಗಿಯನ್ನೋ ಕುಪ್ಪಸವನ್ನೋ ಜುಬ್ಬವನ್ನೋ ಅಥವಾ ಪರಿಕಾರವನ್ನೋ) **करोति । ५. गुरवः कुप्यन्ति, शीघ्रं पाठशालां गच्छामः । ६. अन्तरीयं** (ಉಡುವ ಬಟ್ಟೆ) **वंशखंडे** (ಬಿದಿರುಗಳುವಿನ ಮೇಲೆ) **क्षिपामि** (ಎಸೆಯುತ್ತೇನೆ, ಹಾಕುತ್ತೇನೆ) **। ७. कामात्**[1] **क्रोधो जायते ।**

---

1. ಏತರಿಂದ ಹುಟ್ಟುತ್ತದೆಯೋ ಅದರ ಹೆಸರು ಪಂಚಮೀವಿಭಕ್ತಿಯಲ್ಲಿರಲಿ.

८. रामो विश्वामित्रं पृच्छति - भगवन्, कस्याऽऽश्रमोऽयम्? ९. साधोर्भार्या (ಸಾಹುಕಾರನ ಹೆಂಡತಿ) दुःखेन अश्रूणि मुञ्चति। १०. शुक्ला मेघा न वारीणि सिञ्चन्ति। ११. नापितः (ನಾಯಿಂದ) कर्तर्या (ಕತ್ತರಿಯಿಂದ) नखं कृन्तति॥

## ಪ್ರೇರಣಾರ್ಥಕ ಕ್ರಿಯಾರೂಪಗಳು

೪೧. ಪ್ರೇರಣಾರ್ಥಕ ಧಾತುಗಳಿಗೆ **अय** ವಿಕರಣವು ಬರಬೇಕೆಂದು ಹಿಂದೆ (ಖಂ. ೨೬) ತಿಳಿಸಿದೆಯಷ್ಟೆ? ಮೂಲಕ್ರಿಯಾಪದಗಳಿಗೂ ಪ್ರೇರಣಾರ್ಥಕ ಕ್ರಿಯಾಪದಗಳಿಗೂ ಇರುವ ರೂಪಭೇದಗಳನ್ನು ತಿಳಿಯುವದಕ್ಕೆ ಅನುಕೂಲವಾಗಲೆಂದು ಇಲ್ಲಿ ಕೆಲವು ಉದಾಹರಣೆಗಳನ್ನು ಕೊಟ್ಟಿದೆ.

१. बालाः पाठशालां गच्छन्ति। २. चारिका शिशून् शिशुविहारं गमयति। ३. अहम् ईश्वरं पश्यामि, तुभ्यमपि दर्शयामि। ४. स मृगः स्वयं[1] म्रियते, व्याधास्तं न मारयन्ति। ५. वृक्षाणां शाखा न स्वयं कम्पन्ते, वायुरेव ताः कम्पयति॥

೧, ಹುಡುಗರು ಪಾಠಶಾಲೆಗೆ ಹೋಗುತ್ತಾರೆ. ೨, ಹೆಣ್ಣಾಳು ಮಕ್ಕಳನ್ನು ಶಿಶುವಿಹಾರಕ್ಕೆ ಹೋಗಿಸು (= ಕರೆದುಕೊಂಡು ಹೋಗು)ತ್ತಾಳೆ. ೩. ನಾನು ಈಶ್ವರನನ್ನು ಕಂಡಿದ್ದೇನೆ, ನಿನಗೂ ತೋರಿಸುತ್ತೇನೆ. ೪. ಆ ಮೃಗವು ತಾನೇ ಸಾಯುತ್ತದೆ, ಬೇಡರು ಅದನ್ನು ಸಾಯಿಸು(ಕೊಲ್ಲು)ವದಿಲ್ಲ. ೫. ಮರಗಳ ಕೊಂಬೆಗಳು ತಾವೇ ಅಲುಗಾಡುವದಿಲ್ಲ, ಗಾಳಿಯೇ ಅವನ್ನು ಅಲುಗಾಡಿಸುತ್ತದೆ.

೪೨. ಪ್ರೇರಣಾರ್ಥಕ ಧಾತುಗಳಿಗೆ ಅಯ ವಿಕರಣವು ಸೇರುವ ಮುಂಚೆ ಕೆಲವು ಧಾತುಗಳಿಗೆ 'ಪ್' ಸೇರುತ್ತದೆ. ಮತ್ತೆ ಕೆಲವಕ್ಕೆ 'ಯ್' ಸೇರುತ್ತದೆ. ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡುತ್ತೇವೆ :

| | |
|---|---|
| गम् (गच्छति) - ಹೋಗು | गमयति - ಹೋಗಿಸುತ್ತಾನೆ |
| स्था (तिष्ठति) - ನಿಲ್ಲು, ಇರು | स्थापयति - ನಿಲ್ಲಿಸುತ್ತಾನೆ, ಇರಿಸುತ್ತಾನೆ |
| दा (यच्छति) - ಕೊಡು | दापयति - ಕೊಡಿಸುತ್ತಾನೆ |
| जन् (जायते) - ಹುಟ್ಟು | जनयति - ಹುಟ್ಟಿಸುತ್ತಾನೆ |

1. ಇದು ಅವ್ಯಯ ; ಇದಕ್ಕೆ ಎಲ್ಲಾ ಲಿಂಗವಿಭಕ್ತಿವಚನಗಳಲ್ಲಿಯೂ ಒಂದೇ ರೂಪ.

| | |
|---|---|
| ऋ (ऋच्छति) - ಹೋಗು, ಹೊಂದು | अर्पयति - ಒಪ್ಪಿಸುತ್ತಾನೆ |
| दृश् (पश्यति) - ನೋಡು | दर्शयति - ತೋರಿಸುತ್ತಾನೆ |
| ह्वे (आह्वयति) - ಕರೆ | आह्वाययति - ಕರೆಯಿಸುತ್ತಾನೆ |
| कृत् (कृन्तति) - ಕತ್ತರಿಸು | कर्तयति - ಕತ್ತರಿಸುವಂತೆ ಮಾಡು |
| घ्रा (जिघ्रति) - ಮೂಸು | घ्रापयति - ಮೂಸುವಂತೆ ಮಾಡು |
| जृ (जीर्यति) - ಮುಪ್ಪಾಗು | जरयति - ಅರಗಿಸು |
| पा (पिबति) - ಕುಡಿ | पाययति - ಕುಡಿಯಿಸುತ್ತಾನೆ |

ವಿಶೇಷ : ಪ್ರೇರಣಾರ್ಥಕಧಾತುಗಳಿಗೆ ಸೇರುವ ಆಖ್ಯಾತಪ್ರತ್ಯಯಗಳು ಪರಸ್ಮೈಪದ, ಆತ್ಮನೇಪದ - ಎರಡರಲ್ಲಿಯೂ ಇರಬಹುದು. ಕೆಲಕೆಲವು ಸಂದರ್ಭಗಳಲ್ಲಿ ಇವುಗಳಲ್ಲಿ ಒಂದೇ ಪ್ರಯೋಗವಾಗುತ್ತದೆ. ಉದಾ : ಆಹ್ವಾಯಯತಿ - ಕರೆಯಿಸುತ್ತಾನೆ. ಯುದ್ಧಕ್ಕೆ ಅಥವಾ ಜೂಜಿಗೆ ಕರೆಯಿಸುತ್ತಾನೆ ಎಂಬರ್ಥದಲ್ಲಿ ಆಹ್ವಾಯಯತೇ ॥

## ಧಾತುಗಳಿಗೆ ಅರ್ಥಭೇದ

೪೩. ಧಾತುಗಳಿಗೆ ಬೇರೆಬೇರೆಯ ಸಂದರ್ಭದಲ್ಲಿ ಬೇರೆಬೇರೆಯ ಅರ್ಥವಿರುತ್ತದೆ. ಈ ವಾಕ್ಯಗಳಲ್ಲಿ ಅದೇ ಕ್ರಿಯಾಪದಕ್ಕೆ ಹೇಗೆ ಬೇರೆಬೇರೆಯ ಅರ್ಥಗಳಿವೆ, ನೋಡಿರಿ :

१. तस्य रत्नानि पेटिकायां भवन्ति (ಇರುತ್ತವೆ) । २. तव पुत्रः कालेन शूरो भवति (ಆಗುತ್ತಾನೆ) । ३. बालकाः केचित् तिष्ठन्ति (ನಿಂತಿರುತ್ತಾರೆ), अन्ये धावन्ति । ४. शय्यागारे (ಮಲಗುವ ಕೋಣೆಯಲ್ಲಿ) पर्यङ्कस्तिष्ठति (ಇದೆ) । ५. नदी वेगेन वहति (ಹರಿಯುತ್ತದೆ) । ६. वायुर्मन्दं वहति (ಬೀಸುತ್ತದೆ) । ७. वृषभो भारं वहति (ಹೊರುತ್ತದೆ) । ८. सुमन्त्रो रथं वाहयति (ನಡೆಯಿಸುತ್ತಾನೆ, ಹೊಡೆಯುತ್ತಾನೆ) । ९. सुमन्त्रो रामं रथेन वाहयति (ಏರಿಸಿ ಕರೆದುಕೊಂಡು ಹೋಗುತ್ತಿದಾನೆ) । १०. रामोऽश्वं वाहयति (ಸವಾರಿಮಾಡುತ್ತಿದಾನೆ) ॥

೪೪. ಧಾತುಗಳಿಗೇ ಅನೇಕಾರ್ಥಗಳಿರುತ್ತವೆ : ಇವುಗಳಿಗೆ ಉಪಸರ್ಗಗಳು ಸೇರಿದರೆ ಕೆಲವು ಸಂದರ್ಭಗಳಲ್ಲಿ ಅವುಗಳ ಅರ್ಥವು ಮಾರ್ಪಡುತ್ತದೆ.[1]

ಈ ವಾಕ್ಯಗಳಲ್ಲಿ ಕ್ರಿಯಾಪದಗಳಿಗೆ ಉಪಸರ್ಗವಶದಿಂದ ಬಂದಿರುವ ಅರ್ಥಗಳನ್ನು ನೋಡಿರಿ :

१. हिमवतो गङ्गा प्रभवति (ತೋರಿಕೊಳ್ಳುತ್ತಾಳೆ, ಹುಟ್ಟುತ್ತದೆ) । २. भूपतिः परान् (ಶತ್ರುಗಳನ್ನು) युद्धे पराजयते (ಸೋಲಿಸು) । ३. कथमिदम् एवं संभवति (ಆದೀತು) ? ४. बहूनि वर्षाणि सुखम् अनुभवति । ५. अत्र शङ्का उद्भवति (ಎದ್ದುಕೊಳ್ಳುತ್ತದೆ, ಹುಟ್ಟುತ್ತದೆ) । ६. रक्षापुरुषश्चोरं दण्डेन प्रहरति (ಹೊಡೆಯುತ್ತಾನೆ) । ७. चोराः वसुगुप्तस्य धनम् अपसरन्ति (ಕದಿಯುತ್ತಾರೆ) । ८. छात्रः पुस्तकम् आहरति (ತರುತ್ತಾನೆ) । ९. सिंहो गजं संहरति । १०. दशरथस्य भार्या उद्याने विहरन्ति (ಅಡ್ಡಾಡುತ್ತಿದಾರೆ) । ११. मम पुत्रः कल्याणनगरं गच्छति ; तस्याऽनुजोऽपि (ತಮ್ಮನೂ) तम् अनुगच्छति (ಹಿಂಬಾಲಿಸುತ್ತಾನೆ) । १२. तत्र ते कलाविद्याशालायां (ಕಾಲೇಜಿನಲ್ಲಿ) शास्त्रम् अधिगच्छन्ति (ಕಲಿಯುತ್ತಾರೆ) । १३. ग्रीष्मे (ಬೇಸಗೆಯಲ್ಲಿ) विश्रान्तिकाले प्रत्यागच्छन्ति । १४. एवं तर्हि तव अनिष्टम् आपद्यते (ಆಗುತ್ತದೆ) । १५. ईश्वरं भजतः (ಭಜಿಸುವವನಿಗೆ) सर्वं संपद्यते (ಒದಗು, ಆಗು) । १६. स भगवन्तं प्रपद्यते (ಶರಣುಹೊಂದು) । १७. इदं नोपपद्यते (ಸರಿಯಾಗು, ಹೊಂದು) । १८. चोरो गृहं प्रविशति, पर्यङ्के उपविशति च । १९. देवि, त्वाम् अहं प्रार्थये (ಬೇಡು) । २०. त्रीणि चतुर्भिः संकलयामि (ಕೂಡಿಸು) । २१. त्रीणि व्यवकलय (ಕಳೆ) ॥

---

1. ಧಾತುಗಳಲ್ಲಡಗಿರುವ ಅರ್ಥವಿಶೇಷಗಳನ್ನೇ ಉಪಸರ್ಗಗಳು ಬೆಳಗಿ ತೋರಿಸುತ್ತವೆ - ಎಂದು ಕೆಲವರು ವೈಯಾಕರಣರ ಮತ. '**ಧಾತ್ವರ್ಥಂ ಬಾಧತೇ ಕಶ್ಚಿತ್ಕಶ್ಚಿತ್ತಮನುವರ್ತತೇ । ತಮೇವ ವಿಶಿನಷ್ಟ್ಯನ್ಯತ್ ಉಪಸರ್ಗಗತಿಸ್ತ್ರಿಧಾ ॥**' ಧಾತ್ವರ್ಥವನ್ನು ಹೊಡೆದುಹಾಕುವದು, ಅದನ್ನೇ ಅನುಸರಿಸುವದು, ವಿಶದಪಡಿಸುವದು - ಈ ಮೂರೂ ಉಪಸರ್ಗದ ಕೆಲಸವೆಂದು ಶ್ಲೋಕದ ಅರ್ಥ.

2. 'ಸಮ್ಪದ್ಯತೇ' ಎಂದೂ ಬರೆಯಬಹುದು.

ಇವು ಮುಖ್ಯ ಉಪಸರ್ಗಗಳು : अति - ಆಚೆಗೆ, ಮೀರಿ ; अधि - ಮೇಲೆ ; अभि - ಗೆ, ಕಡೆಗೆ ; उद् - ಮೇಲಕ್ಕೆ ; उप - ಹತ್ತಿರ ; नि - ಲ್ಲಿ, ಕೆಳಗೆ ; परा - ವಿರುದ್ಧ ; प्रति - ಬದಲು, ಮತ್ತೆ ; प्र - ಹೆಚ್ಚಾಗಿ ; सम् - ಕೂಡಿಕೊಂಡು, ಚೆನ್ನಾಗಿ. ಬೇರೆಬೇರೆಯ ಧಾತುಗಳಿಗೆ ಉಪಸರ್ಗವಶದಿಂದ ಆಗುವ ಅರ್ಥಭೇದ ವನ್ನು ಅಲ್ಲಲ್ಲಿ ತೋರಿಸುತ್ತಾಹೋಗುವೆವು.

## ೮. ಋ, ಓ, ಔಕಾರಾಂತ ನಾಮಗಳು

೪೫. ಈ ಕೆಳಗಿನ ಶ್ಲೋಕಗಳಲ್ಲಿರುವ ಪದಗಳನ್ನು ವಿಂಗಡಿಸಿ ಅನ್ವಯಾನುಸಾರ ವಾಗಿ ಅರ್ಥವನ್ನು ಮಾಡೋಣ :

त्वमेव माता च पिता त्वमेव । त्वमेव बन्धुश्च सखा त्वमेव ।
त्वमेव विद्या द्रविणं त्वमेव । त्वमेव सर्वं मम देवदेव ॥१॥
आपदामपहर्तारं दातारं सर्वसम्पदाम् ।
लोकाभिरामं श्रीरामं भूयो भूयो नमाम्यहम् ॥२॥

### ಪದವಿಭಾಗ

त्वम्, एव, माता, च, पिता, त्वम्, एव ; त्वम्, एव, बन्धुः, च, सखा, त्वम्, एव ; त्वम्, एव, विद्या, द्रविणम्, त्वम्, एव ; त्वम्, एव, सर्वम्, मम, देव-देव ॥१॥

आपदाम्, अपहर्तारम्, दातारम्, सर्व-सम्पदाम् ; लोक-अभिरामम्, श्री-रामम्, भूयः, भूयः, नमामि, अहम् ॥२॥

ವಿಶೇಷ : ಇಲ್ಲಿ ಉಪಸರ್ಗಗಳನ್ನು ಬಿಡಿಸಿಲ್ಲ. 'ಆ-ಪದಾಮ್, ಅಪ-ಹರ್ತಾರಮ್, ಸಮ್-ಪದಾಮ್' ಇವೆಲ್ಲ ಒಂದೊಂದೇ ಪದ. ದೇವದೇವ, ಸರ್ವಸಮ್ಪದಾಮ್, ಲೋಕಾಭಿರಾಮಮ್ - ಇವು ಸಮಾಸಗಳು. ಇವೂ ಒಂದೊಂದೇ ಪದ ; ಎಷ್ಟು ಪದಗಳು ಸೇರಿ ಒಂದು ಸಮಸ್ತಪದವಾಗಿದೆಯೆಂಬುದನ್ನು - ಹೀಗೆ ಗೀಟನಿಂದ ತೋರಿಸಿದೆ.

### ಅನ್ವಯಕ್ರಮ (ಖಂ. ೩೦, ಪು. ೩೦)

ಒಂದನೆಯ ಶ್ಲೋಕಕ್ಕೆ : (हे) देवदेव, मम माता च त्वमेव पिता (च)

त्वमेव, बन्धुश्च त्वमेव, सखा[1] (च) त्वमेव, विद्या त्वमेव, द्रविणं (ದ್ರವ್ಯವು) त्वमेव, त्वमेव मम सर्वम् ।।

ಇಲ್ಲಿ ಕಂಸದಲ್ಲಿರುವವು ಅನ್ವಯಕ್ಕಾಗಿ ಸೇರಿಕೊಂಡ ಮಾತುಗಳು, ಶ್ಲೋಕದ ವಾಕ್ಯಗಳಿಗೆ ಸುಲಭವಾಗಿ ಅರ್ಥವಾಗುತ್ತದೆ.

ಎರಡನೆಯ ಶ್ಲೋಕಕ್ಕೆ ಅನ್ವಯ : अहम् आपदाम् अपहर्तारम्, सर्व-संपदां दातारम्, लोकाभिरामं श्रीरामं भूयो भूयः नमामि ।।

**ಅರ್ಥ** : ನಾನು ಆಪತ್ತುಗಳನ್ನು ಹೋಗಲಾಡಿಸುವವನೂ ಸರ್ವಸಂಪತ್ತುಗಳನ್ನೂ ಕೊಡುವವನೂ ಆದ, ಲೋಕಕ್ಕೆಲ್ಲ ಮೆಚ್ಚಾಗಿರುವ, ಶ್ರೀರಾಮನನ್ನು ಮತ್ತೆ ಮತ್ತೆ ನಮಸ್ಕರಿಸುತ್ತೇನೆ.

ವಿಶೇಷ : ಕರ್ತೃವಾಚಕಗಳು ಹೇಳುವ ಕ್ರಿಯೆಗೆ ಕರ್ಮವಾಗಿರುವದರ ಹೆಸರು ಸಂಸ್ಕೃತದಲ್ಲಿ ಷಷ್ಠೀವಿಭಕ್ತಿಯಲ್ಲಿದ್ದರೂ ಅದನ್ನು ದ್ವಿತೀಯಾವಿಭಕ್ತಿಯಿಂದ ಕನ್ನಡಿಸಬೇಕಾಗುವದು. ಉದಾ : ಆಪದಾಮ್ ಅಪಹರ್ತಾ (ಆಪತ್ತುಗಳ ಅಪಹರ್ತೃ =) ಆಪತ್ತುಗಳನ್ನು ಹೋಗಲಾಡಿಸುವವನು.

೪೬. ಕರ್ತೃವಾಚಕ (ಕ್ರಿಯೆಯನ್ನು ಮಾಡುವವನನ್ನು ಹೇಳುವ) ಶಬ್ದಗಳು ऋ ಪ್ರತ್ಯಯಾಂತವಾಗಿದ್ದಾಗ हर्तृ (ಒಯ್ಯುವ) ಶಬ್ದದಂತೆ ನಡೆಯುತ್ತವೆ.

| ಪುಲ್ಲಿಂಗ | | | ನಪುಂಸಕಲಿಂಗ | | |
|---|---|---|---|---|---|
| हर्ता | हर्तारौ | हर्तारः | हर्तृ | हर्तृणी | हर्तृणि |
| हे हर्तः | " | " | हे हर्तृ<br>हे हर्तः | " | " |
| हर्तारम् | " | हर्तॄन् | हर्तृ | " | " |
| हर्त्रा | हर्तृभ्याम् | हर्तृभिः | हर्तृणा<br>हर्त्रा | हर्तृभ्यां | हर्तृभिः |

1. ಇದು ಇಕಾರಾಂತ ಪುಲ್ಲಿಂಗ ವಿಶೇಷಶಬ್ದ. ಸಖಾ ಸಖಾಯೌ ಸಖಾಯಃ । ಹೇ ಸಖೇ ಸಖಾಯೌ ಸಖಾಯಃ । ಸಖಾಯಮ್ ಸಖಾಯೌ ಸಖೀನ್ । ಮುಂದಕ್ಕೆ ಏಕವಚನಗಳು ಸಖ್ಯಾ, ಸಖ್ಯೇ, ಸಖ್ಯುಃ, ಸಖ್ಯುಃ, ಸಖ್ಯೌ ।। ದ್ವಿವಚನಬಹುವಚನಗಳು ಮಣಿ (ಖಂ. ೬) ಶಬ್ದದಂತೆ.

| | | | | | |
|---|---|---|---|---|---|
| हर्त्रे | " | हर्तृभ्यः | हर्तृणे<br>हर्त्रे | " | हर्तृभ्यः |
| हर्तुः | " | " | हर्तृणः<br>हर्तुः | " | " |
| " | हर्त्रोः | हर्तृणाम् | " | हर्तृणोः<br>हर्त्रोः | हर्तृणाम् |
| हर्तरि | " | हर्तृषु | हर्तृणि<br>हर्तरि | " | हर्तृषु |

ವಿಶೇಷ : (೧) ಋಕಾರಾಂತ ನಪುಂಸಕಲಿಂಗ ವಿಶೇಷಣಶಬ್ದಗಳಿಗೆ ಇಕಾರಾಂತ, ಉಕಾರಾಂತ ವಿಶೇಷಣಶಬ್ದಗಳ ರೂಪಗಳಂತೆಯೇ ಆಯಾ ವಿಭಕ್ತಿವಚನಗಳಲ್ಲಿ ಎರಡೆರಡು ರೂಪಗಳಿವೆ.

(೨) ಹೀಗೆಯೇ ಭವಿತೃ (ಆಗುವ), ಗನ್ತೃ (ಹೋಗುವ), ದಾತೃ (ಕೊಡುವ), ದ್ರಷ್ಟೃ (ನೋಡುವ), ಜೇತೃ (ಗೆಲ್ಲುವ), ನೇತೃ (ಒಯ್ಯುವ), ಕರ್ತೃ (ಮಾಡುವ), ಶಂಸ್ತೃ (ಪೊಗಳುವ) ಮನ್ತೃ (ಯೋಚಿಸುವ), - ಮುಂತಾದ ಋಕಾರಾಂತ ಕರ್ತ್ರರ್ಥಕ ಕೃದಂತವಿಶೇಷಣಗಳ ಶಬ್ದಗಳೂ ನಡೆಯುವವು.

(೩) ಇವುಗಳಿಗೆಲ್ಲ ಭವಿತ್ರೀ, ಗನ್ತ್ರೀ, ದಾತ್ರೀ, ದ್ರಷ್ಟ್ರೀ - ಮುಂತಾಗಿ ಸ್ತ್ರೀಲಿಂಗದಲ್ಲಿ ಈಕಾರಾಂತ ರೂಪಗಳಾಗುವವು ; ಅವನ್ನು ನದೀ ಶಬ್ದದಂತೆ ನಡೆಯಿಸಬೇಕು.

## ಬಂಧುವಾಚಕಗಳು

೪೭. **पितृ, मातृ** ಶಬ್ದಗಳಿಗೆ ರೂಪಗಳು ಹೀಗೆ :

| | | | | | |
|---|---|---|---|---|---|
| पिता | पितरौ | पितरः | पित्रे | पितृभ्याम् | पितृभ्यः |
| हे पितः | " | " | पितुः | " | " |
| पितरम् | " | पितॄन् | " | पित्रोः | पितॄणाम् |
| पित्रा | पितृभ्याम् | पितृभिः | पितरि | " | पितृषु |

ವಿಶೇಷ : (೧) मातृ ಶಬ್ದಕ್ಕೆ ದ್ವಿತೀಯಾ ಬಹುವಚನ मातॄः ; ಮಿಕ್ಕದ್ದು पितृ ಶಬ್ದದಂತೆ.

(೨) भर्तृ (ಗಂಡ), नप्तृ (ಮೊಮ್ಮಗ)[1] ಇವನ್ನು हर्तृ ಶಬ್ದದಂತೆ ನಡೆಯಿಸಿ.

(೩) जामातृ (ಅಳಿಯ), भ्रातृ (ಒಡಹುಟ್ಟಿದವ), देवृ (ಗಂಡನ ತಮ್ಮ, ಮೈದುನ) - ಇವುಗಳು पितृ ಶಬ್ದದಂತೆ.

(೪) दुहितृ (ಮಗಳು), ननान्दृ (ಗಂಡನ ತಂಗಿ, ನಾದಿನಿ) - ಇವು मातृ ಶಬ್ದದಂತೆ.

(೫) स्वसृ (ಸೋದರಿ) ಶಬ್ದವು हर्तृ ಶಬ್ದದಂತೆ ; ದ್ವಿ.ಬ. स्वसॄः

## ಅಭ್ಯಾಸ ೩೫

ಕನ್ನಡಿಸಿರಿ :

**१. रामो मातरं पितरं च नमस्करोति । २. सर्वस्य कर्तारं श्रीरामं वन्दामहे । ३. स हि[2] विष्णुः सनातनः । ४. परमेश्वरः सर्वस्यास्य स्रष्टा पालयिता, संहर्ता च । ५. रामस्य तिस्रो[3] मातरः । स तिसृणामपि मातॄणां शुश्रूषणे रतः । ६. वत्से (ಮಗಳೆ), भर्तारं भक्त्या अनुसर, स्वसारं तु मा विस्मर । ७. वृद्धो नप्तारं प्रीत्या कुस्यति । ८. सुग्रीवो भ्रात्रा वालिना सह बहूनि वर्षाणि युध्यते स्म (ಯುದ್ಧಮಾಡಿದನು). ९. चारो गन्ता आगन्ता च भवति । १०. सुयोधनस्य स्वसा दुश्शला भर्तुर्जयद्रथस्य कुलं (ಮನೆಗೆ) गच्छति । ११. पितुः पिता पितामहो भवति, मातुश्च माता मातामही । १२. वृद्धो दुहितरं जामात्रा सह प्रेषयति (ಕಳುಹುತ್ತಾನೆ) ॥**

೪೮. ಕೆಲವು ಬಂಧುವಾಚಕಶಬ್ದಗಳನ್ನು ಇಲ್ಲಿ ಸೌಕರ್ಯಕ್ಕಾಗಿ ಸಂಗ್ರಹಿಸಿ ಕೊಟ್ಟಿದೆ :

---

1. 'ವ್ಯಾಸಂ ವಸಿಷ್ಠನಪ್ತಾರಂ' ಮುಂತಾದ ಕಡೆಗಳಲ್ಲಿ ನಪ್ತೃಶಬ್ದಕ್ಕೆ ಮರಿಮಗ ಎಂಬರ್ಥವೂ ಇರುತ್ತದೆ.

2. ಇದನ್ನು 'ಏಕೆಂದರೆ ಅವನು' ಎಂದಾಗಲಿ, 'ಅವನೇ' ಎಂದಾಗಲಿ ಕನ್ನಡಿಸಬೇಕು.

3. ಸ್ತ್ರೀಲಿಂಗದಲ್ಲಿ ತ್ರಿ ಶಬ್ದಕ್ಕೆ ತಿಸ್ರಃ, ತಿಸ್ರಃ, ತಿಸೃಭಿಃ ; ತಿಸೃಭ್ಯಃ, ತಿಸೃಭ್ಯಃ, **ತಿಸೃಣಾಮ್**, **ತಿಸೃಷು** – ಎಂದು ರೂಪಗಳು. ಈ ಗ್ರಂಥದ ಒಂದನೆಯ ಭಾಗದ ೩೩ನೇ ಪಾಠವನ್ನು ನೋಡಿ.

ಹೊಟ್ಟೆಯಲ್ಲಿ

| | |
|---|---|
| ತಾಯಿ - माता | ಮಗನೂ ಮಗಳೂ - पुत्रौ |
| ಹಡೆದ ತಾಯಿ - जननी | ಒಡಹುಟ್ಟಿದವ - भ्राता, सोदरः |
| ತಂದೆ - पिता | ಒಡಹುಟ್ಟಿದವಳು - स्वसा |
| ಹುಟ್ಟಿಸಿದ ತಂದೆ - जनकः | ತಮ್ಮ - अनुजः |
| ತಾಯಿತಂದೆಗಳು - मातापितरौ | ಅಣ್ಣ - अग्रजः |
| ಮಗ - पुत्रः | ತಂದೆಯ ಸೋದರಿ, ಸೋದರತ್ತೆ - मातुलानी |
| ಮಗಳು - पुत्री, दुहिता | ದೊಡ್ಡಪ್ಪ, ಚಿಕ್ಕಪ್ಪ - पितृव्यः |
| ಹುಟ್ಟಿದ ಮಗ - औरसपुत्रः | ಸೋದರಮಾವ - मातुलः |
| ಮೊಮ್ಮಗ - पौत्रः, नप्ता | ಹೆಂಡತಿಯ ಸೋದರ, ಮೈದುನ - श्यालः |
| ಮರಿಮಗ - प्रपौत्रः, नप्ता | ಗಂಡನ ಸೋದರ - देवा, देवरः |
| ಅಜ್ಜ, ತಂದೆಯ ತಂದೆ - पितामहः | ಸೋದರತ್ತೆಯ ಮಗ - पैतृस्वस्रेयः |
| ಮುತ್ತಜ್ಜ - प्रपितामहः | ತಾಯಿಯ ಸೋದರಿಯ ಮಗ - मातृस्वस्रेयः |
| ಅಣ್ಣ(ತಮ್ಮ)ನ ಮಗ - भ्रात्रीयः | ಅಳಿಯ - जामाता |
| ಅತ್ತೆಮಾವಂದಿರು - श्वशुरौ | ಸೊಸೆ - स्नुषा, वधूः |
| ಗಂಡ - पतिः, भर्ता | ತಂಗಿಯ ಗಂಡ, ಭಾವ - आवुत्तः |
| ಹೆಂಡತಿ - सती, भार्या | ಅಣ್ಣತಮ್ಮಂದಿರ ಹೆಂಡಂದಿರು - यातरः |
| ಗಂಡಹೆಂಡಿರು - दम्पती | ಗಂಡನ ತಂಗಿ, ನಾದಿನಿ - ननान्दा |
| ಅತ್ತೆ - श्वश्रूः | ಮಾವ - श्वशुरः |

ಅಕ್ಕನ (ತಂಗಿಯ) ಮಗ - स्वस्रीयः, भागिनेयः

## ಓಕಾರಾಂತ ಔಕಾರಾಂತ ಶಬ್ದಗಳು

೪೯. ಓಕಾರಾಂತ, ಔಕಾರಾಂತ ಶಬ್ದಗಳು ಬಹಳ ಕಡಿಮೆ. ಮಾದರಿಗಾಗಿ ಕೊಟ್ಟಿದೆ.

## (१) ओकारान्तः पुल्लिङ्गः स्त्रीलिङ्गश्च गोशब्दः

१. गौः गावौ गावः । हे गौः गावौ गावः । २. गाम् गावौ गाः । ३. गवा गोभ्याम् गोभिः । ४. गवे गोभ्याम् गोभ्यः । ५. गोः गोभ्याम् गोभ्यः । ६. गोः गवोः गवाम् । ७. गवि गवोः गोषु ॥

ಗೋಶಬ್ದದ ಅರ್ಥವನ್ನು ವಿಶೇಷಣಗಳಿಂದ, ಅಥವಾ ವಾಕ್ಯಸಂದರ್ಭದಿಂದ ಗೊತ್ತುಪಡಿಸಬೇಕು. ಉದಾಹರಣೆಗೆ :

अयं बलवान् गौः - ಇದು ಬಲವಾದ ಎತ್ತು. अस्य गोः द्वितीयोऽपेक्षितः - ಈ ಎತ್ತಿಗೆ ಎರಡನೆಯದು( = ಜೋಡಿಯು)ಬೇಕು. इयं गौः प्रभूतं क्षीरं यच्छति - ಈ ಹಸು ಬಹಳ ಹಾಲನ್ನು ಕೊಡುತ್ತದೆ. अस्या गोश्चत्वारो वत्साः - ಈ ಹಸುವಿಗೆ ನಾಲ್ಕು ಕರುಗಳು.

ಇದರಂತೆ द्यौः (ಸ್ತ್ರೀಲಿಂಗ) = ಸ್ವರ್ಗ.

## औकारान्तः स्त्रीलिङ्गो नौ शब्दः (ದೋಣಿ, ಹಡಗು)

१. नौः नावौ नावः । हे नौः नावौ नावः । २. नावम् नावौ नावः । ३. नावा नौभ्याम् नौभिः । ४. नावे नौभ्याम् नौभ्यः । ५. नावः नौभ्याम् नौभ्यः । ६. नावः नावोः नावाम् । ७. नावि नावोः नौषु ॥

ಇದರಂತೆ ग्लौः (ಪುಲ್ಲಿಂಗ) = ಚಂದ್ರ.

## ಅಭ್ಯಾಸ ೩೬

ಕನ್ನಡಿಸಿ :

१. अस्या गोः आपीनं (ಕೆಚ್ಚಲು) बृहत् । २. अयम् अस्यास्तर्णकः (ಹೊಸದಾಗಿ ಹುಟ್ಟಿದ ಕರು) । ३. अस्य गोपस्य प्राङ्गणे द्वौ दम्यौ (ಹೋರಿಗಳು) वर्तेते । ४. अत्र धूर्वहान् (ಭಾರಹೊರುವ) वृषभान् पश्यामः । ५. गोपी कदा गां क्षीरं दोग्धि[1] (ಕರೆಯುತ್ತಾಳೆ) ? ६. किं क्षेपणीं (ಹುಟ್ಟು) विना

1. ಇದು ೨ನೆಯ ಗಣದ ಧಾತು. ದೋಗ್ಧಿ ದುಗ್ಧಃ ದುಹನ್ತಿ - ಎಂದು ರೂಪಗಳು. ಇದನ್ನು ಈ ಗ್ರಂಥದ ೩ನೆಯ ಭಾಗದಲ್ಲಿ ವಿವರಿಸಲಾಗುವದು.

नावं नयति कुशलः कैवर्तकः (ಬೆಸ್ತರವನು) ? ७. अस्यां नावि बहून् सांयात्रिकान् (ಹಡಗಿನ ವರ್ತಕರು) पश्यामः ॥

## ೯. ಕೆಲವು ವ್ಯಂಜನಾಂತಶಬ್ದಗಳು

೫೦. ವಿಭಕ್ತಿಪ್ರತ್ಯಯಗಳನ್ನು ನೇರಾಗಿ ಸೇರಿಸುವದರಿಂದ ಸಂಸ್ಕೃತವ್ಯಂಜನಾಂತ ಶಬ್ದಗಳ ರೂಪಗಳಾಗುತ್ತವೆ. ಆದ್ದರಿಂದ ಅವನ್ನು ಸುಲಭವಾಗಿ ನೆನಪಿನಲ್ಲಿಟ್ಟು ಕೊಳ್ಳಬಹುದು.

ತಕಾರನ್ತಃ ಪುಲ್ಲಿಙ್ಗೋ ಮರುಚ್ಛಬ್ದಃ

| ಪ್ರತ್ಯಯಗಳು | | | | ಮರುತ್ - ಗಾಳಿ, ದೇವತೆ | | |
|---|---|---|---|---|---|---|
| स् | औ | अस् | १. | मरुत् | मरुतौ | मरुतः |
| अम् | औ | अस् | सं | मरुद् | " | " |
| आ | भ्याम् | भिस् | २. | मरुतम् | " | " |
| ए | भ्याम् | भ्यस् | ३. | मरुता | मरुद्भ्याम् | मरुद्भिः |
| अस् | भ्याम् | भ्यस् | ४. | मरुते | " | मरुद्भ्यः |
| अस् | ओस् | आम् | ५. | मरुतः | " | " |
| इ | ओस् | सु | ६. | " | मरुतोः | मरुताम् |
| | | | ७. | मरुति | " | मरुत्सु |

ವಿಶೇಷ : ಶಬ್ದಾಂತ್ಯದ ಸಕಾರಕ್ಕೆ ವಿಸರ್ಗ. ಉದಾ : **ಮರುತ್ + ಅಸ್ = ಮರುತಃ**, ಪದದ ಕೊನೆಯಲ್ಲಿ ಅನೇಕ ವ್ಯಂಜನಗಳಿದ್ದರೆ ಮೊದಲನೆಯದು ಮಾತ್ರ ಉಳಿದುಕೊಳ್ಳುವದು. ಉದಾ : **ಮರುತ್ + ಸ್ = ಮರುತ್**. ಶಬ್ದಾಂತ್ಯದಲ್ಲಿರುವ ಅನನುನಾಸಿಕ ವರ್ಗೀಯವ್ಯಂಜನಕ್ಕೆ ಮೊದಲನೆಯ ಅಥವಾ ಮೂರನೆಯ ವ್ಯಂಜನವು ಬರುತ್ತದೆ. ಉದಾ : **ಮರುತ್ - ಮರುದ್**.

೫೧. ಶಬ್ದದ ಕೊನೆಯಲ್ಲಿ ಅನನುನಾಸಿಕ (ಅಂದರೆ ಙ, ಞ, ಣ, ನ, ಮ ಗಳನ್ನುಳಿದ) ವರ್ಗೀಯವ್ಯಂಜನವಿದ್ದು ಮೃದುವ್ಯಂಜನವು ಬಂದರೆ ಆಯಾ ವರ್ಗದ ಮೂರನೆಯ ವರ್ಣ (ಗ ಜ ಡ ದ ಬ)ಗಳು ಬರುವವು. (ಪಾಣಿನಿಯ ವ್ಯಾಕರಣ ದಲ್ಲಿ ಜ ಬ ಗ ಡ ದ - ಈ ವರ್ಣಗಳಿಗೆ ಜಶ್ ಎಂಬ ಸಂಜ್ಞೆಯಿದೆ. ಆದ್ದರಿಂದ ಇದನ್ನು ಜಶ್ತ್ವಸಂಧಿ ಎನ್ನುವರು.) ಉದಾ : **मरुद्भ्याम्, मरुद्भिः, मरुद्भ्यः** ॥

ವಾಕ್ಯದಲ್ಲಿಯೂ ಹೀಗೆಯೇ ಪದಾಂತ್ಯವರ್ಗೀಯವ್ಯಂಜನಕ್ಕೆ ಮೃದುವರ್ಣವು ಪರವಾದರೆ, ಅಥವಾ ಸ್ವರವು ಪರವಾದರೆ ಜಶ್ತ್ವ ಬರುತ್ತದೆ. ಉದಾ : सम्यक् इति - सम्यगिति (ಒಳ್ಳೆಯದೆಂದು) ; सम्राट् अयम् - सम्राडयम् (ಚಕ್ರವರ್ತಿಯಿವನು) ; नगरात् जनाः, नगराद् जनाः - नगराज्जनाः ; तत् झल्लकम्, तद् झल्लकम् - तज्झल्लकम् ॥

ಇಲ್ಲಿ ಕೊಟ್ಟಿರುವ ಕೊನೆಯ ಎರಡು ಉದಾಹರಣೆಗಳಲ್ಲಿ ತಕಾರಕ್ಕೆ ಜಶ್ತ್ವವು (ದಕಾರವು) ಬಂದಿರುವದಲ್ಲದೆ ದಕಾರಕ್ಕೆ ಮತ್ತೆ ಜಕಾರವೂ ಬಂದಿದೆ. ಇದಕ್ಕೆ :-

**ಸಂಧಿನಿಯಮ : ಸಕಾರತವರ್ಗಗಳಿಗೆ ಶಕಾರಚವರ್ಗಗಳು ಪರವಾದರೆ ಅವಕ್ಕೆ ಕ್ರಮವಾಗಿ ಶಕಾರ ಚವರ್ಗಗಳು ಆದೇಶ. ಉದಾ : ನಗರಾತ್ ಚ - ನಗರಾಚ್ಚ ; ನಗರಾತ್ ನ - ನಗರಾನ್ನಃ ; ಯಶಸ್ ಚನ್ದ್ರಃ - ಯಶಶ್ಚನ್ದ್ರಃ (ಕೀರ್ತಿ ಎಂಬ ಚಂದ್ರನು).**

೫೨. मरुत् ಶಬ್ದದಂತೆ ನಡೆಯುವ ಶಬ್ದಗಳು : पुण्यकृत् (ಪುಣ್ಯವನ್ನು ಮಾಡಿದವನು), दुष्कृत् (ಕೆಟ್ಟದ್ದನ್ನು, ಪಾಪವನ್ನು, ಮಾಡಿದವನು), जाग्रत् (ಎಚ್ಚತ್ತಿರುವವನು), शासत् (ಆಳುವವನು) - ಇವೆಲ್ಲ ಪುಲ್ಲಿಂಗ. हरित् (ದಿಕ್ಕು), विद्युत् (ಮಿಂಚು) - ಇವು ಸ್ತ್ರೀಲಿಂಗ. ತಕಾರಾಂತನಪುಂಸಕಲಿಂಗಗಳಿಗೆ ಪುಲ್ಲಿಂಗದಂತೆಯೇ ರೂಪ. ಉದಾ : १. , सं., २. - जगत्, जगती, जगन्ति । ಮಿಕ್ಕದ್ದು ಪುಲ್ಲಿಂಗದಂತೆ ३. जगता जगद्भ्याम् जगद्भिः - ಇತ್ಯಾದಿ.

ಚಕಾರಾಂತ ಶಬ್ದಗಳನ್ನು ತಕಾರಾಂತಶಬ್ದಗಳಂತೆಯೇ ನಡೆಯಿಸಬಹುದು. (ಚಕಾರದ ಸ್ಥಾನದಲ್ಲಿ ಕಕಾರ, ದಕಾರದ ಸ್ಥಾನದಲ್ಲಿ ಗಕಾರ ಇವು ಬರುವವು, ಅಷ್ಟೆ.) ಉದಾಹರಣೆಗೆ सुवाक् (ಒಳ್ಳೆಯ ಮಾತಿನವ) ಈ ಶಬ್ದಕ್ಕೆ ४. सुवाक्-ग्, ५. सुवाचौ, सुवाचः । ६. सुवाचा सुवाग्भ्याम् सुवाग्भिः । ७. सुवाचि सुवाचोः सुवाक्षु ॥ ಮಿಕ್ಕದ್ದನ್ನು ನೀವೇ ಊಹಿಸಬಹುದು.

೫೩. ಪರಸ್ಮೈಪದಿ ಧಾತುಗಳಿಗೆ 'अत' ಪ್ರತ್ಯಯವೂ, ಆತ್ಮನೇಪದಿ ಧಾತುಗಳಿಗೆ 'मान' ಅಥವಾ 'आन' ಪ್ರತ್ಯಯವೂ ಸೇರಿದರೆ ವರ್ತಮಾನ. ಕೃದಂತಗಳಾಗುವವು. ಇವುಗಳೊಳಗೆ 'ಮಾನ' 'ಆನ' ಪ್ರತ್ಯಯಗಳು ಕೊನೆಯಲ್ಲಿ

ರುವ ಶಬ್ದಗಳು ಅಕಾರಾಂತ. ಆದ್ದರಿಂದ ಅವನ್ನು ಪುಲ್ಲಿಂಗದಲ್ಲಿ देव (ನಪುಂಸಕದಲ್ಲಿ अम्बर) ಶಬ್ದದಂತೆ (ಪಾ. ೩೧) ನಡೆಯಿಸಬೇಕು. ಉದಾಹರಣೆಗೆ

**ಆತ್ಮನೇಪದಿ ಧಾತುಗಳ ಕೃದಂತಗಳು** : ಪುಲ್ಲಿಂಗ : ईक्षमाणः, ईक्षमाणौ ईक्षमाणाः । ನಪುಂಸಕ : ईक्षमाणम् ईक्षमाणे ईक्षमाणानि । ಹೀಗೆಯೇ लभमानः, युध्यमानः, चेतयमानः ; कुर्वाणः कुर्वाणौ कुर्वाणाः ಇತ್ಯಾದಿ.

**ಪರಸ್ಮೈಪದಿ ಧಾತುಗಳ ಕೃದಂತಗಳು**

| ೧ | ೬ | ೪ |
|---|---|---|
| भू - भवन् | इष् - इच्छन् | दृश् - पश्यन् |
| गम् - गच्छन् | दिश - दिशन् | कुप् - कुप्यन् |
| पत् - पतन् | तुद् - तुदन् | शुष् - शुष्यन् |
| स्था - तिष्ठन् | मुच् - मुञ्चन् | दिव् - दीव्यन् |
| पा - पिबन् | प्रच्छ् - पृच्छन् | सिव् - सीव्यन् |

| ೧೦ | **ಪ್ರೇರಣಾರ್ಥ (೩೦. ೨೬)** | **ಬೇರೆಯ ಗಣಗಳು** |
|---|---|---|
| कथ् - कथयन् | बोधय - बोधयन् | अस् - सन् |
| पूज् - पूजयन् | स्थापय - स्थापयन् | कृ - कुर्वन् |
| प्री - प्रीणयन् | जनय - जनयन् | ज्ञा - जानन् |
| चुर् - चोरयन् | अर्पय - अर्पयन् | ग्रह् - गृह्णन् |
| तड् - ताडयन् | दर्शय - दर्शयन् | अश् - अश्नन् |

ವರ್ತಮಾನ ಕ್ರಿಯಾಪದಗಳ ಪ್ರಥಮಪುರುಷದ ಬಹುವಚನ (ಅನ್ತಿ) ಪ್ರತ್ಯಯವನ್ನು ತೆಗೆದುಹಾಕಿ ಅತ್ (ಅಥವಾ ಮಾನ ಅಥವಾ ಆನ) ಪ್ರತ್ಯಯುವನ್ನು ಸೇರಿಸಿದರೆ ವರ್ತಮಾನ ಕೃದಂತವಾಗುವವು. ಅತ್ ಪ್ರತ್ಯಯಾಂತವಾದ ಶಬ್ದಗಳನ್ನೆಲ್ಲ ಹೀಗೆ ನಡೆಯಿಸಿಕೊಳ್ಳಬೇಕು.

भवत् ಪುಲ್ಲಿಂಗ : भवन्[1] भवन्तौ भवन्तः । हे भवन् भवन्तौ भवन्तः । भवन्तम् भवन्तौ भवतः । भवता भवद्भ्याम् भवद्भिः । भवते भवद्भ्याम् भवद्भ्यः । भवतः भवद्भ्याम् भवद्भ्यः । भवतः भवतोः भवताम् । भवति भवतोः भवत्सु ॥

ಇಲ್ಲಿ ತೃತೀಯಾವಿಭಕ್ತಿಯಿಂದ ಮರುತ್ ಶಬ್ದದಂತೆಯೇ ರೂಪಗಳಿರುವದನ್ನು ಲಕ್ಷಿಸಿರಿ.

೫೪. ವರ್ತಮಾನ ಕೃದಂತಗಳನ್ನು ಕನ್ನಡಿಸುವ ಬೇರೆಬೇರೆಯ ಪ್ರಕಾರಗಳನ್ನು ಇಲ್ಲಿ ನೋಡಿ :

१. मार्गे गच्छन् स रत्नमेकं दृष्टवान् । २. मार्गे गच्छन्तं ब्राह्मणं भूपः पृच्छति । ३. छात्रान् संस्कृतं शिक्षमाणान् पश्यामः । ४. दरिद्रोऽपि सन् अयं सर्वेषां प्रियः । ५. आकाशे प्रकाशमानानि नक्षत्राणि तं प्रहसन्तीव ॥

೧. ದಾರಿಯಲ್ಲಿ ಹೋಗುತ್ತಿರುವಲ್ಲಿ ಅವನು ಒಂದು ರತ್ನವನ್ನು ಕಂಡನು. ೨. ದಾರಿಯಲ್ಲಿ ಹೋಗುತ್ತಿರುವ ಬ್ರಾಹ್ಮಣನನ್ನು ದೊರೆಯು (ಹೀಗೆಂದು) ಕೇಳುತ್ತಾನೆ. ೩. ಸಂಸ್ಕೃತವನ್ನು ಕಲಿಯುತ್ತಿರುವ ಶಿಷ್ಯರನ್ನು (ಅಥವಾ, ಶಿಷ್ಯರು ಸಂಸ್ಕೃತವನ್ನು ಕಲಿಯುತ್ತಿರುವದನ್ನು) ಕಾಣುತ್ತೇವೆ. ೪. ಇವನು ದರಿದ್ರನಾಗಿದ್ದರೂ ಎಲ್ಲರಿಗೂ ಪ್ರಿಯ. ೫. ಆಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳು ಅವನನ್ನು (ನೋಡಿ) ನಗುತ್ತಿರುವಂತಿವೆ.

ವಿಶೇಷ : ವರ್ತಮಾನ ಕೃದಂತಗಳನ್ನು ಕೆಲವು ವೇಳೆ ಕೃದಂತಾವ್ಯಯದಿಂದಲೂ ಕನ್ನಡಿಸಬೇಕಾಗುತ್ತದೆ. ಆಗಲೂ ಅವು ನಾಮವಿಶೇಷಣಗಳೇ ಆಗಿರುವದರಿಂದ ಅವಕ್ಕೆ ಸಂಸ್ಕೃತದಲ್ಲಿ ವಿಶೇಷ್ಯದ ಲಿಂಗವಿಭಕ್ತಿವಚನಗಳೇ ಇರಬೇಕು.

## ವರ್ತಮಾನಕೃದಂತಗಳ ಸ್ತ್ರೀಲಿಂಗದ ಮತ್ತು ನಪುಂಸಕಲಿಂಗದ ರೂಪಗಳು

೫೫. ಈ ವಾಕ್ಯಗಳಲ್ಲಿ ವರ್ತಮಾನ ಕೃದಂತಗಳ ಸ್ತ್ರೀಲಿಂಗದ ಮತ್ತು ನಪುಂಸಕಲಿಂಗದ ರೂಪಗಳು ಹೇಗೆ ಆಗಿವೆ ?

१. मेनकायाः तत्र तथा वसन्त्याः कति वर्षाणि गतानि ? २. गीतं

---

1. ನೀನು ಎಂಬರ್ಥವಿರುವ 'ಭವತ್' ಶಬ್ದಕ್ಕೆ ಭವಾನ್ ಭವನ್ತೌ ಭವನ್ತಃ - ಎಂದು ಪ್ರ. (ಒಂದನೆಯ ಭಾಗ ಪಾ. ೪೬) ಮಿಕ್ಕದ್ದು ಭಗವತ್ ಶಬ್ದದಂತೆ.

शिक्षमाणा बाला तस्यां कलायां निपुणा जायते[1] । ३. नृत्यन्ती मांसं भक्षयन्ती च राक्षसी पदे पदे हसति । ४. रामायणं पठन्ती मित्रे पश्यामि । ५.साधोः पेटिकां चोरयन्तीं तां दुष्टां पश्यन्ति रक्षापुरुषाः । ६. तां किमपि पत्रं लिखन्तीम् (लिखतीम्) अश्रूणि च मुञ्चन्तीं (मुञ्चतीं) पश्यामः । ७. इतस्ततः परिभ्रमन्ती वानरी देवालयं प्रविशति । ८. किं चिरेण आगच्छन्ती मित्रे कुशलं न पृच्छसि ? ९. भक्त्या वन्दमानां दुहितरं पिता एवं वदति । १०. हितम् उपदिशन्ती (उपदिशती) द्वे मित्रे मम समीपे स्तः ॥

೧. ಮೇನಕೆ ಅಲ್ಲಿ ಹಾಗೆ ವಾಸಮಾಡಿಕೊಂಡಿರುವಲ್ಲಿ ಎಷ್ಟು ವರ್ಷಗಳಾದವು ? ೨. ಗೀತವನ್ನು ಕಲಿಯುತ್ತಿರುವ ಹುಡುಗಿ ಆ ಕಲೆಯಲ್ಲಿ ನಿಪುಣಳಾಗುತ್ತಾಳೆ.[1] ೩. ರಾಕ್ಷಸಿಯು ಕುಣಿಯುತ್ತಲೂ ಮಾಂಸವನ್ನು ತಿನ್ನುತ್ತಲೂ ಹೆಜ್ಜೆಹೆಜ್ಜೆಯಲ್ಲಿ (= ಹೆಜ್ಜೆಹೆಜ್ಜೆಗೂ, ಮತ್ತೆ ಮತ್ತೆ) ನಗುತ್ತಿರುತ್ತಾಳೆ. ೪. ರಾಮಾಯಣವನ್ನು ಓದುತ್ತಿರುವ (ಇಬ್ಬರು) ಮಿತ್ರರುಗಳನ್ನು ನೋಡುತ್ತಿದ್ದೇನೆ (= ಮಿತ್ರರಿಬ್ಬರೂ ರಾಮಾಯಣವನ್ನು ಓದುತ್ತಿರುವದು ಕಾಣಿಸುತ್ತಿದೆ). ೫. ಸಾಹುಕಾರನ ಪೆಟ್ಟಿಗೆಯನ್ನು ಕದಿಯುತ್ತಿರುವ ಆ ದುಷ್ಟಳನ್ನು ಪೋಲೀಸಿನವರು ಕಾಣುತ್ತಾರೆ. ೬. ಆಕೆಯು ಯಾವದೋ ಪತ್ರವನ್ನು ಬರೆಯುತ್ತಾ ಕಣ್ಣೀರನ್ನು ಬಿಡುತ್ತಿರುವದನ್ನು ಕಾಣುತ್ತಿದ್ದೇವೆ (= ಕಣ್ಣೀರು ಸುರಿಸುತ್ತಿರುವದು ಕಾಣಿಸುತ್ತಿದೆ.) ೭. ಅತ್ತಿತ್ತ ಸುತ್ತಾಡುತ್ತಾ ಹೆಣ್ಣುಕೋತಿಯು ದೇವಾಲಯವನ್ನು ಹೊಗುತ್ತದೆ. ೮. ಬಹುಕಾಲಕ್ಕೆ ಬರುತ್ತಿರುವ (= ಬಂದಿರುವ) (ಇಬ್ಬರು) ಮಿತ್ರರನ್ನು ಕುಶಲವನ್ನು (= ಮಿತ್ರರ ಕ್ಷೇಮವನ್ನು) ನೀನು ಕೇಳುವದಿಲ್ಲವೇನು ? ೯. ಭಕ್ತಿಯಿಂದ ನಮಸ್ಕರಿಸುತ್ತಿರುವ ಮಗಳನ್ನು ಕುರಿತು ತಂದೆ ಹೀಗೆನ್ನುತ್ತಾನೆ. ೧೦. ಹಿತವನ್ನು ಉಪದೇಶಿಸುತ್ತಿರುವ ಮಿತ್ರರುಗಳಿಬ್ಬರು ನನ್ನ ಹತ್ತಿರ ಇರುತ್ತಾರೆ.

ವಿಶೇಷ : (೨) ಗಣಚಿಹ್ನೆಯುಳ್ಳ ರೂಪಗಳಿರುವ ಅತ್ ಪ್ರತ್ಯಯವುಳ್ಳ ವರ್ತಮಾನ ಕೃದಂತಗಳಿಗೆ ಸಾಮಾನ್ಯವಾಗಿ ಸ್ತ್ರೀಲಿಂಗವು ('ವಸನ್ತೀ' ಎಂಬಂತೆ) ಈಕಾರಾಂತವಾಗುವದು. ಆರನೆಯ ಗಣದ ಧಾತುಗಳಿಗೆ ಈ ಸಂದರ್ಭದಲ್ಲಿ (ಅನ್ತೀ ಪ್ರತ್ಯಯದ) ನಕಾರವು ಬರುವದು

---

1. ಜನ್ ಧಾತುವಿಗೆ 'ಹುಟ್ಟು' ಎಂಬರ್ಥವಲ್ಲದೆ ಕೆಲವು ಸಂದರ್ಭಗಳಲ್ಲಿ 'ಆಗು' ಎಂಬರ್ಥವೂ ಇರುತ್ತದೆ.

ವಿಕಲ್ಪ (ಬರಬಹುದು, ಬಾರದೆಯೂ ಇರಬಹುದು) ; ಮಿಕ್ಕ ಗಣಗಳ ಕೃದಂತಗಳಿಗೆ ನಕಾರ ವಿಲ್ಲ.

(೨) ಎರಡನೆಯ ಗಣದ ಆಕಾರಾಂತಧಾತುಗಳಿಗೂ ವಿಕಲ್ಪ. ಉದಾ : ಯಾನ್ತೀ, ಯಾತೀ.

(೩) ನಪುಂಸಕಲಿಂಗದ ಪ್ರ.ಸಂ.ದ್ವಿ. - ಈ ವಿಭಕ್ತಿಗಳ ದ್ವಿವಚನಕ್ಕೂ ಇದೇ ನಿಯಮ, ಉದಾ : ಬೋಧತ್ ಬೋಧನ್ತೀ - ಬೋಧತೀ ಬೋಧನ್ತಿ । ಯಾತ್ ಯಾನ್ತೀ - ಯಾತೀ ಯಾನ್ತಿ । ತುದತ್ ತುದನ್ತೀ - ತುದತೀ ತುದನ್ತಿ ॥ ಇತ್ಯಾದಿ.

## ಸ್ತ್ರೀಲಿಂಗರೂಪಗಳ ಉದಾಹರಣೆಗಳು

೧ನೆಯ ಗಣ : भवन्ती, क्रीडन्ती, पिबन्ती, जिघ्रन्ती, धावन्ती, पश्यन्ती-ಇತ್ಯಾದಿ.

೪ನೆಯ ಗಣ : कुप्यन्ती, नृत्यन्ती, नश्यन्ती, दीव्यन्ती, भ्राम्यन्ती - ಇತ್ಯಾದಿ.

೬ನೆಯ ಗಣ : लिखती - लिखन्ती, तुदती -तुदन्ती, सृजती - सृजन्ती, स्पृशती - स्पृशन्ती - ಇತ್ಯಾದಿ.

೧೦ನೆಯ ಗಣ : कथयन्ती, गणयन्ती, पूजयन्ती, क्षालयन्ती - ಇತ್ಯಾದಿ.

೨ನೆಯ ಗಣ : याती - यान्ती, अदती, सती - ಇತ್ಯಾದಿ.

ಮಿಕ್ಕ ಗಣಗಳಿಗೆ : ददती, सुन्वती, गृह्णती, तन्वती - ಇತ್ಯಾದಿ.

**ಮಿಕ್ಕ ಗಣಗಳ ಧಾತುಗಳ ವಿಚಾರಕ್ಕೆ ಮೂರನೆಯ ಭಾಗವನ್ನು ನೋಡಿ.**

## ನಪುಂಸಕಲಿಂಗ

(೧) ಪ್ರ. ಸಂ. ೨. भवत् भवन्ती भवन्ति । (पचत्, दीव्यत्, चोरयत् - ಇವುಗಳೂ ಹೀಗೆಯೇ.)

(೨) ,, अदत् अदती अदन्ती । (सुन्वत्, तन्वत्, रुन्धत्, क्रीणत् ಇವೂ ಹೀಗೆಯೇ.)

(೩) ,, यात् याती-यान्ती यान्ति । (ಆಕಾರಾಂತ ೨ನೆಯ ಗಣದ ಧಾತುಗಳ ಕೃದಂತಗಳೂ ಹೀಗೆಯೇ.)

(೪) ,, तुदत् तुदती-तुदन्ती तुदन्ति । (करिष्यत् ಮುಂತಾದ ಭವಿಷ್ಯತ್ಕೃದಂತಗಳೂ ಹೀಗೆಯೇ.)

(೫) ,, ददत् ददती ददन्ति-ददति । (ಮೂರನೆಯ ಗಣದ ಧಾತುಗಳ ವರ್ತಮಾನಕೃದಂತಗಳೂ ಹೀಗೆಯೇ.)

ವಿಶೇಷ : ನಪುಂಸಕಕೃದಂತಗಳ ದ್ವಿವಚನಗಳನ್ನೂ ವರ್ತಮಾನಕೃದಂತಗಳ ಸ್ತ್ರೀಲಿಂಗದ ರೂಪವನ್ನೂ ಹೋಲಿಸಿರಿ.

## ಉಳ್ಳ ಎಂಬರ್ಥದ ವತ್, ಮತ್ ಪ್ರತ್ಯಯಾಂತಗಳು

೫೭. ವತ್ ಪ್ರತ್ಯಯಾಂತ ಭೂತಕೃದಂತಗಳನ್ನೂ ಉಳ್ಳ ಎಂಬರ್ಥದ ವತ್, ಮತ್ ಪ್ರತ್ಯಯಾಂತಶಬ್ದಗಳನ್ನೂ ನಡೆಯಿಸುವ ಬಗೆಯನ್ನು ಒಂದನೆಯ ಭಾಗದ ಪಾಠ (೩೫, ೩೭)ಗಳಲ್ಲಿ ತಿಳಿಯಿಸಿದೆ. ನೆನಪಿಗೆ ತರುವದಕ್ಕಾಗಿ ಇವಕ್ಕೆ ಇಲ್ಲಿ ಮತ್ತೆ ಕೆಲವು ಉದಾಹರಣೆಗಳನ್ನೂ ಕೊಟ್ಟಿದೆ.

ಇವಕ್ಕೆ ಪ್ರ.ಸಂ.ದ್ವಿ - ಈ ವಿಭಕ್ತಿಗಳಲ್ಲಿ ಮಾತ್ರ ವಿಶೇಷ ; ಮಿಕ್ಕದ್ದೆಲ್ಲ मरुत् ಶಬ್ದದಂತೆ. (೧ನೆಯ ಭಾಗ ೪೭ನೆಯ ಪಾಠವನ್ನು ನೋಡಿ.) ಉದಾಹರಣೆ :

धनवान् धनवन्तौ धनवन्तः । हे धनवन् धनवन्तौ धनवन्तः । धनवन्तम् धनवन्तौ धनवतः । धनवता धनवद्भ्याम् धनवद्भिः । ಇತ್ಯಾದಿ.

**ನಪುಂಸಕಲಿಂಗ** : ೧, ಸಂ., ೨ धीमत् धीमती धीमन्ति । (ಮಿಕ್ಕದ್ದು ಪುಲ್ಲಿಂಗದಂತೆ).

## ಅಭ್ಯಾಸ ೩೭

ಇಲ್ಲಿ ಕಂಸದಲ್ಲಿಟ್ಟಿರುವ ಶಬ್ದಗಳ ವಿಭಕ್ತಿರೂಪಗಳನ್ನು ಜೋಡಿಸಿ ವಾಕ್ಯಗಳನ್ನು ಬರೆದು ಕನ್ನಡಿಸಿರಿ : (ವಿಭಕ್ತಿಗಳನ್ನು ಸಂಖ್ಯೆಯಿಂದ ಸೂಚಿಸಿದೆ.)

१. भगवान् (आदित्य ६) विष्णुः अस्ति, (मरुत् ६) च मरीचिः । २. (भगवान् ६) विभूतीनां नान्तोऽस्ति । ३. शुचीनां (श्रीमत् ६) गेहे (ಮನೆಯಲ್ಲಿ) योगभ्रष्टो (ಯೋಗದಿಂದ ಜಾರಿಬಿದ್ದವನು) जायते । ४. अस्मिन्

लोके स इव (वीर्यवत् १) कोऽस्ति ? ५. अग्नौ (पतितवत् १) कश्चन वृश्चिकः (ಚೇಳು) । ६. कवयः सदा (कीर्तिमत् १) विराजन्ते । ७. (वसुमत् २ ಧನವಂತನನ್ನು) सर्वेऽपि शंसन्ति । ८. क्षीरम् (इच्छत् ४) बालिकायै किञ्चिद् यच्छ । ९. नाभावो विद्यते (सत् ६ ಇರುವ) । १०. तव शत्रवः, तव सामर्थ्यं (निन्दत् १), त्वाम् उपहसन्ति । ११. तत्र (तिष्ठत् १) बालाः किं कुर्वन्ति ? १२. वस्त्रं (सीव्यत् २) सूचिकं किं भवान् (दृष्टवत् १) ?

೫೭. भवत् ಎಂಬ ಶಬ್ದದಂತೆಯೇ श्रीमत् (ಶ್ರೀಮಂತ), आयुष्मत् (ಆಯುಸ್ಸುಳ್ಳ) ಈ ಶಬ್ದಗಳನ್ನು ಗೌರವಾರ್ಥವಾಗಿ ನೀನು ಎಂಬರ್ಥದಲ್ಲಿ ಉಪಯೋಗಿಸುವದುಂಟು. ಇವಕ್ಕೆಲ್ಲ ಪ್ರಥಮಪುರುಷದ ಕ್ರಿಯಾಪದವೇ ಬೇಕು. 'अत्रभवान्', 'तत्रभवान्' ಎಂದೂ ಗೌರವಾರ್ಥವಾಗಿ ಉಪಯೋಗಿಸುವರು. ಇವುಗಳ ಬಹುವಚನವು ಹೆಚ್ಚಿನ ಗೌರವವನ್ನು ತೋರಿಸುತ್ತದೆ. ಇವಕ್ಕೆ ಸಂಬೋಧನಾ ವಿಭಕ್ತಿಯಿಲ್ಲ.

**ವಿಶೇಷ : ಭವನ್ ಭವನ್ತೌ ಭವನ್ತಃ - ಇದು 'ಇರುವ' ಎಂಬರ್ಥದ ವರ್ತಮಾನ ಕೃದಂತ. 'ಭವನ್ತೀ' ಸ್ತ್ರೀಲಿಂಗ ; ಭವಾನ್ ಭವನ್ತೌ ಭವನ್ತಃ । ಇದು ನೀನು ಎಂಬರ್ಥದ ಗೌರವಾರ್ಥ ಶಬ್ದ. 'ಭವತೀ' ಸ್ತ್ರೀಲಿಂಗ.**

## ಅಭ್ಯಾಸ ೩೮

ಕನ್ನಡಿಸಿರಿ :

१. अहम् अत्रैव भवन् (ಇರುತ್ತಾ, ಇದ್ದುಕೊಂಡು) गीतां पठामि । २. तत्र भवन्तमपि तं बालं न कोऽपि किमपि पृच्छति । ३. त्वयि तत्र भवति[1]

---

1. ಕರ್ತೃವನ್ನು ಹೇಳುವ ಪದವನ್ನು ಸಪ್ತಮೀವಿಭಕ್ತಿಯಲ್ಲಿಟ್ಟು, ಅದಕ್ಕೆ ಹೊಂದುವ ಕೃದಂತವನ್ನು ಸಪ್ತಮೀವಿಭಕ್ತಿಯಲ್ಲಿಟ್ಟಿರುವಾಗ ಹೀಗೆ ಪ್ರಥಮಾವಿಭಕ್ತಿಯಿಂದ ಕನ್ನಡಿಸ ಬೇಕಾಗುವದು. ಉದಾ : **ರಾಮೇ ತಿಷ್ಠತಿ । ಬಾಲಕಯೋರ್ಗತಯೋಃ । ಲೇಖಿನೀಷು ನಷ್ಟಾಸು** - ಇವನ್ನೆಲ್ಲ ಹೀಗೆಯೇ ಕನ್ನಡಿಸಬೇಕು. **ತಿಷ್ಠತಿ ಸತಿ, ಗತಯೋಃ ಸತೋಃ, ನಷ್ಟಾಸು ಸತೀಷು** - ಹೀಗೆ ಸತ್ ಶಬ್ದವನ್ನು ಜೋಡಿಸುವದೂ ಉಂಟು. ಇದನ್ನು '**ಸತಿಸಪ್ತಮೀ**' ಎಂದು ಕರೆಯುವ ದುಂಟು.

(ನೀನು ಅಲ್ಲಿರುವಲ್ಲಿ) किं नो भयम् ? ४. तत्र भवत् तत् कथं लभे (ಹೇಗೆ ಪಡೆದೇನು) ? ५. भोः को भवान् ? ६. भवान् अत्र किं करोति ? ७. धीमन्तो भवन्तः । ८. भवतां खड्गः कुत्र रक्षितः (ಇಟ್ಟಿದೆ) ? ९. चिरं जीवतु श्रीमान् (ನೀನು ಬಹುಕಾಲ ಬದುಕಿರಪ್ಪ) । १०. अथ (ಇನ್ನು, ಹಾಗಾದರೆ) कोऽयं धर्म आयुष्मतो मतः (ನಿನಗೆ ಒಪ್ಪಾಗಿರುವ) ? ११. तत्र गच्छतां (ಹೋಗುವದರಿಂದ) भवताम् (ಅಥವಾ श्रीमताम्, आयुष्मताम्) किं प्रयोजनम् ? १२. तत्र तिष्ठन्तु भवन्तः । १३. अथ तत्रभवान् (ಪೂಜ್ಯನಾದ) कविः महाकाव्यम् आरभमाणः मङ्गलम् आचरति ॥

## ಚಾಂತ, ಜಾಂತ, ದಾಂತ ಶಬ್ದಗಳು

೫೮. ಇವೆಲ್ಲವನ್ನೂ मरुत् ಶಬ್ದದಂತೆಯೇ ನಡೆಯಿಸಿಕೊಳ್ಳಬಹುದು. ಉದಾ :

**१. सुहृत् - द् सुहृदौ सुहृदः । २. सुहृदम् सुहृदौ सुहृदः । ३. सुहृदा सुहृद्भ्याम् सुहृद्भिः । ४. सुहृदे सुहृद्भ्याम् सुहृद्भ्यः । ५. सुहृदः सुहृद्भ्याम् सुहृद्भ्यः । ६. सुहृदः सुहृदोः सुहृदाम् । ७. सुहृदि सुहृदोः सुहृत्सु ॥**

**(ಇಲ್ಲಿ ಮರುತ್ ಶಬ್ದಕ್ಕೆ ತಕಾರವಿರುವಲ್ಲಿ ದಕಾರವು ಬಂದಿದೆ. ಪ್ರ.ಸಂ. ವಿಭಕ್ತಿಗಳಲ್ಲಿ ವರ್ಗದ ಪ್ರಥಮಾಕ್ಷರವೂ - ತಕಾರವೂ - ಬಂದಿದೆ.) ಹೀಗೆಯೇ**

೧. भिषक्-ग् भिषजौ भिषजः । ೨. भिषजम् भिषजौ भिषजः । ೭. भिषजि भिषजोः भिषक्षु ॥

೫೯. ಇಲ್ಲಿ 'ಸುಹೃದ್' ಶಬ್ದಕ್ಕೆ ಕೊಟ್ಟಿರುವಂತೆಯೇ ಪುಲ್ಲಿಂಗಕ್ಕೂ ಸ್ತ್ರೀಲಿಂಗಕ್ಕೂ ರೂಪಗಳಿರುತ್ತವೆ. ಉದಾಹರಣೆಗೆ दृषत् (ಬೀಸುವ ಅಥವಾ ಅರೆಯುವ ಕಲ್ಲು), संपद्, विपद्, आपद्, मृद् (ಮಣ್ಣು) - ಇವೆಲ್ಲ ಸ್ತ್ರೀಲಿಂಗ. ಇವಕ್ಕೆಲ್ಲ

संपत् - द् संपदौ संपदः । दृषत् - द् दृषदौ दृषदः । ಎಂದುಮುಂತಾಗಿ ರೂಪ. वणिज् ಶಬ್ದವು भिषज् ಶಬ್ದದಂತೆ.

ವಾಚ್ (ಚಕಾರಾಂತ ಸ್ತ್ರೀಲಿಂಗ) वाक् - वाग् वाचौ - वाचः ಇತ್ಯಾದಿ. मरुत् ಶಬ್ದದಂತೆಯೇ त ಸ್ಥಾನದಲ್ಲಿ च ಬರುತ್ತದೆ. वाचा वाग्भ्याम् वाग्भिः । ಇತ್ಯಾದಿ.

ವಿಶೇಷ : महत् ಶಬ್ದಕ್ಕೆ महान् महान्तौ महान्तः । हे महान् महान्तौ महान्तः । महान्तम् महान्तौ महतः । ಎಂದು ವಿಶೇಷರೂಪಗಳು. ಮಿಕ್ಕದ್ದು मरुत् ಶಬ್ದದಂತೆ.

## ಅಭ್ಯಾಸ ೩೯

ಕನ್ನಡಿಸಿರಿ :

१. सीता मधुरया वाचा सर्वेषामपि सन्तोषं जनयति । २. धीराणां संपत्सु हर्षो न भवति, न च विपत्सु विषादः । ३. घटा मृदो जायन्ते । ४.धनगुप्तो बन्धुभ्यो वणिग्भ्यो भूरि धनं यच्छति । ५. मृतस्य भिषग्भिः किं प्रयोजनम् ? ६. पिष्टम् (ಹಿಟ್ಟನ್ನು) अपेक्षते, दृषदं तु नानयति । ७. भिषजा दत्तं औषधं कुत्र ? ८. ईदृशं (ಇಂಥ) धैर्यं महतामेव शोभते ।।

# ೧೦. ಕೆಲವು ಮುಖ್ಯಕ್ರಿಯಾಪದಗಳು

೬೦. ಈ ಭಾಗದಲ್ಲಿ ಆಗಾಗ್ಗೆ ಬಳಸುವ ಕೆಲವು ಕ್ರಿಯಾಪದಗಳನ್ನು ಇಲ್ಲಿ ಒಂದು ಕಡೆಗೆ ಸಂಗ್ರಹಿಸಿ ತೋರಿಸುವೆವು. ಇವುಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು. ವಾಕ್ಯಗಳ ಅರ್ಥವನ್ನು ನೀವೇ ಊಹಿಸಬಹುದು.

## ಅಭ್ಯಾಸ ೪೦

ಅಸ್ - ಇರು ಎಂಬ ೨ನೆಯ ಗಣದ ಧಾತುವಿನ ರೂಪಗಳು ಈ ವಾಕ್ಯಗಳಲ್ಲಿವೆ :

१. पात्रे किमस्ति ? २. तस्मिन् मम फले स्तः । ३. पिटके (ಕುಕ್ಕೆ, ಬುಟ್ಟಿ) कति फलानि सन्ति ? ४. पुत्र, शूरोऽसि । ५. युवां स्थूलौ स्थः । ६. यूयं किं ब्राह्मणाः स्थ ? ७. अहं दरिद्रोऽस्मि । ८. आवां दशरथस्य पुत्रौ स्वः । ९. वयं वृद्धाः स्मः ।।

ವಿಶೇಷ : (೧) ಎರಡನೆಯ ಗಣದ ಧಾತುಗಳಿಗೆ ವಿಕರಣವಿಲ್ಲ ; ಪ್ರತ್ಯಯಗಳು ನೇರಾಗಿ ಸೇರುತ್ತವೆ. ಅಸ್ ಧಾತುವಿನ ಅಕಾರಕ್ಕೆ ದ್ವಿವಚನಬಹುವಚನಗಳಲ್ಲಿ ಲೋಪವಾಗಿರುವದನ್ನು ಲಕ್ಷ್ಯದಲ್ಲಿಡಬೇಕು.

(೨) 'ಶೂರೋಽಸಿ' ಮುಂತಾದ ಸ್ಥಲಗಳಲ್ಲಿ ಕ್ರಿಯಾಪದವನ್ನು ಬಿಟ್ಟರೂ ಸಾಗುತ್ತದೆ. 'ತ್ವಂ ಶೂರಃ', 'ಯುವಾಂ ಸ್ಥೂಲೌ' - ಇಷ್ಟೇ ಸಾಕು. 'ಶೂರನಾಗಿದೀಯೆ', 'ದಪ್ಪನಾಗಿದೀರಿ' ಎಂದು ಮೈಸೂರು ಕಡೆಯವರು ಕನ್ನಡಿಸುತ್ತಾರೆ ; 'ಶೂರನಿರುವೆ' ಎಂದಿಷ್ಟೇ ಉತ್ತರ ಕರ್ಣಾಟಕದವರು ಹೇಳುತ್ತಾರೆ ; ಅದು ಸಂಸ್ಕೃತಕ್ಕೂ ಹಳಗನ್ನಡಕ್ಕೂ ಒಪ್ಪಾಗಿದೆ.

## ಅಭ್ಯಾಸ ೪೧

ಆಸ್ - ಕೂತುಕೊ ಎಂಬ ಧಾತುವಿನ ರೂಪಗಳಿರುವ ಈ ವಾಕ್ಯಗಳನ್ನು ಕನ್ನಡಿಸಿರಿ :

१. लक्ष्मीपुरे तस्य गृहम् आस्ते (ಇದೆ) । २. स च प्रासादे कूर्चे (ಉಚ್ಚಾಸನದಲ್ಲಿ) आस्ते (ಕುಳಿತಿದಾನೆ) । ३. तस्य सेवकौ वितर्द्यां (ಜಗಲಿಯಮೇಲೆ) आसाते । ४. दर्शनाय आगतास्तु बहिरासते । ५. किमिति (ಏತಕ್ಕೆ) त्वं दूरम् आस्से ? ६. युवामपि तत्रैव आसाते । ७. यूयम् आसन्द्याम् (ಕುರ್ಚಿಯಮೇಲೆ) आध्वे । ८. अहम् अत्रैव आसे । ९. आवाम् कटे (ಚಾಪೆಯಮೇಲೆ) आस्वहे । १०. वयम् नित्यमेवं सुखेन कालं नयन्त आस्महे (ಇದ್ದುಕೊಂಡಿರುತ್ತೇವೆ) ॥

ವಿಶೇಷ : ಹೀಗೆ ಮಾಡಿಕೊಂಡುಬಂದಿದೆ, ಅಥವಾ ಬಂದಿತ್ತು ಎಂಬುದನ್ನು ತಿಳಿಯಿಸುವದಕ್ಕೆ 'ಸದಾ ಭಕ್ಷಯನ್ ಆಸ್ತೇ' ಅಥವಾ 'ಸದಾ ಭಕ್ಷಯನ್ ತಿಷ್ಠತಿ' (ಯಾವಾಗಲೂ ತಿನ್ನುತ್ತಿರುತ್ತಾನೆ ಅಥವಾ ತಿನ್ನುತ್ತಿದ್ದನು) ; 'ಏವಂ ಸದಾ ಭಕ್ಷಯನ್ ಕಾಲಂ ನಯತಿ' ಅಥವಾ 'ಏವಂ ಸದಾ ಭಕ್ಷಯತಸ್ತಸ್ಯ ಕಾಲೋ ಗಚ್ಛತಿ' ಎಂದೂ ಈ ಅಭಿಪ್ರಾಯವನ್ನು ತಿಳಿಯಿಸಬಹುದು.

## ಅಭ್ಯಾಸ ೪೨

ಈ ವಾಕ್ಯಗಳನ್ನು ಕನ್ನಡಿಸಿರಿ :

१. अहं विष्णोः पूजां करोमि (= विष्णुं पूजयामि) । २. आवां तत्र वासं कुर्वः (= वसावः) । ३. वयम् अस्य काव्यस्य टीकां कुर्मः (= इदं काव्यं

टीकामहे) । ४. स कथं तया सह स्नेहं करोति (= तस्यां स्निह्यति) ? ५. तौ सदा कोपं कुरुतः (= कुप्यतः) । ६. आर्यास्तत्र न प्रवेशं कुर्वन्ति (= प्रविशन्ति) । ७. त्वं मातुः प्रीतिं करोषि (= मातरं प्रीणयसि) । ८. युवां किमिति अश्रूणां मोक्षणं कुरुथः । (= अश्रूणि मुञ्चथः) । ९. एवं तर्हि (ಹೀಗಾದರೆ) किं तैः सः युद्धं कुरुथ (= युध्यध्वे) ? १०. अहं प्रश्नं करोमि (= पृच्छामि) । ११. आवां भगवतः प्रपत्तिमेव कुर्वः (= भगवन्तमेव प्रपद्यावहे) । १२. वयं देव्याः प्रार्थनां कुर्मः (= देवीं प्रार्थयामहे) ॥

ವಿಶೇಷ : कृ - ಮಾಡು ಎಂಬ ಎಂಟನೆಯ ಗಣದ ಧಾತುವಿನ ವರ್ತಮಾನರೂಪಗಳನ್ನು ಇಲ್ಲಿ ಕೊಟ್ಟಿದೆ. ಭಾವನಾಮಗಳ ದ್ವಿತೀಯಾವಿಭಕ್ತಿಗೆ ಇವನ್ನು ಸೇರಿಸಿದರೆ ಆಯಾ ಧಾತುವಿನಿಂದಾದ ಕ್ರಿಯಾಪದದ ಅರ್ಥವೇ ಬರುತ್ತದೆ.

## ಅಭ್ಯಾಸ ೪೩

ಈ ವಾಕ್ಯಗಳನ್ನು ಕನ್ನಡಿಸಿರಿ :

१. परमेश्वरः शरीरेण इन्द्रियैश्च (ಶರೀರವನ್ನೂ ಇಂದ್ರಿಯಗಳನ್ನೂ ಕೊಟ್ಟು) जीवान् अनुगृह्णाति (ಅನುಗ್ರಹಿಸುತ್ತಾನೆ) । २. इन्द्रियाणि सर्वाणि शरीरम् अधितिष्ठन्ति (ಇದ್ದುಕೊಂಡಿವೆ) । ३.जनाः श्रोत्राभ्यां शब्दं शृण्वन्ति, नेत्राभ्यां रूपं पश्यन्ति, नासिकाभ्यां गन्धं जिघ्रन्ति । जिह्वया (ನಾಲಗೆಯ ಇಂದ್ರಿಯದಿಂದ) रसम् आस्वादयन्ति (ಸವಿನೋಡುತ್ತಾರೆ), त्वचा (ಚರ್ಮದ ಇಂದ್ರಿಯದಿಂದ) वस्तूनि स्पृशन्ति, पाणिभ्यां गृह्णन्ति, पादाभ्यां सञ्चरन्ति, वाचा शब्दान् उच्चरन्ति ॥

ವಿಶೇಷ : (1) श्रु (शृ) ಕೇಳು. ಈ ಒಂದನೆಯ ಗಣದ ಧಾತುವಿಗೆ ಐದನೆಯ ಗಣದ ಧಾತುಗಳಂತೆ 'ನು' ವಿಕರಣವು ಸೇರುತ್ತದೆ. (ಋಕಾರದ ಮುಂದೆ ಬಂದಿರುವದರಿಂದ ನಕಾರಕ್ಕೆ ಣಕಾರವಾಗಿದೆ). शृणोति शृणुतः शृण्वन्ति । शृणोषि शृणुथः शृणुथ । शृणोमि शृणुवः-शृण्वः शृणुमः-शृण्मः ॥

(2) ग्रह् (गृह्) - ಹಿಡಿ, ತೆಗೆದುಕೊ ; ज्ञा (ತಿಳಿ) - ಇವು ಒಂಭತ್ತನೆಯ ಗಣದ ಧಾತುಗಳು. ಇವಕ್ಕೆ 'ನಾ' ವಿಕರಣ.

**गृह्णाति गृह्णीतः गृह्णन्ति । गृह्णासि गृह्णीथः गृह्णीथ । गृह्णामि गृह्णीवः गृह्णीमः ॥**

**जानाति जानीतः जानन्ति । जानासि जानीथः जानीथ । जानामि जानीवः जानीमः ॥**

(3) **स्था** (तिष्ठ्) ನಿಲ್ಲು, आस् ಕುಳಿತುಕೊ - ಈ ಧಾತುಗಳಿಗೆ 'ಅಧಿ' ಎಂಬ ಉಪಸರ್ಗವು ಸೇರಿರುವಾಗ ಎಲ್ಲಿರುತ್ತಾನೋ ಆ ಸ್ಥಳದ ಹೆಸರಿಗೆ ದ್ವಿತೀಯಾವಿಭಕ್ತಿ ಬರುತ್ತದೆ. ಉದಾ : गृहम् अधितिष्ठति, अध्यास्ते वा । ಮನೆಯಲ್ಲಿರುತ್ತಾನೆ ; सिंहासनम् अध्यास्ते । ಸಿಂಹಾಸನದ ಮೇಲೆ ಕುಳಿತಿರುತ್ತಾನೆ (ಆಳುತ್ತಾನೆ).

(4) **ग्रह** (गृह्) ಈ ಧಾತುವಿಗೆ 'ಅನು' ಎಂಬ ಉಪಸರ್ಗವು ಸೇರಿರುವಾಗ ಏನನ್ನು ಅನುಗ್ರಹಿಸಲಾಗುತ್ತದೆಯೋ ಅದರ ಹೆಸರಿಗೆ ತೃತೀಯಾವಿಭಕ್ತಿ ಬರುತ್ತದೆ. ಉದಾ : ऐश्वर्येण अनुगृह्णाति । ಐಶ್ವರ್ಯವನ್ನು ಕೊಟ್ಟು ಅನುಗ್ರಹಿಸುತ್ತಾನೆ.

## ೧೧. ಕ್ರಿಯಾಪದಗಳ ಕಾಲಗಳು

೬೧. ಸಂಸ್ಕೃತದಲ್ಲಿ ಬೇರೆಬೇರೆಯ ಕಾಲವನ್ನು ತಿಳಿಯಿಸುವದಕ್ಕೆ ಬರುವ ಕ್ರಿಯಾಪದಗಳ ರೂಪಭೇದಗಳನ್ನು ಮುಂದಿನ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು :

### 'भू' ಧಾತುವಿನ ರೂಪಗಳು

१. तत् कुत्र भवति ? ಅದು ಎಲ್ಲಿರುತ್ತದೆ, ಎಲ್ಲಿ ಆಗುತ್ತದೆ ? २. स शूरोऽभवत् - ಅವನು ಶೂರನಾದನು. ३. सूदः कालेन् भूपतिर्बभूव - ಅಡಿಗೆಯವನು ಕಾಲಾನುಕಾಲಕ್ಕೆ ದೊರೆಯಾದನು. ४. मम तत्र कुतूहलमभूत् - ನನಗೆ

ಆದರಲ್ಲಿ ಕುತೂಹಲವುಂಟಾಯಿತು (ಉಂಟಾಗಿದೆ). ೫. पुनर्धनं भविष्यति - ಮತ್ತೆ ಧನವು ಆಗುವದು. ೬. पुनरपि एवं भविता - ಮತ್ತೂ ಹೀಗೆ ಆಗುವದು (= ಆದೀತು).

## जन् ಧಾತುವಿನ ರೂಪಗಳು

१. कामात् क्रोधोऽभिजायते - ಕಾಮದಿಂದ ಕ್ರೋಧವುಂಟಾಗುತ್ತದೆ. २. कौसल्यायां रामोऽजायत - ಕೌಸಲ್ಯೆಯಲ್ಲಿ ರಾಮನು ಹುಟ್ಟಿದನು. ३. सुमित्रायां लक्ष्मणो जज्ञे - ಸುಮಿತ್ರೆಯಲ್ಲಿ ಲಕ್ಷ್ಮಣನು ಹುಟ್ಟಿದನು. ४. देवदानवयोः कलहोऽजनि - ದೇವದಾನವರಿಬ್ಬರಲ್ಲಿ ಜಗಳ ಹುಟ್ಟಿಕೊಂಡಿತು. ५. तस्मिन् समुद्रे अमृतं जनिष्यते - ಆ ಸಮುದ್ರದಲ್ಲಿ ಅಮೃತವು ಹುಟ್ಟುವದು. ६. तस्यां वर्षेण एकः पुत्रो जनिता - ಆಕೆಯಲ್ಲಿ ವರ್ಷದೊಳಗಾಗಿ ಒಬ್ಬ ಮಗನು ಹುಟ್ಟುವನು.

(ಇಲ್ಲಿ ಭೂಧಾತುವಿನ ಪರಸ್ಮೈಪದಿಯ ರೂಪಗಳೂ ಜನ್‌ಧಾತುವಿನ ಆತ್ಮನೇಪದಿಯ ರೂಪಗಳೂ ಇವೆ.)

ಸಂಸ್ಕೃತದಲ್ಲಿ ವರ್ತಮಾನಕ್ಕೆ ಒಂದು ರೂಪ : भवति ; अभिजायते.

ಭೂತಕ್ಕೆ ಮೂರು ರೂಪಗಳು : अभवत् , बभूव, अभूत् ; अजायत, जज्ञे, अजनि.

ಭವಿಷ್ಯತ್ತಿಗೆ ಎರಡು : भविष्यति, भविता ; जनिष्यते, जनिता.

೬೨. **ಭೂತಕಾಲದ ರೂಪಗಳು** ಮೂರಕ್ಕೂ ಅರ್ಥಭೇದವುಂಟು :

अभवत् - ಆಯಿತು. ಇದು **ಅನದ್ಯತನ. ಈಗ ಆಗದೆ** ಹಿಂದೆ ಆದದ್ದನ್ನು ಹೇಳುವದು. बभूव - ಆಯಿತು. ಇದು ಪರೋಕ್ಷವಾಗಿ ಆದದ್ದನ್ನು ಹೇಳುವದು. अभूत् - ಆಯಿತು. ಇದು **ಈಗ** ಆದದ್ದನ್ನು ಹೇಳುವದಕ್ಕೂ ಉಪಯೋಗವಾಗುತ್ತದೆ.

ಪೂರ್ವಕಾಲದಲ್ಲಿ ನಡೆಯಿತು ಎಂಬುದನ್ನು ಹೇಳುವದಕ್ಕೆ ಇವುಗಳಲ್ಲಿ ಯಾವದನ್ನಾದರೂ ಹೇಳಬಹುದು. ಉದಾ : उज्जयिन्यां कश्चिद् ब्राह्मणो बभूव, अभूत् ಅಥವಾ अभवत्.

ಭವಿಷ್ಯತ್ಕಾಲದ ಎರಡು ರೂಪಗಳಿಗೂ ಸ್ವಲ್ಪ ಅರ್ಥಭೇದವಿದೆ :

भविष्यति - ಆಗುವದು. ಇದು ಸಾಮಾನ್ಯಭವಿಷ್ಯದ್ರೂಪ.

भविता - ಆಗುವದು.

ಇದು ಮುಂದೆ ಆದೀತು ಎಂಬುದನ್ನು ಹೇಳುವ ಭವಿಷ್ಯದ್ರೂಪ.

ಈ ಭಾಗದಲ್ಲಿ ಮುಖ್ಯವಾಗಿ ನಾವು ವರ್ತಮಾನ, ಅನದ್ಯತನಭೂತ - ಈ ಎರಡು ಕಾಲದ ರೂಪಗಳನ್ನು ಮಾತ್ರ ವಿಶೇಷವಾಗಿ ಉಪಯೋಗಿಸುವೆವು. ಭವಿಷ್ಯತ್ಕಾಲದ ರೂಪಗಳನ್ನು ಅಲ್ಲಲ್ಲಿ ಉಪಯೋಗಿಸಬಹುದಾದರೂ ಅದರ ವಿಚಾರವನ್ನು ಈ ಗ್ರಂಥದ ಮೂರನೆಯ ಭಾಗಕ್ಕೆ ಇಟ್ಟುಕೊಳ್ಳಲಾಗಿದೆ.

೬೩. ಅನದ್ಯತನಭೂತಕಾಲದ ಕ್ರಿಯಾರೂಪಗಳನ್ನು ಧಾತುಗಳಿಂದ ಮಾಡಿಕೊಳ್ಳುವ ಬಗೆಯನ್ನು ಈ ಕೆಳಗಿನ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು. ಪ್ರತ್ಯಯಗಳನ್ನು ಮೊದಲು ಕೊಟ್ಟಿದೆ :

**ಪರಸ್ಮೈ** : त् ताम् अन्। स् तम् त। अम् व म।

**ಆತ್ಮನೇ** : त इताम् अन्त। थाः इथाम् ध्वम्। इ वहि महि।

### ಅನದ್ಯತನ ಭೂತ

ಪರಸ್ಮೈಪದಿ — ಆತ್ಮನೇಪದಿ

#### ಒಂದನೆಯ ಗಣ

वद् - ಹೇಳು — मुद् - ಸುಖಪಡು

| | | | | | |
|---|---|---|---|---|---|
| अवदत् | अवदताम् | अवदन् | अमोदत् | अमोदेताम् | अमोदन्त |
| अवदः | अवदतम् | अवदत | अमोदथाः | अमोदेथाम् | अमोदध्वम् |
| अवदम् | अवदाव | अवदाम | अमोदे | अमोदावहि | अमोदामहि |

#### ನಾಲ್ಕನೆಯ ಗಣ

तुष् - ಸಂತೋಷಪಡು — जन् - ಹುಟ್ಟು

| | | | | | |
|---|---|---|---|---|---|
| अतुष्यत् | अतुष्यताम् | अतुष्यन् | अजायत | अजायेताम् | अजायन्त |
| अतुष्यः | अतुष्यतम् | अतुष्यत | अजायथाः | अजायेथाम् | अजायध्वम् |
| अतुष्यम् | अतुष्याव | अतुष्याम | अजाये | अजायावहि | अजायामहि |

ಆರನೆಯ ಗಣ

| स्पृश् - ಮುಟ್ಟು | | | भ्रस्ज् -ಹುರಿ | | |
|---|---|---|---|---|---|
| अस्पृशत् | अस्पृशताम् | अस्पृशन् | अभृज्जत | अभृज्जेताम् | अभृज्जन्त |
| अस्पृशः | अस्पृशतम् | अस्पृशत | अभृज्जथाः | अभृज्जेथाम् | अभृज्जध्वम् |
| अस्पृशम् | अस्पृशाव | अस्पृशाम | अभृज्जे | अभृज्जावहि | अभृज्जामहि |

(ಭ್ರಸ್ಜ್ ಧಾತು ಪರಸ್ಮೈಪದವೂ ಆಗಿದೆ. ಅಭೃಜ್ಜತ್ ಇತ್ಯಾದಿರೂಪಗಳೂ ಅದಕ್ಕಿವೆ.)

ಹತ್ತನೆಯ ಗಣ

| प्री - ಸಂತೋಷಗೊಳಿಸು | | | चित् - ಅರಿ | | |
|---|---|---|---|---|---|
| अप्रीणयत् | अप्रीणयताम् | अप्रीणयन् | अचेतयत | अचेतयेताम् | अचेतयन्त |
| अप्रीणयः | अप्रीणयतम् | अप्रीणयत | अचेतयथाः | अचेतयेथाम् | अचेतयध्वम् |
| अप्रीणयम् | अप्रीणयाव | अप्रीणयाम | अचेतये | अचेतयावहि | अचेतयामहि |

ವಿಶೇಷ : ಅ ಎಂಬ ಆಗಮ,[1] ಧಾತು(ವಿನ ವಿಕೃತರೂಪ), ವಿಕರಣ, ಪ್ರತ್ಯಯ - ಹೀಗೆ ಜೋಡಿಸಿ ಕ್ರಿಯಾರೂಪವನ್ನು ಮಾಡಿದೆ. ಆಯಾ ಧಾತುವಿನ ವಿಕರಣಪ್ರತ್ಯಯವನ್ನು ಸೇರಿಸುವ ಮುಂಚೆ ಆಗಬೇಕಾದ ಗುಣವೃದ್ಧಿಗಳೂ ಆಗಿರುತ್ತವೆ.

೬೪. ಕ್ರಿಯಾಪದದ ಸಂಪೂರ್ಣರೂಪವು ಸಿದ್ಧವಾದಮೇಲೆಯೇ ಉಪಸರ್ಗವನ್ನು ಸೇರಿಸಬೇಕು. ಈ ವಾಕ್ಯಗಳಲ್ಲಿರುವ ಕ್ರಿಯಾಪದಗಳಿಗೆ ಸೇರಿರುವ ಉಪಸರ್ಗಗಳನ್ನು ಲಕ್ಷಿಸಿರಿ :

**१. तक्षकः** (ಬಡಗಿ) **कदाचित्** (ಯಾವಾಗಲೋ ಒಮ್ಮೆ) **बहिरगच्छत् । २. अत्रान्तरे स्थूलबुद्धिर्नाम कश्चन चोरः तत्राऽऽगच्छत्, गृहं च प्राविशत् । ३. बान्धवा न्यवर्तन्त, धर्मस्तु तम् अन्वगच्छत्** (ಹಿಂಬಾಲಿಸಿತು) **। ४. स मां न प्रत्यभाषत** (ಉತ್ತರಕೊಟ್ಟನು) **। ५. शिष्यः कथञ्चित्** (ಹೇಗೋ, ಕಷ್ಟದಿಂದ) **तस्यार्थं प्रत्यपद्यत** (ತಿಳಿದುಕೊಂಡನು) ॥

1. ಸಂಸ್ಕೃತದಲ್ಲಿ ಧಾತುಗಳಿಗೆ ಬರುವ ಭೂತಕಾಲಸೂಚಕವಾದ ಈ ಅಕಾರಾಗಮಕ್ಕೂ ಇಲ್ಲ, ಅಲ್ಲ - ಎಂಬರ್ಥದಲ್ಲಿ ಸಮಾಸದಲ್ಲಿ ಬರುವ ಅಕಾರಾದೇಶಕ್ಕೂ ಯಾವ ಸಂಬಂಧವೂ ಇಲ್ಲ. ಉದಾ : ಅಘಟಃ - ಗಡಿಗೆಯಲ್ಲದ್ದು.

ವಿಶೇಷ : ಇಲ್ಲಿ आ + अगच्छत् = आगच्छत् (ಸವರ್ಣದೀರ್ಘಸಂಧಿ) ; प्र + अविशत् = प्राविशत् (ಸವರ್ಣದೀರ್ಘಸಂಧಿ) ; अनु + अगच्छत् = अन्वगच्छत, प्रति + अभाषत = प्रत्यभाषत, प्रति + अपद्यत = प्रत्यपद्यत ॥ (ಇವೆಲ್ಲ ಯಣ್ಸಂಧಿ).

೬೫. ಈ ವಾಕ್ಯಗಳಲ್ಲಿರುವ ಕ್ರಿಯಾಪದಗಳಲ್ಲಿ ಏನು ವಿಶೇಷವಿದೆ ?

१. वयं क्रीडाम् ऐक्षामहि (ನೋಡಿದೆವು) । २. ते पापा दुःखम् आर्च्छन् (ಹೊಂದಿದರು) । ३. यूयम् गृहाद् गृहम् आटत (ತಿರುಗುತ್ತಿದ್ದಿರಿ) । ४. रामो राज्यम् औज्झत् (ಬಿಟ್ಟುಬಿಟ್ಟನು) । ५. स तत्र गन्तुं नैच्छत् (ಇಚ್ಛಿಸಲಿಲ್ಲ) ॥

ಸಂಧಿನಿಯಮ : ಸ್ವರಾದಿಯಾದ ಧಾತುಗಳಿಗೆ ಭೂತಕಾಲಸೂಚಕ ಅಕಾರದ ಬದಲು ಆಕಾರವು ಬರುತ್ತದೆ. ಅದು ತನಗೆ ಪರವಾದ ಸ್ವರದೊಡನೆ ಸೇರಲು ಆಯಾ ಸ್ವರದ ವೃದ್ಧಿಯು ಹಿಂದುಮುಂದಿನ ಸ್ವರಗಳಿಗೆ ಆದೇಶವಾಗುತ್ತದೆ. ಉದಾ :

अट् (१) आ + अटत = आटत ; इष् (६) आ + इच्छत् = ऐच्छत् ; ईक्ष् (१) आ + ईक्षामहि = ऐक्षामहि ; उज्झ् (६) आ + उज्झत् = औज्झत् ; ऋ (ऋच्छ् - १) आ + ऋच्छत् = आर्च्छत् ॥

ಇಲ್ಲಿ ಉ ಋಕಾರಗಳು ಬಂದಿರುವಲ್ಲಿ ಐ, ಔ, ಆರ್ - ಬಂದಿವೆ.

## ಭವಿಷ್ಯತ್ಕಾಲದ ಕ್ರಿಯಾರೂಪಗಳು

೬೬. ಈ ಭಾಗದಲ್ಲಿ ಸಾಮಾನ್ಯಭವಿಷ್ಯತ್ಕಾಲದ ಕ್ರಿಯಾರೂಪಗಳನ್ನು ಮಾತ್ರ ಆಗಾಗ್ಗೆ ಬಳಸಲಾಗುವದು. ಈ ಕೆಳಗಿನ ವಾಕ್ಯಗಳಲ್ಲಿ ಕೆಲವು ಉದಾಹರಣೆಗಳಿವೆ :

१. प्रातःकालो भविष्यति, अन्धकारो गमिष्यति । २. ते स्वर्गलोके मोदिष्यन्ते । ३. श्रेष्ठिनं धनं याचिष्ये । ४. देविष्यामि कूटैरक्षैः, जेष्यामि राज्यम् । ५. मह्यं रामायणं कथयिष्यसि किम् ? ६. इदानीं भगवद्गीतां पठिष्यामः । ७. अचिरेणैव संस्कृतं भाषिष्यामहे । ८. मह्यं किं दास्यसि ?

೧. ಬೆಳಗಾಗುವದು, ಕತ್ತಲೆಯು ಹೋಗುವದು. ೨. ಅವರು ಸ್ವರ್ಗ

ಲೋಕದಲ್ಲಿ ಸುಖದಿಂದಿರುವರು. ೩. ಶೆಟ್ಟಿಯನ್ನು ಧನವನ್ನು ಬೇಡುವೆನು ೪. ಮೋಸದ ದಾಳಗಳಿಂದ ಆಡುವೆನು, ರಾಜ್ಯವನ್ನು ಗೆಲ್ಲುವೆನು. ೫. ನನಗೆ ರಾಮಾಯಣವನ್ನು ಹೇಳುವೆಯೇನು ? ೬. ಈಗ ಭಗವದ್ಗೀತೆಯನ್ನು ಓದೋಣ. ೭. ಬೇಗನೆಯೇ (= ಇಷ್ಟರಲ್ಲಿಯೇ) ಸಂಸ್ಕೃತವನ್ನು (= ಸಂಸ್ಕೃತದಲ್ಲಿ) ಮಾತನಾಡುವೆವು. ೮. ನನಗೆ ಏನು ಕೊಡುವೆ ?

## ಭವಿಷ್ಯತ್ಕಾಲದ ಪ್ರತ್ಯಯಗಳು

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| स्यति | स्यतः | स्यन्ति | स्यते | स्येते | स्यन्ते |
| स्यसि | स्यथः | स्यथ | स्यसे | स्येथे | स्यध्वे |
| स्यामि | स्यावः | स्यामः | स्ये | स्यावहे | स्यामहे |

ವಿಶೇಷ : ಇಲ್ಲಿ ವರ್ತಮಾನಕಾಲದ ಪ್ರತ್ಯಯಗಳೇ ಇವೆ ; ಇವುಗಳಿಗೆ ಮೊದಲು 'ಸ್ಯ' (ವಕಾರಮಕಾರಗಳ ಹಿಂದೆ ಸ್ಯಾ) ಸೇರಿದೆ ಅಷ್ಟೆ.

## ಕ್ರಿಯಾರೂಪಗಳು

| ೧ನೆಯ ಗಣ | | | ೪ನೆಯ ಗಣ | | |
|---|---|---|---|---|---|
| भविष्यति | भविष्यतः | भविष्यन्ति | तप्स्यते | तप्स्येते | तप्स्यन्ते |
| भविष्यसि | भविष्यथः | भविष्यथ | तप्स्यसे | तप्स्येथे | तप्स्यध्वे |
| भविष्यामि | भविष्यावः | भविष्यामः | तप्स्ये | तप्स्यावहे | तप्स्यामहे |

| ೬ನೆಯ ಗಣ ಲುಠ್ - ಹೊರಳಾಡು | | | ೧೦ನೆಯ ಗಣ | | |
|---|---|---|---|---|---|
| लुठिष्यति | लुठिष्यतः | लुठिष्यन्ति | कथयिष्यति | कथयिष्यतः | कथयिष्यन्ति |
| लुठिष्यसि | लुठिष्यथः | लुठिष्यथ | कथयिष्यसि | कथयिष्यथः | कथयिष्यथ |
| लुठिष्यामि | लुठिष्यावः | लुठिष्यामः | कथयिष्यामि | कथयिष्यावः | कथयिष्यामः |

ವಿಶೇಷ : ಈ ಪ್ರತ್ಯಯಗಳು ಎಲ್ಲಾ ಗಣಗಳ ಧಾತುಗಳಿಗೂ ಸೇರುತ್ತವೆ. ವಿಕರಣ ಪ್ರತ್ಯಯವಿಲ್ಲ, ಧಾತುಗಳ ಅಂತ್ಯಸ್ವರಕ್ಕೂ ಉಪಾಂತ್ಯಹ್ರಸ್ವಸ್ವರಕ್ಕೂ ಗುಣವುಂಟು. ಕೆಲವು ಧಾತುಗಳಿಗೆ ಇ ಸೇರಿ 'ಇಸ್ಯತಿ', 'ಇಸ್ಯತಃ' ಎಂದುಮುಂತಾಗಿ ರೂಪಗಳಾಗುವವು. ಇದರ ಹೆಚ್ಚಿಗೆಯ ವಿವರವನ್ನು ಮುಂದಿನ ಭಾಗದಲ್ಲಿ ತಿಳಿಯಿಸುವೆವು. ಇಲ್ಲಿ ಭವಿಷ್ಯದ್ರೂಪಗಳನ್ನು ಗುರುತಿಸುವದಕ್ಕಾಗಿ ಈ ರೂಪಗಳನ್ನು ಕೊಟ್ಟಿದೆ.

## ಅಭ್ಯಾಸ ೪೪

ಇಲ್ಲಿರುವ ಭವಿಷ್ಯತ್ಕಾಲದ ಕ್ರಿಯಾಪದಗಳ ಎಲ್ಲಾ ವಚನಗಳ ರೂಪಗಳನ್ನೂ ಬರೆಯಿರಿ. ವಾಕ್ಯಗಳನ್ನು ಕನ್ನಡಿಸಿರಿ :

१. भूपतिर्ब्राह्मणान् एवं वदिष्यति । २. वयं विप्रम् आनेष्यामः (ಕರೆತರುವೆವು) । ३. तव सुतां तस्मै प्रदास्यसि (ಕೊಡುವೆ) । ४. तव वचनं करिष्ये । ५. इमं संग्रामं (ಯುದ್ಧವನ್ನು) न करिष्यसि चेत् पापम् अवाप्स्यसि (ಹೊಂದುವೆ) । ६. तस्मिन् कान्तारे कण्टकाः पदेपदे तोत्स्यन्ति (ಚುಚ್ಚಿ ನೋಯಿಸುತ್ತವೆ) ॥

# ೧೨. ಪದದ ಕೊನೆಯ ನಕಾರಮಕಾರಗಳು

### ಪದಾಂತ್ಯನಕಾರ

೬೭. ನಕರಾಂತಪದಗಳ ಮುಂದೆ ಸ್ವರಾದಿಯಾದ ಶಬ್ದಗಳು ಬಂದರೆ ಆಗುವ ಸಂಧಿಕಾರ್ಯವನ್ನು ಈ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು :

**गच्छन् अत्र - गच्छन्नत्र ; कुर्वन् आस्ते - कुर्वन्नास्ते ; भक्षयन् इह - भक्षयन्निह ; सृजन् ईश्वरः - सृजन्नीश्वरः ; पश्यन् एव - पश्यन्नेव ; पश्यन् ऐश्वर्यम् - पश्यन्नैश्वर्यम् ; भक्षयन् ओदनम् - भक्षयन्नोदनम् ; पिबन् औषधम् - पिबन्नौषधम् ॥**

ಸಂಧಿನಿಯಮ : ಪದಾಂತ್ಯನಕಾರಕ್ಕೆ ಹಿಂದೆ ಹ್ರಸ್ವಸ್ವರವಿರುವಾಗ ಮುಂದೆ ಯಾವ ಸ್ವರವು ಬಂದರೂ ದ್ವಿತ್ವ ; ದೀರ್ಘಸ್ವರವಿದ್ದರೆ ನಕಾರವು ಮುಂದಿನ ಸ್ವರದೊಡನೆ ಸೇರಿಕೊಳ್ಳುವದು. ಉದಾ : ಭವಾನ್ ಅತ್ರ - ಭವಾನತ್ರ ; ಹೀಗೆಯೇ ತಾನ್ ಇಹ - ತಾನಿಹ ಇತ್ಯಾದಿ.

## ಅಭ್ಯಾಸ ೪೫

ಇಲ್ಲಿ ನಕಾರಾಂತಪದಗಳನ್ನು ಮುಂದಿನ ಪದಗಳೊಡನೆ ಸಂಧಿಮಾಡಿ ಬರೆದಿದೆ. ಸಂಧಿಯನ್ನು ಬಿಡಿಸಿಕೊಂಡು ವಾಕ್ಯಗಳನ್ನು ಕನ್ನಡಿಸಿರಿ :

१. अहो ! (ಅಹ !) गुरूनेव निन्दन्ति ते । २. अस्मानेवं मन्यसे चेत्

(ತಿಳಿಯುತ್ತಿಲ್ಲವಾದರೆ) किं वदामः ? ३. चोरानत्र कारागारे (ಬಂದೀಖಾನೆಯಲ್ಲಿ) निवेशयन्ति (ಇರಿಸುತ್ತಾರೆ) । ४. वृक्षेषु तत्र तत्र चरतः कपीनहं पश्यामि । ५. तस्मिन्नेव काले गौतमः प्रत्यागच्छत् । ६. पश्यन्नपि न पश्यति मूढः । ७. चोरा अपाहरन्नस्य धनम् । ८. अस्मिन्नुद्याने विहरन्ति ताः कन्याः । ९. एवं वदन्नेव मृतो वृद्धः । १०. किं वदन्नास्ते ?

## ಅಭ್ಯಾಸ ೪೬

ಈ ಕೆಳಗಿನ ವಾಕ್ಯಗಳಲ್ಲಿ ಪದಾಂತ್ಯನಕಾರಕ್ಕೆ ಆಗಿರುವ ಸಂಧಿಕಾರ್ಯವೇನು ? ವಾಕ್ಯಗಳನ್ನು ಕನ್ನಡಿಸಿ :

१. तांश्च (= तान् च) चोरान् रक्षापुरुषा लगुडेन (ದೊಣ್ಣೆಯಿಂದ) अताडयन् । २. इमांश्छात्रान् (= इमान् छात्रान्) वादित्रं (ವಾದ್ಯವನ್ನು ಬಾರಿಸುವದನ್ನು) शिक्षयति । ३. तांस्तान् (= तान् तान्) तेषां तेषां गृहाणि नयामि । ४. ग्रन्थांष्टीकते (= ग्रन्थान् टीकते) बुधः । ५. पर्वतांष्ठार (= पर्वतान् ठारः ಮಂಜು) आच्छादयति ॥

ಸಂಧಿನಿಯಮ : ಪದಾಂತ್ಯನಕಾರಕ್ಕೆ ಚ, ಛ, ಟ, ಠ, ತ, ಥ - ಇವುಗಳು ಪರವಾದರೆ ಅನುಸ್ವಾರವೂ ವಿಸರ್ಗವೂ ಬರುವದು ; ವಿಸರ್ಗಕ್ಕೆ (ಚಛಗಳ ಹಿಂದೆ) ಶಕಾರ, (ಟಠಗಳ ಹಿಂದೆ) ಷಕಾರ, (ತಥಗಳ ಹಿಂದೆ) ಸಕಾರ - ಹೀಗೆ ಆದೇಶವಾಗುವವು.

## ಅಭ್ಯಾಸ ೪೭

ಈ ವಾಕ್ಯಗಳಲ್ಲಿ ಪದಾಂತ್ಯನಕಾರಕ್ಕೆ ಆಗಿರುವ ಸಂಧಿಕಾರ್ಯಗಳನ್ನು ಲಕ್ಷ್ಯದಲ್ಲಿಟ್ಟುಕೊಳ್ಳಿರಿ. ವಾಕ್ಯಗಳ ಅರ್ಥವನ್ನು ಊಹಿಸಿರಿ :

१. शत्रूञ्जयति (शत्रून् जयति) शूरो नृपः । २. स्थलेऽस्मिञ्झरी प्रपतति । ३. ताञ्शकान् (तान् शकान्) पराजितवान् विक्रमार्कः । ४. शुभाँल्लोकान् (शुभान् लोकान्) गच्छति साधकः ॥

ಸಂಧಿನಿಯಮ : ಪದಾಂತ್ಯನಕಾರಕ್ಕೆ ಜ, ಝ, ಶ ಗಳು ಪರವಾದರೆ ಅದಕ್ಕೆ ಞ ಕಾರಾದೇಶ ; ಲಕಾರವು ಪರವಾದರೆ ಸಾನುನಾಸಿಕ ಲಕಾರಾದೇಶ. (ಈ ಪುಸ್ತಕದಲ್ಲಿ ಇಂಥ ಸಂಧಿಗಳನ್ನು ನಾವು ಹೆಚ್ಚಾಗಿ ಪ್ರಯೋಗಿಸಿಲ್ಲ.)

## ಪದಾಂತ್ಯಮಕಾರ

೭೮. ಪದಾಂತ್ಯಮಕಾರಕ್ಕೆ ಸ್ವರವು ಪರವಾದರೆ ಮಕಾರವು ಆ ಸ್ವರದೊಡನೆ ಸೇರಿ ಪೂರ್ಣಾಕ್ಷರವಾಗುವದೂ ಉಂಟು.

ಉದಾ : इदानीम् उपविशति = इदानीमुपविशति ।

ಕೆಲವು ಕಡೆಗಳಲ್ಲಿ ಹೀಗೆ ಕೂಡಿಸಿಯೇ ಬರೆಯಬೇಕಾಗುವದು.

ಉದಾ : किमपि, त्वमेव.

## ಅಭ್ಯಾಸ ೪೮

ಈ ವಾಕ್ಯಗಳಲ್ಲಿ ಸಂಧಿ ಬಿಡಿಸಿ ಓದಿರಿ ; ವಾಕ್ಯಗಳನ್ನು ಕನ್ನಡಿಸಿರಿ :

१. वयमिदानीमाङ्ग्लभाषां न शिक्षामहे । २. सर्वमिदमकथयम् । ३.अहमत्र सुखेन वसामि । ४. नारायणमेव भजामः । ५. किमिति सदा कुप्यसि ? ६. शिशूनामत्र प्रवेशो नास्ति । ७. अश्वमारोहति भटः । ८. पितृभ्यामिदं वदिष्यामि ॥

## ಅಭ್ಯಾಸ ೪೯

ಪದಾಂತ್ಯಮಕಾರಕ್ಕೆ ವರ್ಗೀಯವ್ಯಂಜನಗಳು ಪರವಾದರೆ ಅದಕ್ಕೆ ಅನುಸ್ವಾರಾದೇಶ ; ಆಯಾ ವರ್ಗದ ಅನುನಾಸಿಕಾಕ್ಷರವೂ ಬರುವದುಂಟು. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಕನ್ನಡಿಸಿರಿ :

१. शत्रुघ्नं कुस्यति (शत्रुघ्नङ्कुस्यति) सुमित्रा । २. मित्रं चलति (मित्रञ्चलति) पूर्वमेव (ಮೊದಲೇ) । ३. तां घण्टां (ताङ्घण्टां) नादयति वानरः । ४. तं डमरुकं (तण्डमरुकं) वादयन्ति सायंकाले (सायङ्काले) ॥

ವಿಶೇಷ : ಈ ಸಂದರ್ಭದಲ್ಲಿ ಒಂದೇ ಶಬ್ದದೊಳಗೆ ಅನುಸ್ವಾರವಿರದು. ಉದಾ : घण्टा ; ವಾಕ್ಯದ ಕೊನೆಯಲ್ಲಿಯೂ ಅನುಸ್ವಾರವಿರಬಾರದು. ಉದಾ ; आनयतम् ॥ ಮೇಲಿನ ಅಭ್ಯಾಸದಲ್ಲಿ ಕಂಸದಲ್ಲಿಟ್ಟಿರುವ ಪ್ರಕಾರದಲ್ಲಿಯೂ ಬರೆಯುವದುಂಟು. ಅಚ್ಚಿನ ಪುಸ್ತಕಗಳಲ್ಲಿ ಅನುಸ್ವಾರವೇ ರೂಢಿಯಲ್ಲಿದೆ ; ಉಚ್ಚಾರಣೆ ಮಾತ್ರ ಅನುನಾಸಿಕವೇ.

೬೯. ಪದಾಂತ್ಯಮಕಾರಕ್ಕೆ ಅವರ್ಗೀಯವ್ಯಂಜನಗಳು ಪರವಾದರೆ ಅನುಸ್ವಾರವೇ ಬರುತ್ತದೆ. ಯ, ವ, ಲ ಗಳು ಪರವಾದರೆ ಕ್ರಮವಾಗಿ ಸಾನುನಾಸಿಕ ಯ ವ ಲ ಗಳು ಬರುವದುಂಟು. ಉದಾ : इदं शरीरम् । तं शब्दं षड्वारमुच्चर ; तं रामं भजे ॥

## ಅಭ್ಯಾಸ ೫೦

ಈ ವಾಕ್ಯಗಳಲ್ಲಿ ಮಕಾರಾಂತಶಬ್ದಗಳಿಗೆ ಅನುಸ್ವಾರವೆಲ್ಲಿ ಬಂದಿದೆ ? ವಾಕ್ಯಗಳ ಅರ್ಥವೇನು ?

१. भरतं श्रीरामः कुस्यति । २. एवं षट् पुत्रा अजायन्त । ३. व्याधस्तं सरोवरं नित्यं गच्छति । ४. रामं रमेशं भजे । ५. कृपणस्य धनं हरन्ति बन्धवो नृपश्चोरा वा । ६. किं यच्छति (कियँच्छति) दरिद्रः ? ७. तं लक्ष्मणं (तल्लँक्ष्मणं) रामोऽपश्यत् । ८. कथं वात्सल्यं (कथव्वाँत्सल्यं) शिशौ धात्र्याः ?

## ೧೩. ನಕಾರಾಂತಶಬ್ದಗಳು

### 'ಅನ್' ಅಂತದಲ್ಲಿರುವ ಶಬ್ದಗಳು

೭೦. ಈ ವಾಕ್ಯಗಳಲ್ಲಿರುವ ರಾಜನ್, ಆತ್ಮನ್ - ಈ ಶಬ್ದಗಳ ರೂಪಗಳನ್ನು ಲಕ್ಷಿಸಿರಿ. ವಾಕ್ಯಗಳ ಅರ್ಥವನ್ನು ಊಹಿಸಿರಿ :

१. राजा परिवारेण सह गच्छति । २. पूर्वं राजानो निरङ्कुशा (ಅಡ್ಡಿಯಿಲ್ಲದೆ) राष्ट्रम् अपालयन् । ३. इदानीं बहुषु देशेषु राजान एव न सन्ति, प्रजायत्तमेव (ಪ್ರಜೆಗಳಿಗೆ ಅಧೀನವಾಗಿಯೇ) तु प्रायशः सर्वत्र आधिपत्यं भवति । ४. धर्मिष्ठं राजानं कवयः प्रशंसन्ति । ५. प्राकृतैर्गुणैः संयुक्तः (ಪ್ರಕೃತಿಯ ಗುಣಗಳಿಂದೊಡಗೂಡಿದ) आत्मा जीवात्मा ; तैर्वियुक्तस्तु (ರಹಿತನಾದವನಾದರೆ) स एव परमात्मा । ६. जीवात्मानो अनन्ताः, परमात्मा तु एक एव । ७. जीवात्मानः कर्तारः, भोक्तारश्च ; परमात्मा च जीवात्मनो भिन्नः - इति केचिद् (ಕೆಲವರು)

वदन्ति । ९. परमात्मन्येव जीवत्वं कल्पितं इत्यपि केचित् । १०. किं राज्ञा समाः सर्वाः प्रजाः ? ११. राज्ञो धनम् आत्मनो (ತನ್ನದು) न भवति । १२. इदं राज्ञे निवेदयिष्यामि (ತಿಳಿಯಿಸುವೆನು) । १३. राज्ञि (राजनि) सर्वे भक्तिमन्तः । १४. परमात्मनि सर्वं जगत् तिष्ठति । १५. इयं राज्ञां सभा ॥

| | ೨, ೫, ೬ | ೩ | ೪ | ೬ | ೭ |
|---|---|---|---|---|---|
| ವಿಶೇಷ : | राज्ञः | राज्ञा | राज्ञे | राज्ञाम् | राज्ञि, राजनि |
| | आत्मनः | आत्मना | आत्मने | आत्मनाम् | आत्मनि |

ಇಲ್ಲಿ राजन् ಶಬ್ದದ ಅಕಾರವು ಲೋಪವಾಗಿರುವ ಸ್ಥಲಗಳನ್ನು ಲಕ್ಷಿಸಿರಿ. ಈ ಎರಡು ಶಬ್ದಗಳಲ್ಲಿಯೂ ಉಪಾಂತ್ಯ ಅಕಾರವು ಎಲ್ಲೆಲ್ಲಿ ದೀರ್ಘವಾಗಿದೆ ?

೭೧. ಹೋಲಿಕೆಗಾಗಿ **राजन्, आत्मन्** - ಈ ಶಬ್ದಗಳ ವಿಭಕ್ತಿರೂಪಗಳನ್ನೆಲ್ಲ ಇಲ್ಲಿ ಕೊಟ್ಟಿದೆ :

| ರಾಜನ್ - ಅರಸ, ಚಂದ್ರ | | | ಆತ್ಮನ್ - ಆತ್ಮ, ತಾನು | | |
|---|---|---|---|---|---|
| राजा | राजानौ | राजानः | आत्मा | आत्मानौ | आत्मानः |
| हे राजन् | ,, | ,, | हे आत्मन् | ,, | ,, |
| राजानम् | राजानौ | राज्ञः | आत्मानम् | ,, | आत्मनः |
| राज्ञा | राजभ्याम् | राजभिः | आत्मना | आत्मभ्याम् | आत्मभिः |
| राज्ञे | ,, | राजभ्यः | आत्मने | ,, | आत्मभ्यः |
| राज्ञः | ,, | ,, | आत्मनः | ,, | ,, |
| ,, | राज्ञोः | राज्ञाम् | ,, | आत्मनोः | आत्मनाम् |
| राज्ञि / राजनि | ,, | राजसु | आत्मनि | ,, | आत्मसु |

ವಿಶೇಷ : (೧) तक्षन् - ಬಡಗಿ, सुबुद्धिनामन् - ಸುಬುದ್ಧಿ ಎಂಬ ಹೆಸರಿನವ, महिमन् - ಮಹಿಮೆ - ಇವು राजन् ಶಬ್ದದಂತೆ ನಡೆಯುವವು. ಆದರೆ ब्रह्मन् -

ಬ್ರಹ್ಮನು, यज्वन् - ಯಜ್ಞಮಾಡುವವನು, पाप्मन् - ಪಾಪಿ - ಇಂಥ ಶಬ್ದಗಳು ಆತ್ಮನ್ ಶಬ್ದದಂತೆ ನಡೆಯುವವು.

(೨) ನಕಾರಾಂತನಪುಂಸಕಲಿಂಗಶಬ್ದಗಳಿಗೂ ಪುಲ್ಲಿಂಗದಂತೆಯೇ ರೂಪಗಳು. ಆದರೆ ಪ್ರ. ಸಂ. ದ್ವಿ. ವಿಭಕ್ತಿಗಳಲ್ಲಿ ವಿಶೇಷ :

**ब्रह्मन् - ಪರಮಾತ್ಮ**

ब्रह्म ब्रह्मणी ब्रह्माणि । हे ब्रह्मन्-ब्रह्म ब्रह्मणी ब्रह्माणि । ब्रह्म ब्रह्मणी ब्रह्माणि । ಮುಂದಕ್ಕೆ आत्मन् ಶಬ್ದದಂತೆ.

ಹೀಗೆಯೇ जन्मन्, कर्मन्, चर्मन्, नर्मन्, (ಹಾಸ್ಯ), शर्मन् (ಸುಖ), नामन्, व्योमन् (ಆಕಾಶ), धामन् (ಸ್ಥಾನ, ಹೊಳಪು), प्रेमन्, दामन् (ಹಗ್ಗ).

## ಅಭ್ಯಾಸ ೫೧

ಇಲ್ಲಿರುವ ನಕಾರಾಂತಶಬ್ದಗಳ ಆಯಾ ವಿಭಕ್ತಿಯ ರೂಪಗಳನ್ನೆಲ್ಲ ಬರೆಯಿರಿ :

१. भरतखण्डस्य कस्यां सीम्नि (ಗಡಿ, ಎಲ್ಲೆಕಟ್ಟು) भोटदेशो (ಟಿಬೆಟ್ ದೇಶ) वर्तते ? २. तक्ष्णो (ಬಾಚಿ) वासी तीक्ष्णा । ३. परमेश्वरः कल्पे कल्पे एकं ब्रह्माणं सृजति, वेदांश्च तस्मै यच्छति । ४. एवं बहून् ब्रह्मणः सृजति । ५. परं तु ब्रह्म परमात्मैव ; तच्च एकमेव । ६. सुबुद्धिनाम्नो ब्राह्मणस्य द्वौ पुत्रौ । ७. तस्मै श्रद्धावते यज्वने देवाः स्वर्गम् अयच्छन् । ८. परमेश्वरस्य महिम्नः पारं को जानाति ? ९. मम तव च बहूनि जन्मानि व्यतीतानि (ಆಗಿಹೋಗಿವೆ) ॥

೭೨. नामन् (ಹೆಸರು) ಶಬ್ದವು ನಪುಂಸಕ ; ಸಮಾಸದ ಕೊನೆಯಲ್ಲಿ 'ಹೆಸರುಳ್ಳ' ಎಂಬರ್ಥದಲ್ಲಿ ಬಂದಾಗ नामा (ಪು.), नाम्नी (ಸ್ತ್ರೀ.) ಎಂಬ ರೂಪಗಳು ಇದಕ್ಕೆ ಬರಬಹುದು. 'ಎಂಬ' ಎಂಬರ್ಥವಿರುವಾಗ ಇದು ಅವ್ಯಯವೂ ಆಗಬಹುದು.

**ಉದಾಹರಣೆಗಳು**

वर्धमाने नाम नगरे - ವರ್ಧಮಾನವೆಂಬ ನಗರದಲ್ಲಿ (ಅವ್ಯಯ)

ब्रह्मदत्तनामा ब्राह्मणः - ಬ್ರಹ್ಮದತ್ತನೆಂಬ ಹೆಸರಿನ ಬ್ರಾಹ್ಮಣನು (राजन् ಶಬ್ದದಂತೆ).

रत्नावतीनाम्नी कन्या । ರತ್ನಾವತಿ ಎಂಬ ಹೆಸರುಳ್ಳ ಕನ್ಯೆ (नदी ಶಬ್ದದಂತೆ).

किं ते नाम ? - ನಿನ್ನ ಹೆಸರೇನು ? (ನಪುಂಸಕಲಿಂಗ ब्रह्मन् ಶಬ್ದದಂತೆ).

## ಅಭ್ಯಾಸ ೫೨

ಇಲ್ಲಿರುವ ನಕಾರಾಂತಶಬ್ದಗಳ ಆಯಾ ವಿಭಕ್ತಿರೂಪಗಳನ್ನು ಹೇಳಿ. 'ನಾಮ'ಶಬ್ದವು ಅವ್ಯಯವಾಗಿದ್ದರೆ ಅಥವಾ ಸ್ತ್ರೀಲಿಂಗದಲ್ಲಿ ಪ್ರಯುಕ್ತವಾಗಿದ್ದರೆ ಅದರ ರೂಪಗಳನ್ನು ಬರೆಯಿರಿ :

१. तस्य सिंहस्य खरनखर इति नाम । २. किंनामा (ಯಾವ ಹೆಸರುಳ್ಳವನು) भवान् ? ३. वेदवतीं नाम नदीमपश्यम् । ४. कलावतीनाम्नीं कन्यां तस्मै वराय दत्तवान् । ५. भगवतो गौणानि नामानि तानि । ६. अहं युद्धेन न शर्म लभे । ७. तद् धाम परमं विष्णोः ॥

೭೩. आत्मन् ಶಬ್ದವನ್ನು ತಾನು ಎಂಬರ್ಥದಲ್ಲಿಯೂ ಏಕವಚನದಲ್ಲಿ ಮಾತ್ರ ಉಪಯೋಗಿಸುತ್ತಾರೆ. स्व ಶಬ್ದವನ್ನೂ ಹೀಗೆಯೇ ಉಪಯೋಗಿಸುವದುಂಟು. ಆದರೆ स्व ಶಬ್ದಕ್ಕೆ ಕೆಲವು ವಿಶೇಷಗಳುಂಟು[1] :

(೧) ನೆಂಟ, ಬಂಧು ಎಂಬರ್ಥದಲ್ಲಿ स्वः स्वौ स्वाः । हे स्व स्वौ स्वाः । ಎಂದುಮುಂತಾಗಿ. देव (ಪಾ. ೩೧) ಶಬ್ದದಂತೆ.

(೨) ಧನ, ಆಸ್ತಿ. स्वं स्वे स्वानि । ಎಂದು. अम्बर (ಪಾ. ೩೧) ಶಬ್ದದಂತೆ. (ಇದು ಪುಲ್ಲಿಂಗದಲ್ಲಿಯೂ ಉಂಟೆಂದು ಅಮರಕೋಶ.)

(೩) ತನ್ನ. (ಮೂರು ಲಿಂಗ)

(೪) ಜೀವಾತ್ಮ. (ಪುಲ್ಲಿಂಗ)

---

1. ಸ್ವೋ ಜ್ಞಾತಾವಾತ್ಮನಿ ಸ್ವಂ ತ್ರಿಷ್ವಾತ್ಮೀಯೇ ಸ್ವೋಽಸ್ತ್ರಿಯಾಂ ಧನೇ ॥ - ಎಂದು ಅಮರಕೋಶ. ಜ್ಞಾತಿ, ಧನ - ಎಂಬರ್ಥವಿಲ್ಲದಾಗ ಇದು ಸರ್ವನಾಮವೆನಿಸುತ್ತದೆ.

ಸ್ವ ಶಬ್ದ. (ಜ್ಞಾತಿ, ಧನವಾಚಕವಲ್ಲದ ಅರ್ಥ)

| ಪುಲ್ಲಿಂಗ | | | ಸ್ತ್ರೀಲಿಂಗ | | |
|---|---|---|---|---|---|
| स्वः | स्वौ | स्वे-स्वाः | स्वा | स्वे | स्वाः |
| हे स्व | ,, | ,, | हे स्वे | ,, | ,, |
| स्वं | ,, | स्वान् | स्वाम् | ,, | ,, |
| स्वेन | स्वाभ्याम् | स्वैः | स्वया | स्वाभ्याम् | स्वाभिः |
| स्वस्मै | ,, | स्वेभ्यः | स्वस्यै | ,, | स्वाभ्यः |
| स्वस्मात् / स्वात् | ,, | ,, | स्वस्याः | ,, | ,, |
| स्वस्य | स्वयोः | स्वेषाम् | ,, | स्वयोः | स्वासाम् |
| स्वस्मिन् / स्वे | ,, | स्वेषु | स्वस्याम् | ,, | स्वासु |

ನಪುಂಸಕಲಿಂಗದಲ್ಲಿ स्वम् स्वे स्वानि। ಇತ್ಯಾದಿ.

## ಅಭ್ಯಾಸ ೫೩

ಇಲ್ಲಿ आत्मन्, स्व - ಈ ಶಬ್ದಗಳ ಆಯಾ ವಿಭಕ್ತಿಯ ರೂಪಗಳನ್ನು ಹೇಳಿ. ವಾಕ್ಯಗಳನ್ನು ಕನ್ನಡಿಸಿ :

१. सर्वे आत्मनः (स्वे-स्वाः) परमात्मनोंऽशाः। २. विरक्तो ब्राह्मणः सर्वं स्वं (ಧನವನ್ನು) ब्राह्मणेभ्यो यच्छति। ३. वृद्धः स्वां बालाम् अन्विच्छति। ४. राजा श्रृगालः (ನರಿ) सर्वान् स्वान् (ನೆಂಟರನ್ನು) अनादरेण पश्यति। ५. यतिः स्वं कुटीरमपि (ಗುಡಿಸಲನ್ನು ಕೂಡ) विस्मरति (ಮರೆಯುತ್ತಾನೆ)। ६. तस्य सर्वेऽपि स्वाः (स्वे) पटा जीर्णाः। ७. मूर्खा एव आत्मानं (स्वं) प्रशंसन्ति (ಹೊಗಳಿಕೊಳ್ಳುತ್ತಾರೆ)। ८. अहम् आत्मानं (स्वं) मानुषं रामं मन्ये। ९. भगवान् आत्मना आत्मानं (स्वेन स्वं) जानाति। १०. आत्मैव हि (ತಾನೇ) आत्मनो बन्धुः,

आत्मैव रिपुरात्मनः (स्वस्य) । ११. यूयम् आत्मनो (स्वस्य) वस्त्राणि कुत्र रक्षथ ? १२. आत्मना तृतीयं (ತನ್ನಿಂದ ಮೂರನೆಯವನಾದ, ಇನ್ನಿಬ್ಬರೊಡನೆ ಇರುವ) विश्वामित्रं मुनयः प्रत्युपतिष्ठन्ति (ಎದ್ದು ಎದುರುಗೊಳ್ಳುತ್ತಾರೆ) ।।

### ಇನ್, ವಿನ್, ಮಿನ್ ಅಂತದಲ್ಲಿರುವ ಶಬ್ದಗಳು

೭೪. ಉಳ್ಳ, ಆ ಸ್ವಭಾವದ ಎಂಬರ್ಥದ गुणिन्, तपस्विन्, वाग्मिन् - ಮುಂತಾದ ನಕಾರಾಂತಶಬ್ದಗಳ ರೂಪಗಳನ್ನು ಒಂದನೆಯ ಭಾಗದಲ್ಲಿ (ಪಾ. ௯೭) ಕೊಟ್ಟಿದೆ. ಶಬ್ದದಲ್ಲಿ ರೇಫಷಕಾರಗಳಿದ್ದಲ್ಲಿ ಣಕಾರಾದೇಶವು ಬರುವದೆಂಬುದನ್ನು ನೆನಪಿನಲ್ಲಿಟ್ಟುಕೊಂಡು ಇದನ್ನು ನಡೆಯಿಸಬೇಕು.

ಪುಲ್ಲಿಂಗ : गुणी, गुणिनौ, गुणिनः । हे गुणिन्, गुणिनौ, गुणिनः । ಇತ್ಯಾದಿ. ನಪುಂಸಕ : गुणि, गुणिनि, गुणीनि । हे गुणि-गुणिन्, गुणिनी, गुणीनि ।। ಸ್ತ್ರೀಲಿಂಗದಲ್ಲಿ गुणिनी, तपस्विनी - ಇತ್ಯಾದಿಯಾಗಿ ಈಕಾರಾಂತ ವಾಗುವವು. (नदी ಶಬ್ದದಂತೆ).

## ಅಭ್ಯಾಸ ೫೪

ಕನ್ನಡಿಸಿ. ನಕಾರಾಂತ ಶಬ್ದಗಳಿಗೆ ಆಯಾ ವಿಭಕ್ತಿಯ ರೂಪಗಳನ್ನು ಹೇಳಿ :

१. गुणिनो गुणैरेव शोभन्ते । २. पुण्यकृतः सुखिनो भवन्ति । ३. चतुर्विधा भजन्ते मां जनाः सुकृतिनोऽर्जुन । आर्तः (ನರಳುವವನು) जिज्ञासु(ಜ್ಞಾನವನ್ನು ಇಚ್ಛಿಸುವವನು)रर्थार्थी ज्ञानी च भरतर्षभ । ४. योजिनो भोगिनो (ವಿಷಯ ಭೋಗದಲ್ಲಿಯೇ ಇರುವ ಸ್ವಭಾವದವನು) वा त्यागिनो रागिणो (ವಿಷಯದಲ್ಲಿ ಅನುರಕ್ತನಾದವನು) वा ज्ञानादेव कैवल्यम् (ಮುಕ್ತಿ) । ५. धनिनं सर्वे श्लाघन्ते । ६. मायाविनी ताटका अत्रैव निवसति । ७. करिणः (ಆನೆಗಳು) कूपे पतन्ति । ८. अस्य मन्त्रस्य जपेन मेधाविनो जायन्ते । ९. पुरा गृहिणोऽपि वार्धके पारिव्राज्यं (ಸಂನ್ಯಾಸವನ್ನು) भजन्ते स्म । १०. ब्रह्मा मुरारिस्त्रिपुरान्तकारी

(ಮುರಾಸುರಶತ್ರುವಾದ ವಿಷ್ಣು, ತ್ರಿಪುರಗಳನ್ನು ನಾಶಗೊಳಿಸಿದ ಶಿವ) भानुः शशी भूमिसुतो (ಅಂಗಾರಕ) बुधश्च । गुरुश्च शुक्रः शनिराहुकेतवः कुर्वन्तु सर्वे मम सुप्रभातम् ॥

## ೧೪. ಕರ್ಮಣಿ ಮತ್ತು ಭಾವೇಪ್ರಯೋಗಗಳು

೭೫. ಈ ಕೆಳಗಿನ ವಾಕ್ಯಗಳ ಜೋಡಿಗಳಲ್ಲಿ ಕ್ರಿಯಾಪದಗಳ ರೂಪಭೇದವನ್ನು ನೋಡಿರಿ. ವಾಕ್ಯಗಳನ್ನು ಕನ್ನಡಿಸಿರುವ ಬಗೆಯನ್ನೂ ನೋಡಿರಿ :

| | |
|---|---|
| १. देवदत्तः रामायणं पठति । | **देवदत्तेन रामायणं पठ्यते ।** |
| २. वयं संस्कृतेनैव भाषामहे । | **अस्माभिः संस्कृतमेव भाष्यते ।** |
| ३. मूर्खाः व्यर्थं कुप्यन्ति । | **मूर्खैः व्यर्थं कुप्यते ।** |
| ४. आस्तिका ईश्वरं पूजयन्ति । | **आस्तिकैः ईश्वरः पूज्यते ।** |
| ५. वीरः बाणान् क्षिपति । | **वीरेण बाणाः क्षिप्यन्ते ।** |

೧. ದೇವದತ್ತನು ರಾಮಾಯಣವನ್ನು ಓದುತ್ತಾನೆ. ದೇವದತ್ತನಿಂದ ರಾಮಾಯಣವು ಓದಲ್ಪಡುತ್ತದೆ.

೨. ನಾವು ಸಂಸ್ಕೃತದಲ್ಲಿಯೇ ಮಾತಾಡುತ್ತೇವೆ. ನಮ್ಮಿಂದ ಸಂಸ್ಕೃತದಲ್ಲಿಯೇ ಮಾತಾಡೋಣಾಗುತ್ತದೆ.

೩. ಮೂರ್ಖರು ವ್ಯರ್ಥವಾಗಿ ಸಿಟ್ಟುಮಾಡುತ್ತಾರೆ. ಮೂರ್ಖರಿಂದ ವ್ಯರ್ಥವಾಗಿ ಸಿಟ್ಟುಮಾಡಲಾಗುತ್ತದೆ.

೪. ಆಸ್ತಿಕರು ಈಶ್ವರನನ್ನು ಪೂಜಿಸುತ್ತಾರೆ. ಆಸ್ತಿಕರಿಂದ ಈಶ್ವರನು ಪೂಜಿಸಲ್ಪಡುತ್ತಾನೆ.

೫. ವೀರನು ಬಾಣಗಳನ್ನು ಎಸೆಯುತ್ತಾನೆ. ವೀರನಿಂದ ಬಾಣಗಳು ಬಿಡಲ್ಪಡುತ್ತವೆ.

ವಿಶೇಷ : ಸಂಸ್ಕೃತದಲ್ಲಿ ಕರ್ಮಣಿ - ಭಾವೇ ಪ್ರಯೋಗಗಳೇ ಪ್ರಚುರ. **ಕರ್ಮವು** (ಕ್ರಿಯೆಯ ಫಲವನ್ನು ಅನುಭವಿಸುವನು ಅಥವಾ ಅನುಭವಿಸುವ ವಸ್ತು) ಮುಖ್ಯವಾಗಿದ್ದರೆ ಕರ್ಮಣಿ ಪ್ರಯೋಗವನ್ನು ಉಪಯೋಗಿಸುತ್ತಾರೆ. ಅದನ್ನು ಅಲ್ಪಡು ಎಂಬ ಪ್ರತ್ಯಯದಿಂದ ಕನ್ನಡದಲ್ಲಿ ತಿಳಿಸುತ್ತಾರೆ ; **ಕ್ರಿಯೆಯು** (ಮಾಡುವ ಕೆಲಸವು) ಮುಖ್ಯವಾಗಿದ್ದರೆ ಭಾವೇಪ್ರಯೋಗವನ್ನು ಬಳಸುತ್ತಾರೆ ; ಅದನ್ನು ಓಣ, ಆಗು ಪ್ರತ್ಯಯಗಳಿಂದ ಕನ್ನಡಿಸುವರು. ಕ್ರಿಯೆಯ **ಕರ್ತೃವನ್ನು** ಹೇಳುವ ಪದವು ಈ ಎರಡು

ಪ್ರಯೋಗಗಳಲ್ಲಿಯೂ ತೃತೀಯಾವಿಭಕ್ತಿಯಲ್ಲಿರುತ್ತದೆ. ಕ್ರಿಯೆಯ ಕರ್ಮವನ್ನು ಹೇಳುವ ಪದವು ಪ್ರಥಮಾವಿಭಕ್ತಿಯಲ್ಲಿರುತ್ತದೆ.

೭೬. ಭಾವೇ - ಕರ್ಮಣಿ ಪ್ರಯೋಗಗಳೆರಡಕ್ಕೂ ಆಖ್ಯಾತಪ್ರತ್ಯಯಗಳ ಹಿಂದುಗಡೆ य ಪ್ರತ್ಯಯವು ಸೇರುತ್ತದೆ ; ಎಲ್ಲಾ ಧಾತುಗಳಿಗೂ ಆತ್ಮನೇಪದದಲ್ಲಿಯೇ ಪ್ರಯೋಗ. ಈ ಉದಾಹರಣೆಗಳನ್ನು ನೋಡಿರಿ :

**ಕರ್ಮಣಿಪ್ರಯೋಗ**

(೧) नम्, वन्द्, पठ्, लभ् ಇವುಗಳಿಗೆ नम्यते, वन्द्यते, पठ्यते, लभ्यते ।

(೪) दिव्, कुस्, मन्, बुध् ,, दीव्यते, कुस्यते, मन्यते, बुध्यते ।

(೬) लिख्, स्पृश्, तुद्, विश् ,, लिख्यते, स्पृश्यते, तुद्यते, विश्यते ।

(೧೦) चुर्, कथ्, भक्ष्, गण् ,, चोर्यते, कथ्यते, भक्ष्यते, गण्यते ।

೭೭. ಭಾವೇ ಪ್ರಯೋಗದಲ್ಲಿಯೂ ಕರ್ಮಣಿ ಪ್ರಯೋಗದಲ್ಲಿಯೂ ಕರ್ತೃವು ತೃತೀಯಾವಿಭಕ್ತಿಯಿಂದಲೇ ಉಕ್ತವಾಗಿರುತ್ತದೆ. ಆದರೆ ಕ್ರಿಯಾಪದವು ಕರ್ಮಣಿ ಪ್ರಯೋಗದಲ್ಲಿ ಕರ್ಮವೇ ಉದ್ದೇಶವಾಗಿರುವದರಿಂದ ಅದರ ಪುರುಷವಚನಗಳಿಗೆ ಅನುಗುಣವಾಗಿರುತ್ತದೆ ; ಭಾವೇಪ್ರಯೋಗದಲ್ಲಿ ಪ್ರಥಮಪುರುಷೈಕವಚನದಲ್ಲಿಯೇ ಕ್ರಿಯಾಪದವಿರುತ್ತದೆ. ಉದಾಹರಣೆಗೆ ನೋಡಿ :

| ಕರ್ತರಿ | ಕರ್ಮಣಿ |
|---|---|
| १. अहं दुःखम् अनुभवामि । | मया दुःखम् अनुभूयते । |
| २. अहं देवान् वन्दामि । | मया देवा वन्द्यन्ते । |
| ३. अहं विघ्नेश्वरं सरस्वतीं च स्मरामि । | मया विघ्नेश्वरः सरस्वती च स्मर्येते । |

ಇಲ್ಲಿ मया ಎಂಬುದು ಕರ್ತೃ ; ಕ್ರಿಯಾಪದವು दुखम्, देवाः, विघ्नेश्वरः सरस्वती च ಎಂಬ ಕರ್ಮಗಳಿಗೆ ಅನುಗುಣವಾದ ಪುರುಷವಚನಗಳಲ್ಲಿವೆ. ಹೀಗೆಯೇ

१. अस्माभिः पुस्तकं रक्ष्यते । अस्माभिः पुस्तके रक्ष्येते । अस्माभिः पुस्तकानि रक्ष्यन्ते । ಎಂದು ಕರ್ಮಕ್ಕನುಗುಣವಾಗಿಯೇ ಪುರುಷವಚನಗಳಿರುವವು.

ಈ ಉದಾಹರಣೆಗಳನ್ನು ನೋಡಿ :

२. अहं ताड्ये, आवां ताड्यावहे, वयं ताड्यामहे । त्वं ताड्यसे, युवां ताड्येथे, यूयं ताड्यध्वे । सः ताड्यते, तौ ताड्येते, ते ताड्यन्ते ।।

ಇಲ್ಲಿಯೂ ಕರ್ಮಕ್ಕನುಗುಣವಾಗಿ ಕ್ರಿಯಾಪದದ ಪುರುಷವಚನಗಳು. ಆದರೆ ಭಾವೇ ಪ್ರಯೋಗದಲ್ಲಿ आस् (ಕೂತುಕೊ) ಧಾತುವಿಗೆ

मया आस्यते । त्वया आस्यते । तैः आस्यते । युष्माभिः आस्यते ।

ಎಂದು ಯಾವ ಪುರುಷವಚನವೇ ಕರ್ತೃವಾಗಲಿ ಕ್ರಿಯಾಪದವು ಪ್ರಥಮ ಪುರುಷೈಕವಚನವೇ.

೭೮. ಈ ಉದಾಹರಣೆಗಳಲ್ಲಿ ಕರ್ಮಣಿಪ್ರಯೋಗದ ಕ್ರಿಯಾಪದಗಳು ಆಗಿರುವ ಬಗೆಯನ್ನು ನೋಡಿರಿ :

| | ಕರ್ತರಿ | ಕರ್ಮಣಿ ಅಥವಾ ಭಾವೇ |
|---|---|---|
| गम् (गच्छ्) | ग्रामं गच्छति । | एवं ग्रामो गम्यते । |
| स्था (तिष्ठ्) | कुत्र तिष्ठति ? | कुत्र स्थीयते भवद्भिः ? |
| पा (पिब्) | कषायं पिबति । | कषायः पीयते तेन । |
| दा (यच्छ्) | तस्मै किं यच्छसि ? | तस्मै किं दीयते त्वया ? |
| ज्ञा | स किं जानाति ? | किं ज्ञायते तेन ? |
| ध्मा | शङ्खान् धमन्ति योधाः । | शङ्खा ध्मायन्ते योधैः । |
| जि | राजा शत्रून् जयति । | शत्रवो जीयन्ते राज्ञा । |
| क्षि | देहः क्षयति । | न कर्म क्षीयते । |
| नी | सेनां नयति स्कन्दः । | सेना नीयते स्कन्देन । |
| ह्नु | उक्तम् अपह्नुते धूर्तः । | उक्तम् अपह्नूयते धूर्तेन । |
| भू | ततः किं भवति ? | दुःखमनुभूयते कुतः ? |
| कृ | अथ किं करोषि ? | अथ किं क्रियते त्वया ? |

| | | |
|---|---|---|
| कॄ | तण्डुलान् विकिरति व्याधः । | **तण्डुला विकीर्यन्ते व्याधेन ।** |
| ह्वे | ब्राह्मणान् आह्वयते । | **ब्राह्मणा आहूयन्ते तेन ।** |
| गै | तस्य कीर्तिं गायन्ति कवयः । | **तस्य कीर्तिर्गीयते कविभिः ।** |
| सो | वनं गन्तुं व्यवस्यति । | **किं व्यवसीयते ?** |
| दृश् (पश्य्) | किं पश्यसि ? | **किं दृश्यते त्वया ?** |

ವಿಶೇಷ : ಎಲ್ಲಾ ಗಣದ ಧಾತುಗಳಿಗೂ ಒಂದೇ ಬಗೆಯಲ್ಲಿ य ಪ್ರತ್ಯಯವು ಸೇರಿ ಕರ್ಮಣಿ ಭಾವೇ ಪ್ರಯೋಗಗಳಾಗುತ್ತವೆ. ಕೆಲವು ಧಾತುಗಳಿಗೆ

दा (ಕೊಡು), दै, दो, धा, धे, मा, गै, पा (ಕುಡಿ), सो, हा- ಇವಕ್ಕೆ ಮಾತ್ರ ಕೊನೆಯಲ್ಲಿರುವ ಆ (ಏ, ಓ, ಐ ) ಗಳು ಈಕಾರವಾಗುತ್ತವೆ. ಮಿಕ್ಕವುಗಳ ಆಕಾರವು ಹಾಗೆಯೇ ಉಳಿಯುತ್ತದೆ. ಋ ೠಕಾರಗಳಿಗೆ ರಿ, ಈರ್ ಆದೇಶ.

## ಅಭ್ಯಾಸ ೫೫

ಈ ವಾಕ್ಯಗಳ ಅಕ್ಷರಾರ್ಥವನ್ನು ಹೇಳಿ ಅಭಿಪ್ರಾಯವನ್ನು ರೂಢಿಯ ಮಾತಿನಲ್ಲಿ ತಿಳಿಸಿರಿ : (ಕಂಸದಲ್ಲಿರುವದು ಧಾತುವಿನ ಗಣಸಂಖ್ಯೆ ; ಪ್ರೇ. ಎಂದರೆ ಪ್ರೇರಣಾರ್ಥಕ, ಕರ್ತರಿ ಪ್ರಯೋಗದ ರೂಪವನ್ನು ಊಹಿಸಿರಿ.)

१. तव अपराधो न क्षम्यते (೪ ಪ.) मया, (ಇದಕ್ಕೆ ಕರ್ತರಿ : अहं तवापराधं न क्षाम्यामि ।। २. वानरैः शाखा कम्प्यन्ते (೧ ಆ.) फलानि च पात्यन्ते (೧ ಪ್ರೇ. ಪ.) । ३. मुक्तिः नेष्यते (೬ ಪ.) मूढैः । ४. लिपिकरेण किं लिख्यते (೬ ಪ.) ? ५. यूयं पाठशालायां किं शिक्ष्यध्वे (೧ ಆ.) ? ६. साधोः (ಸಾಹುಕಾರನ) सेवया दरिद्रैः किं लभ्यते (೧ ಆ.) ? ७. रत्नानि तस्यां पेटिकायां रक्ष्यन्ते (೧ ಪ.) । ८. सूर्येण प्रकाश्यते (೧ ಪ್ರೇ. ಪ.) भूमिः । ९. कथमपि (ಹೇಗೋ) जीव्यते (೧ ಪ.) अस्माभिः । १०. दुःखेऽपि नृत्यते (೪ ಪ.) मूर्खैः ।।

೭೯. ಕನ್ನಡದಲ್ಲಿ 'ಅಲ್ಪಡು' ಪ್ರತ್ಯಯವನ್ನು ಸೇರಿರುವ ಕರ್ಮಣಿಪ್ರಯೋಗವು ಬಳಕೆಯಲ್ಲಿಲ್ಲ. ಭಾವೇ ಪ್ರಯೋಗದ ಅರ್ಥವನ್ನು 'ಓಣ' ಪ್ರತ್ಯಯವಿಲ್ಲದೆಯೇ ಬೇರೆ

ರೀತಿಯಿಂದಲೂ ತಿಳಿಯಪಡಿಸುತ್ತಾರೆ. ಉದಾಹರಣೆಗೆ ರೂಢಿಯ ಕನ್ನಡದಲ್ಲಿರುವ ವಾಕ್ಯಗಳನ್ನೂ ಅವುಗಳ ಅಭಿಪ್ರಾಯವನ್ನೂ ಸಂಸ್ಕೃತದಲ್ಲಿ ಅನುವಾದಮಾಡಿರುವ ಬಗೆಯನ್ನು ಇಲ್ಲಿ ನೋಡಿ :

೧. ಹೀಗೆಂದು ಅವನಿಗೆ ಉತ್ತರವನ್ನು ಬರೆಯಿಸಲಾಯಿತು. इति तस्मै प्रत्युत्तरम् अलिलिख्यत ।

೨. ಅನುಮತಿಯಿಲ್ಲದೆ ಒಳಕ್ಕೆ ಬಂದವರಿಗೆ ದಂಡನೆ. अनुमति विना प्रविशन्तो दण्ड्यन्ते ।

೩. ಯಾವಾಗ ಹೊರಡೋಣವಾಗುತ್ತದೆ ? कदा प्रस्थीयते ?

೪. ನಮಗೆ ಕನ್ನಡಭಾಷೆ ತಿಳಿಯದು. कन्नडभाषा न विज्ञायते अस्माभिः ।

೫. ಇಲ್ಲಿ ಸಂಜೆಯ ಹೊತ್ತು ಪುರಾಣಶ್ರವಣವಾಗುತ್ತದೆ. अत्र सायङ्काले पुराणं श्राव्यते ।

## ಅಭ್ಯಾಸ ೫೬

ಈ ವಾಕ್ಯಗಳನ್ನು ಭಾವೇ ಅಥವಾ ಕರ್ಮಣಿ-ಪ್ರಯೋಗಗಳನ್ನು ಬಳಸಿದ ವಾಕ್ಯಗಳಿಂದ ಸಂಸ್ಕೃತಕ್ಕೆ ತಿರುಗಿಸಿರಿ :

೧. ಆ ಊರಲ್ಲಿ ಯಾರ ಮನೆಯಲ್ಲಿ ಇರುತ್ತೀರಿ (स्था) ? ೨. ಇಂದೇ ಪತ್ರವನ್ನು ಬರೆಯುತ್ತೇವೆ. ೩. ಅಲ್ಲಿ ಒಂದು ಕವಡೆಯೂ (वराटकः) ಸಿಕ್ಕುವದಿಲ್ಲ (लभ्) । ೪. ಶರತ್ಕಾಲದಲ್ಲಿ ದೇವಿಗೆ ಮೇಕೆಯನ್ನೋ (अजः) ಕುರಿಯನ್ನೋ (अविः) ಅರ್ಪಿಸುತ್ತಾರೆ. ೫. ಎಲ್ಲಿಂದ ಬರೋಣಾಗುತ್ತಿದೆ ? ೬. ಆ ರತ್ನಗಳನ್ನು ಕಳ್ಳರು ಕದ್ದುಕೊಂಡು ಹೋಗುತ್ತಾರೆ (अपहृ).

೮೦. ಧಾತುವಿನ ಮೂಲರೂಪಕ್ಕೆ य ಪ್ರತ್ಯಯವನ್ನೂ ಆತ್ಮನೇಪದದ ಪ್ರತ್ಯಯಗಳನ್ನೂ ಸೇರಿಸಿದರೆ ಅನದ್ಯತನಭೂತದ ಭಾವೇ-ಕರ್ಮಣಿ ಪ್ರಯೋಗಗಳಾಗುವವು. ಕರ್ತರಿಪ್ರಯೋಗದಂತೆಯೇ अ ಕಾರಾಗಮವೂ ಇರಬೇಕು. ಉದಾ : अ-भू-यत् - ಆಯಿತು, अकुस्यत - ಅಪ್ಪಿಕೊಳ್ಳಲ್ಪಟ್ಟನು, अवन्द्यत - ವಂದಿಸಲ್ಪಟ್ಟನು, अजायत - ಹುಟ್ಟಿದನು, अबुद्ध्यत - ಅರಿಯಲ್ಪಟ್ಟಿತು, अचोर्यत - ಕದಿಯಲ್ಪಟ್ಟಿತು.

## ಅಭ್ಯಾಸ ೫೭

ಕನ್ನಡಿಸಿರಿ :

१. न तत्र किमपि अलभ्यत (ದೊರಕಿಸಲ್ಪಟ್ಟಿತು, ಸಿಕ್ಕಿತು) । २. ताभ्याम् अताड्यत शिशुः । ३. यूयं केन अशिक्ष्यध्वम् । ४. धात्र्या (ದಾದಿಯಿಂದ) स शिशुः अपुष्यत । ५. युष्माभिः किम् अदृश्यत ? ६. भगवतो नामस्मरणेन ते सर्वैः पापैरमुच्यन्त । ७. रामलक्ष्मणौ मुनिभिः किम् अपूज्येताम् ? ८. छात्रैः श्लोकार्थः प्रत्यपद्यत ॥

೮೧. ಈ ಕೆಳಗಿನ ವಾಕ್ಯಗಳಲ್ಲಿ ಕರ್ಮಣಿಪ್ರಯೋಗವಾದ ಧಾತುವಿನಲ್ಲಿ ಯಾವ ಮಾರ್ಪಾಡಾಗಿದೆ ?

१. तेन किं पृच्छ्यते (प्रच्छ्) ? २. एवं इज्यते (यज् - ಯಾಗಮಾಡು) तैः । ३. विद्यैव धनम् उच्यते (वच् - ಹೇಳು) । ४. अत्र त्रीन् दिवसान् (ದಿವಸಗಳವರೆಗೆ) उष्यते (वस्) अस्माभिः । ५. व्रीहयो[1] भ्राष्ट्रे भृज्जयन्ते (ಭತ್ತವನ್ನು ಹುರಿಯುವ ಹಂಚಿನಲ್ಲಿ ಹುರಿಯುತ್ತಾರೆ) ॥

ವಿಶೇಷ : ಕೆಲವು ಧಾತುಗಳ ಯ, ರ, ವಕಾರಗಳಿಗೆ ಇ, ಋ, ಉಗಳು ಆದೇಶವಾದಮೇಲೆ ಕರ್ಮಣಿಪ್ರಯೋಗವಾಗುತ್ತದೆ. ಇದಕ್ಕೆ ಸಂಪ್ರಸಾರಣವೆಂದು ಹೆಸರು.

೮೨. ಧಾತುಗಳ ಭವಿಷ್ಯತ್ಕಾಲದ ರೂಪಗಳಿಗೂ य ಸೇರಿಸಿ ಕರ್ಮಣಿರೂಪ ವನ್ನು ಮಾಡಿಕೊಳ್ಳಬಹುದು. ಉದಾಹರಣೆಗೆ :

**१. आचार्येण ते तत्त्वं बोधिष्यन्ते[2] । (बुध्) । २. तदस्माभिः श्वो (ನಾಳೆ) वक्ष्यते । ३. ऋषयः सर्वे भक्त्या वन्दिष्यन्ते ॥**

---

1. ಧಾನ್ಯದ ಹೆಸರುಗಳು ಬಹುವಚನದಲ್ಲಿರುತ್ತವೆ : ಮಾಷಾಃ, ತಿಲಾಃ ಇತ್ಯಾದಿ.

2. ಕೆಲವು ಧಾತುಗಳಿಗೆ ಇ ಸೇರುವದಿಲ್ಲ, ಮಿಕ್ಕವುಗಳಿಗೆ ಸೇರುತ್ತವೆ. ೭೮ನೇ ಪುಟದ ಕೊನೆಯಲ್ಲಿರುವ ವಿಶೇಷ ಟಿಪ್ಪಣಿಯನ್ನು ನೋಡಿ.

# ೧೫. ಭೂತಕೃದಂತಗಳು

೮೩. ಅನದ್ಯತನಭೂತಕಾಲವನ್ನು ಹೇಳುವ ಕ್ರಿಯಾಪದಗಳ ರೂಪವನ್ನು ಮಾಡಿಕೊಳ್ಳುವ ಬಗೆಯನ್ನು ಹಿಂದೆ (೩೦. ೬೩ರಲ್ಲಿ) ತಿಳಿಯಿಸಿರುತ್ತದೆಯಷ್ಟೆ ? ಭೂತಕಾಲದ ಅರ್ಥವನ್ನು ಬೇರೆಯ ಬಗೆಯಿಂದಲೂ ತಿಳಿಯಿಸುವದಕ್ಕೆ ಬರುತ್ತದೆ. ಉದಾಹರಣೆಗೆ ಈ ವಾಕ್ಯಗಳನ್ನು ನೋಡಿ :

१. अस्ति कर्पूरद्वीपे पद्मकेलि नाम सरोवरम् । तत्र हिरण्यगर्भो नाम राजहंसः प्रतिवसति । समीपे एव ग्रामे कश्चन व्याधः प्रतिवसति स्म । स च नित्यं सरोवरम् आगच्छति । विश्वासं च वहति कदाचित् इमं हंसं हस्ते करिष्यामीति ॥

ವಿಶೇಷ : ಇಲ್ಲಿರುವ ಕ್ರಿಯಾಪದಗಳೆಲ್ಲವೂ - 'ಕರಿಷ್ಯಾಮಿ' ಎಂಬ ಭವಿಷ್ಯದ್ರೂಪದ ಕ್ರಿಯಾಪದವನ್ನು ಬಿಟ್ಟರೆ ಉಳಿದವೆಲ್ಲ - ವರ್ತಮಾನಕಾಲದ ರೂಪಗಳು. ಆದರೂ ಇದು ಕಥೆಯಾದ್ದರಿಂದ ಅವಕ್ಕೆ ಭೂತಕಾಲದ ಅರ್ಥ. ಕನ್ನಡದ ಅನುವಾದ ಹೀಗೆ :

ಕರ್ಪೂರದ್ವೀಪದಲ್ಲಿ 'ಪದ್ಮಕೇಲಿ' ಎಂಬ ಸರೋವರವುಂಟು. ಅಲ್ಲಿ ಹಿರಣ್ಯಗರ್ಭನೆಂಬ ರಾಜಹಂಸವು ವಾಸಮಾಡಿಕೊಂಡಿತ್ತು. ಹತ್ತಿರದಲ್ಲಿಯೇ ಇರುವ ಹಳ್ಳಿಯಲ್ಲಿ ಒಬ್ಬ ಬೇಡನು ವಾಸವಾಗಿದ್ದನು. ಅವನು ನಿತ್ಯವೂ ಸರೋವರಕ್ಕೆ ಬರುತ್ತಿದ್ದನು ; ಮತ್ತು 'ಯಾವಾಗಲಾದರೂ ಈ ಹಂಸವನ್ನು ಕೈವಶಮಾಡಿಕೊಳ್ಳುವೆನು' ಎಂದು ನಂಬಿಕೆಯನ್ನಿಟ್ಟುಕೊಂಡಿದ್ದನು.

ವಿಶೇಷ : (1) ವರ್ತಮಾನಕ್ರಿಯಾಪದಗಳಿಗೂ ಭೂತಕಾಲದ ಕ್ರಿಯಾಪದಗಳಿಗೂ ಸಂದರ್ಭಕ್ಕೆ ತಕ್ಕಂತೆ ಬೇರೆಬೇರೆಯ ಬಗೆಯಿಂದ ಅನುವಾದಮಾಡಬೇಕಾಗುವದೆಂಬುದನ್ನು ಮರೆಯದೆ ಇರಬೇಕು. ಉದಾಹರಣೆಗೆ :

आगच्छति - ಬರುತ್ತಾನೆ, ಬರುತ್ತಿದಾನೆ, (ಕಥೆಯಲ್ಲಿ) ಬರುತ್ತಿದ್ದನು ; प्रतिवसति स्म - ವಾಸಮಾಡಿಕೊಂಡಿದ್ದನು ; विश्वासं करोति - ನಂಬುತ್ತಾನೆ, (ಕಥೆಯಲ್ಲಿ) ನಂಬಿಕೆಯನ್ನಿಟ್ಟುಕೊಂಡಿದ್ದನು ; उपविशति - (ಕಥೆಯಲ್ಲಿ) ಕೂತುಕೊಂಡಿದ್ದನು.

(2) ಇಲ್ಲಿ ಕೊಟ್ಟಿರುವ ಕ್ರಿಯಾಪದಗಳಿಗೆ ಅನದ್ಯತನಭೂತಕಾಲಗಳಿವು :

प्रतिवसति - प्रत्यवसत्, आगच्छति - आगच्छत्, वहति - अवहत् ॥
ಇವಕ್ಕೂ ಮೇಲೆ ಕೊಟ್ಟಿರುವಂತೆಯೇ ಅರ್ಥ.

(3) ಅನುವಾದಕವಾಕ್ಯ (Direct Speech) ಗಳನ್ನು ' ' ಈ ಚಿಹ್ನೆಯಿಂದ ಪ್ರಾರಂಭಿಸಬೇಕು ; ಹೀಗೆ ಗುರುತುಹಾಕಿಕೊಳ್ಳುವದು ಇಂಗ್ಲೀಷುಪದ್ಧತಿ. ಈ ಪದ್ಧತಿಯನ್ನು ಅನುಸರಿಸಿದರೆ **ವಿಶ್ವಾಸಂ ಕರೋತಿ 'ಕದಾಚಿತ್ ಇಮಂ ಹಂಸಂ ಹಸ್ತೇ ಕರಿಷ್ಯಾಮಿ' ಇತಿ** - ಎಂದು ಇತಿಯನ್ನು ಚಿಹ್ನೆಯ ಹೊರಗೆ ಇಡಬೇಕು.

**२. एकदा राजहंसः कमलपर्यङ्के सुखासीनस्तिष्ठति (अतिष्ठत्) । व्याधश्च यथाकालं सरोवरं प्रति प्रातिष्ठत । मार्गे कश्चन भटोऽश्वम् अवाहयत् । उभावपि तौ सरोवरं प्राप्तवन्तौ (प्राप्नुताम्) । अथ व्याधो भटम् ऐक्षत । भटस्य पुरतः एका पेटिका अवर्तत ॥**

ವಿಶೇಷ : (1) ಇಲ್ಲಿ 'ತಿಷ್ಠತಿ' ; ಎಂಬ ವರ್ತಮಾನರೂಪ, ಅನದ್ಯತನಭೂತ ರೂಪಗಳು, ('ಪ್ರಾಪ್ತವನ್ತೌ' ಎಂಬ) ಕೃದಂತ - ಈ ಮೂರೂ ಭೂತಕಾಲವನ್ನು ತಿಳಿಸುವದಕ್ಕೆ ಪ್ರಯುಕ್ತವಾಗಿವೆ. ವರ್ತಮಾನಕ್ಕೂ ಕೃದಂತಕ್ಕೂ ಮುಂದೆ ಅನದ್ಯತನರೂಪವನ್ನು ತೋರಿಸಿದೇವೆ. ವಾಕ್ಯಗಳ ಕನ್ನಡ ಅನುವಾದವು ಹೀಗೆ :

ಒಮ್ಮೆ ರಾಜಹಂಸವು ಕಮಲದ ಮಂಚದಮೇಲೆ ಸುಖವಾಗಿ ಕುಳಿತುಕೊಂಡಿತ್ತು. ಬೇಡನೂ (ಎಂದಿನ) ವೇಳೆಗೆ ಸರಿಯಾಗಿ ಸರೋವರದ ಕಡೆಗೆ ಹೊರಟಿದ್ದನು. ದಾರಿಯಲ್ಲಿ ಯಾವನೋ ಒಬ್ಬ ಸಿಪಾಯಿ ಕುದುರೆಯನ್ನು ಸವಾರಿಮಾಡಿಕೊಂಡು ಹೋಗುತ್ತಿದ್ದನು. ಅವರಿಬ್ಬರೂ ಕೆರೆಯನ್ನು ಸೇರಿದರು. ಆಗ ಬೇಡನು ಸಿಪಾಯಿಯನ್ನು ಕಂಡನು. ಸಿಪಾಯಿಯ ಮುಂದೆ ಒಂದು ಪೆಟ್ಟಿಗೆ ಇತ್ತು.

(2) ಇಲ್ಲಿರುವ ಅನದ್ಯತನಕ್ರಿಯಾಪದಗಳಿಗೆ ವರ್ತಮಾನರೂಪಗಳು ಹೀಗಿವೆ : ಪ್ರಾತಿಷ್ಠತ - ಪ್ರತಿಷ್ಠತೇ । ಅವಾಹಯತ್ - ವಾಹಯತಿ । ಐಕ್ಷತ - ಈಕ್ಷತೇ । ಅವರ್ತತ - ವರ್ತತೇ । ಉಭೌ - ಈ ಶಬ್ದಕ್ಕೆ ಏಕವಚನಬಹುವಚನಗಳಿಲ್ಲ. ಉಭೌ ಉಭೌ ಉಭಾಭ್ಯಾಮ್ ಉಭಾಭ್ಯಾಮ್ ಉಭಾಭ್ಯಾಮ್ ಉಭಯೋಃ, ಉಭಯೋಃ ॥ 'ಪುರತಃ' ಅವ್ಯಯ.

**३. व्याधः स्वगतं चिन्तितवान् 'अहो ! नूनं पेटिकायाम् अमूल्यानि रत्नानि रक्षितवानयम् । दिष्ट्या अयं मम मार्गे आगतोऽस्ति । हतोऽयं वराको न संशयः । यतो मया अनुपदमेव अश्वात् निपातितो भविष्यति' इति । अथ सहसा मार्गे पतितं पाषाणखण्डमेकम् उद्धृत्य स पापसङ्कल्पो भटं प्रति प्रक्षिप्तवान् ।**

तेन तु दैवगत्या पेटिका अभिहता। तत उत्थितेन महता शब्देन चकितोऽश्वः वेगेन प्रधावितः। हंसश्च सपदि उत्पतितवान्॥

ವಿಶೇಷ : ಇಲ್ಲಿರುವ ಭೂತಕಾಲವಾಚಕಗಳೆಲ್ಲ ಕೃದಂತಗಳೇ ; ಇಲ್ಲಿ ವರ್ತಮಾನ ರೂಪವಾಗಲಿ ಅನದ್ಯತನರೂಪವಾಗಲಿ ಇಲ್ಲ. ಸಾಮಾನ್ಯಧಾತುವಿಗೆ त ಸೇರಿಸಿದರೆ ಭೂತ ಕೃದಂತಗಳಾಗುವವು. ವಾಕ್ಯಗಳಿಗೆ ಅನುವಾದ ಹೇಗೆಂದರೆ :

ಬೇಡನು ತನ್ನಲ್ಲಿ ತಾನು "ಆಹ ! ನಿಜವಾಗಿ ಪೆಟ್ಟಿಗೆಯಲ್ಲಿ ಅಮೂಲ್ಯವಾದ ರತ್ನಗಳನ್ನು ಇವನು ಇಟ್ಟುಕೊಂಡಿದಾನೆ (= ಇಟ್ಟುಕೊಂಡಿರಬೇಕು). ಅದೃಷ್ಟವಶ ದಿಂದ ಇವನು ನನ್ನ ದಾರಿಯಲ್ಲಿ ಬಂದಿರುತ್ತಾನೆ. ಈ ಬಡಪಾಯಿ (= ಬೆಪ್ಪನು) ಕೆಟ್ಟನು, ಇದಕ್ಕೆ ಸಂಶಯವಿಲ್ಲ ; ಏಕೆಂದರೆ ನನ್ನಿಂದ ಇಷ್ಟರಲ್ಲಿಯೇ ಕುದುರೆಯಿಂದ ಕೆಡಹಲ್ಪಟ್ಟವನಾಗುವನು (= ಇಷ್ಟರಲ್ಲಿಯೇ ಇವನನ್ನು ಕುದುರೆಯಿಂದ ಕೆಡವಿ ಬಿಡುವೆನು)" ಎಂದು ಯೋಚಿಸಿಕೊಂಡನು. ಆಮೇಲೆ ಚಟ್ಟನೆ (= ಹಿಂದುಮುಂದು ಯೋಚಿಸದೆ) ದಾರಿಯಲ್ಲಿ ಬಿದ್ದಿದ್ದ ಒಂದು ಕಲ್ಲುತುಂಡನ್ನು ಎತ್ತಿಕೊಂಡು ಆ ಕೆಟ್ಟ ಸಂಕಲ್ಪದವನು ಸಿಪಾಯಿಯ ಕಡೆಗೆ ಎಸೆದನು. ಆದರೆ ದೈವಗತಿಯಿಂದ ಅದರಿಂದ ಪೆಟ್ಟಿಗೆಯು ಹೊಡೆಯಲ್ಪಟ್ಟಿತು (= ಅದು ಪೆಟ್ಟಿಗೆಗೆ ತಗುಲಿತು). ಅದರಿಂದ ಎದ್ದ ದೊಡ್ಡ ಶಬ್ದದಿಂದ ಬೆದರಿದ ಕುದುರೆಯು ವೇಗದಿಂದ ಓಡಿತು, ಮತ್ತು ಹಂಸವು (= ಹಂಸವೂ) ಕೂಡಲೆ ಹಾರಿಹೋಯಿತು.

ವಿಶೇಷ : ಇಲ್ಲಿರುವ ಕೃದಂತವಿಶೇಷಣಗಳಿಗೆ ಭೂತಕಾಲದ ಕ್ರಿಯಾಪದದ ಅರ್ಥವಿದೆ. ಅವಕ್ಕೆ ವರ್ತಮಾನ ಮತ್ತು ಅನದ್ಯತನರೂಪಗಳು ಹೀಗಿವೆ :

| ಕೃದಂತ | ವರ್ತಮಾನ | ಅನದ್ಯತನಭೂತ |
|---|---|---|
| चिन्तितवान् | चिन्तयते | अचिन्तयत |
| रक्षितवान् | रक्षति | अरक्षत् |
| आगतः | आगच्छति | आगच्छत् |
| हतः | हन्यते | अहन्यत |
| निपातितः | निपात्यते | न्यपात्यत |
| पतितम् | पतति | अपतत् |

| | | |
|---|---|---|
| प्रक्षिप्तवान् | प्रक्षिपति | प्राक्षिपत् |
| अभिहता | अभिहन्यते | अभ्यहन्यत |
| उत्थितः | उत्तिष्ठति | उदतिष्ठत् |
| चकितः | चकते | अचकत |
| प्रधावितः | प्रधावति | प्राधावत् |
| उत्पतितवान् | उत्पतति | उदपतत् |

ಇಲ್ಲಿರುವ ಅವ್ಯಯಗಳು : दिष्ट्या, यतः, अनुपदम्, अथ, सहसा, प्रति, तु, ततः, च, सपदि ॥

೮೪. ಭೂತಕಾಲವನ್ನು ಮೂರು ಬಗೆಯಿಂದ ತಿಳಿಸುವ ರೀತಿಯನ್ನು ಹಿಂದಿನ ಖಂಡದಲ್ಲಿ ತಿಳಿಸಿಕೊಟ್ಟಿದೆ :

**(೧) ವರ್ತಮಾನದ ಕ್ರಿಯಾಪದವನ್ನೂ स्म ಎಂಬ ಅವ್ಯಯವನ್ನೂ ಸೇರಿಸಿ ಅಥವಾ ಸೇರಿಸದೆ ಉಪಯೋಗಿಸುವದು.** ಹಿಂದಿನ ಖಂಡದ ಒಂದನೆಯ ಮಹಾವಾಕ್ಯ (Paragraph)ವನ್ನು ನೋಡಿ.

ಕೆಲವು ಉದಾಹರಣೆಗಳು : तदा स प्रतिदिनम् उद्यानं गच्छति स्म, ಅಥವಾ गच्छति । अस्ति तत्र चन्द्रो नाम राजा ; तस्य पुत्राः वानरयूथं भोजनेन पुष्टिं नयन्ति स्म ॥

**(೨) ಅನದ್ಯತನಭೂತಕಾಲದ ಕ್ರಿಯಾರೂಪಗಳನ್ನು ಉಪಯೋಗಿಸುವದು.** ಎರಡನೆಯ ಮಹಾವಾಕ್ಯವನ್ನು ನೋಡಿ.

**(೩) ಭೂತಕೃದಂತಗಳನ್ನು ಉಪಯೋಗಿಸುವದು.** ಮೂರನೆಯ ಮಹಾವಾಕ್ಯವನ್ನು ನೋಡಿ.

ಧಾತುವಿನ ಗಣವು ಗೊತ್ತಾಗದೆ ಇದ್ದರೂ ಭೂತಕೃದಂತಗಳನ್ನೇ ಕ್ರಿಯಾಪದಗಳಂತೆ ಬಳಸಬಹುದು ; ಅವುಗಳ ರೂಪನಿಷ್ಪತ್ತಿಯೂ ಸುಲಭವಾಗಿ ತಿಳಿದಿರುವದರಿಂದ ಈ ಪದ್ಧತಿಯನ್ನು ಬೇಕಾದಾಗ ಆಚರಣೆಗೆ ತಂದುಕೊಳ್ಳಬಹುದು. ಉದಾ : **ಜಾತಃ** - ಹುಟ್ಟಿದನು ; **ಗತಃ** - ಹೋದನು ; **ಸಂಭೂತಮ್** - ಆಯಿತು, ಹುಟ್ಟಿತು ; **ಸ್ಥಿತಾ** - ಇದ್ದಳು ; **ಕೃತವಾನ್** - ಮಾಡಿದನು ; **ಅತೀತಾನಿ** - ಕಳೆದವು ; **ಪೂಜಿತಃ** - ಪೂಜಿಸಲ್ಪಟ್ಟನು ಇತ್ಯಾದಿ.

೮೫. ಭೂತಕೃದಂತಗಳನ್ನು ಕ್ರಿಯಾಪದವಾಗಿ ಉಪಯೋಗಿಸುವಾಗ ಈ ವಿಷಯಗಳನ್ನು ನೆನಪಿನಲ್ಲಿಟ್ಟಿರಬೇಕು :

(೧) ಬರಿಯ ಭೂತಕೃದಂತವು ಭೂತಕಾಲವನ್ನೇ ತಿಳಿಸುತ್ತದೆ. ಉದಾ : आगतः, उपविष्ठः, धावितः ಇತ್ಯಾದಿ.

(೨) ಸಕರ್ಮಕಧಾತುಗಳ ಕೃದಂತಗಳಿಗೆ ಕರ್ಮಣಿಪ್ರಯೋಗದ ಅರ್ಥ. ಉದಾ : कृतम् - ಮಾಡಲ್ಪಟ್ಟಿತು ; पातितः - ಕೆಡವಲ್ಪಟ್ಟನು ; हतः - ಹೊಡೆಯಲ್ಪಟ್ಟನು, ಕೊಲ್ಲಲ್ಪಟ್ಟನು ; प्रक्षिप्तः - ಎಸೆಯಲ್ಪಟ್ಟನು ; कृतः - ಮಾಡಲ್ಪಟ್ಟನು ಇತ್ಯಾದಿ.

(೩) ಸಕರ್ಮಕಭೂತಕೃದಂತಗಳಿಗೆ वत् ಪ್ರತ್ಯಯವನ್ನು ಸೇರಿಸಿದರೆ ಕರ್ತ್ರರ್ಥವಾಗುವದು. ಉದಾ : पातितवान् - ಕೆಡಹಿದನು ; हतवान् - ಕೊಂದನು ; प्रक्षिप्तवान् - ಎಸೆದನು ; कृतवान् - ಮಾಡಿದನು.

(೪) ಅಕರ್ಮಕಧಾತುಗಳ ಕೃದಂತಕ್ಕೆ वत् ಪ್ರತ್ಯಯ ಸೇರಿಸಬಹುದು. ಆಗಲೂ ಅವು ಕರ್ತ್ರರ್ಥವೇ. ಉದಾ : पतितवान् - ಬಿದ್ದನು ; उपविष्टवान् - ಕುಳಿತನು ; स्थितवान् - ನಿಂತಿದ್ದನು, ಇದ್ದನು ; गतवान् - ಹೋದನು.

(೫) ಭೂತಕೃದಂತಗಳಿಗೆ ತಮ್ಮ ವಿಶೇಷ್ಯದ ಲಿಂಗವಚನವಿಭಕ್ತಿಗಳಿರುವವು. ಉದಾ : बालको गतः, भ्रातरौ गतौ, सर्वे गताः, अहल्या गता, मित्रं गतम् । बालको गतवान्, भ्रातरौ गतवन्तौ, सर्वे गतवन्तः, अहल्या गतवती, मित्रं गतवत् ।। (ಇವನ್ನು गतवान् गतवन्तौ गतवन्तः ಎಂಬಂತೆ ನಡೆಯಿಸಬೇಕು.)

(೬) ಭೂತಕೃದಂತಗಳನ್ನು ಮಿಕ್ಕ ವಿಶೇಷಣಗಳಂತೆಯೇ ವಿಶೇಷಣಗಳಾಗಿಯೂ ಉಪಯೋಗಿಸಬಹುದು. ಉದಾ : गतः कालो न प्रत्यागच्छति । (ಹೋದ ಕಾಲವು ಹಿಂತಿರುಗುವದಿಲ್ಲ). आगतवतीम् अहल्यां नमति । (ಬಂದ ಅಹಲ್ಯೆಯನ್ನು ನಮಸ್ಕರಿಸುತ್ತಾನೆ.) आगतानि मित्राणि पश्यति । (ಬಂದ ಮಿತ್ರರನ್ನು ನೋಡುತ್ತಾನೆ.)

(೭) ಸಕರ್ಮಕಧಾತುಗಳ ಭೂತಕೃದಂತಗಳನ್ನು ಕರ್ಮಣಿಪ್ರಯೋಗದಲ್ಲಿ ಉಪಯೋಗಿಸಿರುವಾಗ ಕ್ರಿಯೆಯ ಕರ್ತೃವಿನ ಹೆಸರು ತೃತೀಯೆಯಲ್ಲಿರಬೇಕು. ಉದಾ : तेन सर्पो दृष्टः । व्याधेन पाषाणखण्डः प्रक्षिप्तः । ಆದರೆ ಈ ಕೃದಂತ ಗಳಿಗೆ वत् ಪ್ರತ್ಯಯವನ್ನು ಸೇರಿಸಿದಾಗ ಅವು ಕರ್ತರಿಪ್ರಯೋಗದಲ್ಲಿರುವದರಿಂದ ಕರ್ತೃವಾಚಕವು ಪ್ರಥಮಾವಿಭಕ್ತಿಯಲ್ಲಿರಬೇಕು. ಉದಾ : स सर्पं दृष्टवान् । व्याधः पाषाणखण्डं प्रक्षिप्तवान् ।।

(೮) ಭೂತಕೃದಂತಗಳಿಗೆ अस् ಅಥವಾ भू ಧಾತುವಿನ ಆಖ್ಯಾತರೂಪ ಗಳನ್ನು ಸೇರಿಸಿದರೆ ಆಯಾ ಕಾಲದ ಅರ್ಥವನ್ನು ಕೊಡುವವು. ಕೆಲವು ಕಡೆ ಈ ಆಖ್ಯಾತ ರೂಪಗಳನ್ನು ಸಂದರ್ಭಕ್ಕೆ ತಕ್ಕಂತೆ ಅಧ್ಯಾಹಾರಮಾಡಿಕೊಳ್ಳಬೇಕಾಗುವದು.

(ಅ) इदानीमेव आगतोऽस्मि । तत्र रज्जुरेका पतिता आसीत् । अयं वराको मया हतो भविष्यति ।

(ಆ) स इदानीं भुक्तवान् । (अस्ति ಅಧ್ಯಾಹಾರ) । दशरथेन किम् उक्तम् ? (आसीत् ಅಧ್ಯಾಹಾರ) । आवां शान्तौ (स्वः ಅಧ್ಯಾಹಾರ) । त्वं किं कृतवान् ? (असि ಅಧ್ಯಾಹಾರ)

## ಅಭ್ಯಾಸ ೫೮

ಇಲ್ಲಿರುವ ಭೂತಕೃದಂತಗಳನ್ನೂ ಅವುಗಳ ವಿಶೇಷ್ಯಗಳನ್ನೂ ಹೇಳಿರಿ. ವಾಕ್ಯಗಳನ್ನು ಕನ್ನಡಿಸಿರಿ :

गौतमो नाम महर्षिः, तत्राऽऽश्रमे बहूनि वर्षाणि अहल्यया सह स्थितवान् । स्नानाय नदीं गतवति मुनौ, इन्द्रस्तत्र मुनिवेषेण आगतवान् । एकाकिनीं (ಒಂಟಿಯಾಗಿ) स्थिताम् अहल्यां 'मां भजस्व' (ಸೇರು) इति प्रार्थितवान् । तस्मिन्नेव काले प्रत्यागतेन मुनिना उभावपि (ಇಬ್ಬರೂ) दृष्टौ । ततः क्रुद्धेन मुनिना इन्द्रः शप्तोऽभवत् 'हे दुर्मते, मम वेषेण इदं कृतवानसि ; अतः (ಆದ್ದರಿಂದ) सद्य एव (ಕೂಡಲೆ) तत्फलं अनुभविष्यसि । अनन्तरं गौतमो भार्यामपि शप्तवान्,

आश्रमं च शप्तवान्। तदाप्रभृति (ಆಗಿನಿಂದ ಮೊದಲಾಗಿ) एतत् आश्रमस्थानं निर्जनं तिष्ठति । अहल्या रामस्य दर्शनेन पूता सती (ಪವಿತ್ರಳಾಗಿ) शापस्य अन्तं (ಕೊನೆಯನ್ನು, ನಾಶವನ್ನು) गतवती ॥

## ಅಭ್ಯಾಸ ೫೯

ಇಲ್ಲಿರುವ ಕರ್ತರಿಪ್ರಯೋಗದ ಕ್ರಿಯಾಪದಗಳನ್ನು ಕರ್ಮಣಿಪ್ರಯೋಗದ ರೂಪಕ್ಕೂ, ಕರ್ಮಣಿಪ್ರಯೋಗದ ಕ್ರಿಯಾಪದಗಳನ್ನು ಕರ್ತರಿಪ್ರಯೋಗದ ರೂಪಕ್ಕೂ ತಿರುಗಿಸಿ. ವಿಧೇಯದಲ್ಲಿ ಕೃದಂತವಿದ್ದರೆ ಮತ್ತೊಂದು ಪ್ರಯೋಗದಲ್ಲಿಯೂ ಕೃದಂತವನ್ನೇ ಪ್ರಯೋಗಿಸಿ ರೂಪಾಂತರವನ್ನು ಮಾಡಿರಿ. ಅಕರ್ಮಕಕ್ರಿಯೆಗಳನ್ನು ಭಾವೇಪ್ರಯೋಗಕ್ಕೆ ತಿರುಗಿಸಿ :

१. रामो मातरं पितरं च नमस्करोति । २. युष्माभिः रामायणं कदा पठ्यते ? ३. मेघाः वारीणि सिञ्चन्ति । ४. यूयमपि आगच्छथ किम् ? ५. वयं तानि फलानि खादितवन्तः । ६. मित्र, किं श्रृणोषि शब्दम् ? ७. ते नानाविधानि दुःखानि अन्वभवन् । ८. संन्यासिनः शून्यागारे वसन्ति । ९. त्वाम् एतान् प्रश्नान् पृच्छामि । १०. वयं तस्य नामापि न स्मरामः । ११. द्वौ भिक्षुकौ वितर्द्याम् आसाते । १२. स कदाचिदत्र उपविशति, कदाचित्तत्र तिष्ठति । १३. चोराः प्रधाविताः, ततः परं रक्षापुरुषा आगताः ॥

# ೧೬. ಕೆಲವು ಸರ್ವನಾಮಗಳು

೮೬. ಸಂಸ್ಕೃತದಲ್ಲಿ ಕೆಲವು ಶಬ್ದಗಳಿಗೆ (೩೫) ಸರ್ವನಾಮಗಳೆಂಬ ಹೆಸರಿದೆ. ಅವುಗಳಲ್ಲಿ ಕೆಲವನ್ನು ಮಾತ್ರ ಬಳಸಲಾಗಿದೆ.

अस्मद् - ನಾನು, युष्मद् - ನೀನು ಈ ಎರಡು ಶಬ್ದರೂಪಗಳನ್ನು ಒಂದನೆಯ ಪುಸ್ತಕದಲ್ಲಿ (ಪಾ. ೩೧ರಲ್ಲಿ) ಕೊಟ್ಟಿದೆ. ಇವನ್ನು **ಪುರುಷಾರ್ಥಕಸರ್ವನಾಮ** (Personal Pronouns) ಎಂದು ಕರೆಯಬಹುದು.

अस्मद् ಶಬ್ದದ ಪ್ರಥಮಾವಿಭಕ್ತಿಗೆ ಹೊಂದುವಂತೆ ಅನ್ವಯಿಸುವ ಕ್ರಿಯಾಪದಗಳಿಗೆ **ಉತ್ತಮಪುರುಷ** (First Person) ದ ರೂಪವೇ ಬೇಕು ; युष्मद् ಶಬ್ದಕ್ಕೆ

ಅನ್ವಯಿಸುವದಕ್ಕೆ **ಮಧ್ಯಮಪುರುಷ** (Second Person) ದ ಕ್ರಿಯಾಪದವೇ ಬೇಕು. ಮಿಕ್ಕ ಯಾವ ನಾಮವಿರಲಿ, ಅದಕ್ಕೆ ಅನ್ವಯಿಸುವದಕ್ಕೆ **ಪ್ರಥಮಪುರುಷ** (Third Person) ದ ಕ್ರಿಯಾಪದಗಳೇ ಬರುವವು. भवत् ಶಬ್ದಕ್ಕೆ ನೀನು ಎಂಬರ್ಥವಿದ್ದರೂ ಅದಕ್ಕೆ ಪ್ರಥಮಪುರುಷದ ಕ್ರಿಯಾಪದವೇ ಬೇಕು. (ಈ ವಿಷಯಕ್ಕೆ ಖಂ. ೧೮ನ್ನು ನೋಡಿ.)

**ಉದಾಹರಣೆಗಳು**

೧. **ಉತ್ತಮಪುರುಷ** : १. अहं गच्छामि । आवां तिष्ठावः । वयम् उपविशामः ।।
२. अहं क्रुध्ये । आवाम् वर्धावहे । वयम् प्रत्यबुध्यामहि ।।

೨. **ಮಧ್ಯಮಪುರುಷ** : त्वं जीवसि । युवां नृत्यथः । यूयम् ऐक्षध्वम् ।।

೩. **ಪ್ರಥಮಪುರುಷ** : भवान् हसति । सः (सा, तत्) पतति । किं विद्यते ? बालकाः क्रीडन्ति । भक्ताः प्रार्थयन्ते । सर्वे आगच्छन् । नेत्रे स्फुरतः ।।

೮೭. ಕ್ರಿಯಾಪದವು ಯಾವ ನಾಮಪದದೊಡನೆ ಅನ್ವಯಿಸುವದೋ ಅದನ್ನು **ಉದ್ದೇಶ್ಯ** (Subject) ಎಂದು ಕರೆಯಬಹುದು. ವಾಕ್ಯದಲ್ಲಿ ಯಾವದನ್ನು ಕುರಿತು ಹೇಳಿದೆಯೋ ಅದು ಉದ್ದೇಶ ; ಅದನ್ನು ಕುರಿತು ಏನು ಹೇಳಿದೆಯೋ ಅದು **ವಿಧೇಯ** (Predicate). ವಾಕ್ಯವನ್ನು ಉದ್ದೇಶ್ಯದ ಭಾಗ, ವಿಧೇಯದ ಭಾಗ ಎಂದು ವಿಂಗಡಿಸಿಕೊಂಡಾಗ ಕ್ರಿಯಾಪದವು ವಿಧೇಯದಲ್ಲಿರುವದು. ಈ ವಾಕ್ಯಗಳನ್ನು ನೋಡಿ. ಉದ್ದೇಶ್ಯಭಾಗವನ್ನೂ ವಿಧೇಯಭಾಗವನ್ನೂ ವಿಂಗಡಿಸುವದಕ್ಕೆ ಪ್ರಯತ್ನಿಸಿ :

१. पक्षिणः किं नयन्ति ? २. पक्षिभ्यां किं नीयते ? ३. भो मित्र, एवं करिष्यावः । ४. राम, उत्तिष्ठ, सन्ध्याकालोऽतिवर्तते । ५. अपि शिवं भवतः ? ६. कस्मात् चिराद् दृष्टोऽसि ? ७. भद्र, एवं स्थिते किं मन्यते भवान् ?

೧. ಪಕ್ಷಿಗಳು ಏನನ್ನು ಒಯ್ಯುತ್ತಿವೆ ? ೨. (ಎರಡು) ಪಕ್ಷಿಗಳಿಂದ ಏನು ಒಯ್ಯಲ್ಪಡುತ್ತಿದೆ ? ೩. ಎಲೈ ಮಿತ್ರನೆ, ಹೀಗೆ (ನಾವಿಬ್ಬರೂ) ಮಾಡೋಣ. ೪. ರಾಮ, ಏಳು ; ಸಂಧ್ಯಾಕಾಲವು ಮೀರುತ್ತಿದೆ. ೫. ನಿನಗೆ ಕ್ಷೇಮವೆ ? ೬. ಏತಕ್ಕೆ

ಬಹುಕಾಲದಮೇಲೆ ಕಾಣಿಸಿದವನಾಗಿರುವೆ ? ೭. ಅಪ್ಪ, ಹೀಗಿರುವಲ್ಲಿ ನೀನು ಏನೆಂದು ತಿಳಿದಿರುವೆ (ನಿನ್ನ ಅಭಿಪ್ರಾಯವೇನು)?

ಇಲ್ಲಿ ಕ್ರಿಯಾಪದದಿಂದ ವಿಧೇಯಭಾಗವನ್ನು ಇಟ್ಟುಕೊಂಡು ಯಾರು ? - ಎಂಬ ಪ್ರಶ್ನೆಯನ್ನು ಮಾಡಿದರೆ ಉದ್ದೇಶ್ಯಭಾಗವು ಸಿಕ್ಕುವದು. ಹೇಗೆಂದರೆ :

| ಉದ್ದೇಶ್ಯ | ವಿಧೇಯ |
|---|---|
| १. पक्षिणः | किं नयन्ति ? |

[नयन्ति - ಒಯ್ಯುತ್ತವೆ ; ಯಾವವು ? पक्षिणः]

| | |
|---|---|
| २. किं | पक्षिभ्यां नीयते ? |

[नीयते - ಒಯ್ಯಲ್ಪಡುತ್ತದೆ ; ಯಾವದು ? किम्]

| | |
|---|---|
| ३. (आवाम् ) | मित्र, एवं करिष्यावः । |

[करिष्यावः - ಮಾಡೋಣ ; ಯಾರು ? आवाम् (ಅಧ್ಯಾಹಾರವಾಗಿದೆ)]

| | |
|---|---|
| ४. राम, (त्वम्) | उत्तिष्ठ । |

[उत्तिष्ठ - ಏಳು. ಯಾರು ? त्वम्]

| | |
|---|---|
| सन्ध्याकालः | अतिवर्तते । |

[अतिवर्तते - ಮೀರುತ್ತಿದೆ. ಯಾವದು ? सन्ध्याकालः]

| | |
|---|---|
| ५. शिवम् | अपि (अस्ति) भवतः ? |

[शिवम् - ಕ್ಷೇಮವು ; ಇದಕ್ಕೆ अस्ति (ದೆಯೆ) ಎಂಬ ಕ್ರಿಯೆ ಅಧ್ಯಾಹೃತ.]

| | |
|---|---|
| ६. (त्वम्) | कस्मात् चिराद् दृष्टोऽसि ? |

[असि - ಇದ್ದೀಯೆ. ಯಾರು ? त्वम् (ಅಧ್ಯಾಹೃತ)]

| | |
|---|---|
| ७. भवान् | एवं स्थिते किं मन्यते ? |

[मन्यते ತಿಳಿಯುತ್ತೀಯೆ. ಯಾರು ? भवान् ]

೮೮. ಕ್ರಿಯಾಪದವು ಉದ್ದೇಶ್ಯಭಾಗದಲ್ಲಿರುವ ಪ್ರಧಾನಪ್ರಥಮಾಂತ ಶಬ್ದದೊಡನೆ ಅನ್ವಯಿಸುತ್ತದೆ. ಆ ಪದವು ಕ್ರಿಯೆಯ ಕರ್ತೃವನ್ನೇ ಹೇಳುವದೆಂಬ ನಿಯಮವಿಲ್ಲ. ಹೇಗೆಂದರೆ :

१. ते किं पृच्छन्ति ? - ಇಲ್ಲಿ 'पृच्छन्ति' ಪ್ರಥಮಪುರುಷ, ಬಹುವಚನ ; 'ते' ಎಂಬ ಉದ್ದೇಶ್ಯದೊಡನೆ ಅನ್ವಯಿಸುತ್ತದೆ.

२. तैः किं पृच्छयते ? - ಇಲ್ಲಿ 'किम्' ಎಂಬುದು ಉದ್ದೇಶ್ಯ ; 'तैः' ಎಂಬುದು ಕರ್ತೃವನ್ನು ಹೇಳುವ ಪದ ; पृच्छयते ಪ್ರಥಮಪುರುಷ, ಏಕವಚನ ; किम् ಎಂಬುದೂ ಪ್ರಥಮಪುರುಷೈಕವಚನ.

३. कस्त्वम् ? - ಇಲ್ಲಿ त्वम् ಉದ್ದೇಶ್ಯ ; 'असि' (ಅಧ್ಯಾಹೃತ) ವಿಧೇಯ ; ಮಧ್ಯಮಪುರುಷೈಕವಚನ.

४. आगम्यताम्, अत्रोपविश्यताम् - ಇಲ್ಲಿರುವ ಕ್ರಿಯಾಪದಗಳು ಭಾವೇ ಪ್ರಯೋಗ, 'भवद्भिः' ಕರ್ತೃ ; ಆದರೂ ಕ್ರಿಯಾಪದವು ಪ್ರಥಮಪುರುಷೈಕವಚನವೇ. (ಭಾವೇಪ್ರಯೋಗದ ವಿಷಯಕ್ಕೆ ಖಂ. ೭೭ನ್ನು ನೋಡಿ.)

५. फलितास्ते वृक्षाः - (ಆ ಮರಗಳು ಹಣ್ಣುಬಿಟ್ಟಿವೆ.) ಇಲ್ಲಿ 'सन्ति' ಅಧ್ಯಾಹಾರ ; 'वृक्षाः' ಉದ್ದೇಶ್ಯ.

೮೯. अस्मद्, युष्मद् ಈ ಶಬ್ದಗಳಿಗೆ ದ್ವಿತೀಯಾ , ಚತುರ್ಥೀ, ಷಷ್ಠೀ - ಈ ವಿಭಕ್ತಿಗಳಲ್ಲಿ मा, नौ, नः, त्वा, वाम् - ಎಂಬಿವೇ ಮುಂತಾದ ಸಂಕ್ಷೇಪರೂಪಗಳೂ ಇವೆಯಷ್ಟೆ ? (೧ನೆಯ ಭಾಗ, ಪಾ. ೩೧) ಇವನ್ನು

(೧) ವಾಕ್ಯದ ಮೊದಲು ಉಪಯೋಗಿಸಬಾರದು. मां रक्षति सदा देवः । ಇಲ್ಲಿ 'मा रक्षति' ಎಂದು ಪ್ರಯೋಗಿಸಬಾರದು. ಹೀಗೆಯೇ त्वाम् अहं शरणं गतः ; 'त्वा अहम्' ಕೂಡದು.

(೨) ಸಂಬೋಧನರೂಪದ ಮುಂದೆ ಮತ್ತೊಂದು ವಿಶೇಷಣವಿದ್ದ ಹೊರತು ಉಪಯೋಗಿಸಬಾರದು. ಉದಾ : हरे, अस्मान् पाहि । 'नः पाहि' ಎನ್ನಕೂಡದು. ಆದರೆ 'हरे दयालो, नः पाहि' ಇದು ಸರಿ.

(೩) च, वा, एव, हा !, अह ! - ಇವುಗಳಿಗೆ ಸಂಬಂಧಪಡಿಸಿ ಉಪಯೋಗಿಸಬಾರದು. ಉದಾ : त्वां च मां च ಅಥವಾ त्वां मां च स रक्षति । ಇಲ್ಲಿ त्वा च मा च ಎನ್ನುವದು ಸರಿಯಲ್ಲ. ಹೀಗೆಯೇ 'ममैव युष्माकमेव वा' ಇದು ಸರಿ ; 'मे एव, ते एव' ತಪ್ಪು. 'अस्माकं हा ! दुःखोपरि (ದುಃಖದಮೇಲೆ) दुःखम्' ಸರಿ ; 'नः हा !' ತಪ್ಪು. 'ममाह राज्यमद्य क्व गतम् ?', 'मे अह' ಅಲ್ಲ.

## ಅಭ್ಯಾಸ ೬೦

ಇಲ್ಲಿ ಅಸ್ಮದ್, ಯುಷ್ಮದ್ ಶಬ್ದಗಳ ಪೂರ್ಣರೂಪವನ್ನು ಹೇಳಿ. ವಾಕ್ಯಗಳನ್ನು ಕನ್ನಡಿಸಿ :

१. देवो मा सदा रक्षति । २. हरे, पाहि नः । ३. तत्र नौ नयतम् (ನೀವಿಬ್ಬರೂ ಕರೆದುಕೊಂಡುಹೋಗಿರಿ) । ४. स भूपतिरेव पालयति वः । ५. मित्राणि मे किं यच्छन्ति ? ६. दक्षिणा वां न दत्ता । ७. शङ्कर एव दास्यति नः सुखम् । ८. कुत्र ते शाटी ? ९. इमानि वः आसनानि ।।

೯೦. ಮುಂದಿನ ಅಭ್ಯಾಸದಲ್ಲಿರುವ ವಾಕ್ಯಗಳಲ್ಲಿ ಉದ್ದೇಶ್ಯಗಳನ್ನು ಕಂಡು ಹಿಡಿಯಬೇಕಾಗಿದೆ. ಮಾದರಿಗಳನ್ನು ಇಲ್ಲಿ ತೋರಿಸಿದೆ :

१. रामश्च लक्ष्मणश्च भरतश्च शत्रुघ्नश्च पितरम् अभिवादयन्ते । [ರಾಮನೂ ಲಕ್ಷ್ಮಣನೂ ಭರತನೂ ಶತ್ರುಘ್ನನೂ ತಂದೆಯನ್ನು ನಮಸ್ಕರಿಸುತ್ತಾರೆ. ಇಲ್ಲಿ अभिवादयन्ते (ನಮಸ್ಕರಿಸುತ್ತಾರೆ) ಇದು **ವಿಧೇಯಭಾಗ**. ಇದಕ್ಕೆ के (ಯಾರು ?) ಎಂತ ಪ್ರಶ್ನೆಯನ್ನು ಹಾಕಿದರೆ ಉತ್ತರವಾಗಿ ಬರುವ ಮಿಕ್ಕದ್ದೆಲ್ಲವೂ ಸೇರಿ **ಉದ್ದೇಶ್ಯ**. ಇಲ್ಲಿ ಕ್ರಿಯಾಪದ **ಪ್ರಥಮಪುರುಷಬಹುವಚನ** ; ಉದ್ದೇಶ್ಯದಲ್ಲಿ ಉತ್ತಮಮಧ್ಯಮ ಪುರುಷಗಳ ಶಬ್ದಗಳಿಲ್ಲ ; ನಾಲ್ಕು ಪ್ರಥಮೈಕವಚನಗಳಿವೆ.]

२. अहं भवांश्च तत्र गमिष्यावः । [(ನಾನೂ ನೀನೂ ಅಲ್ಲಿಗೆ ಹೋಗೋಣ.) ಇಲ್ಲಿ 'तत्र गमिष्यावः' (ಅಲ್ಲಿಗೆ ಹೋಗೋಣ) ವಿಧೇಯಭಾಗ. ಇದಕ್ಕೆ कौ (ಯಾರಿಬ್ಬರು) ಎಂದು ಕೇಳಿದರೆ ಉತ್ತರವಾಗಿ ಬರುವ 'अहं भवांश्च' ಇದಿಷ್ಟೂ

ಉದ್ದೇಶ್ಯ. ಇಲ್ಲಿ ಕ್ರಿಯಾಪದವು ಉತ್ತಮಪುರುಷದಲ್ಲಿದೆ ; ಏಕೆಂದರೆ ಉದ್ದೇಶ್ಯದಲ್ಲಿ ಅಹಮ್ ಎಂಬ ಉತ್ತಮಪುರುಷದ ಪದವಿದೆ. ಕ್ರಿಯಾಪದವು ದ್ವಿವಚನದಲ್ಲಿದೆ ; ಏಕೆಂದರೆ ಉದ್ದೇಶ್ಯದಲ್ಲಿ ಎರಡು ಪ್ರಥಮಾಂತಗಳಿವೆ.]

३. त्वं च रामश्च कृष्णश्च एवं वदथ । [ನೀನೂ ರಾಮನೂ ಕೃಷ್ಣನೂ ಹೀಗೆ ಹೇಳುತ್ತೀರಿ. ಇಲ್ಲಿ 'एवं वदथ' (ಹೀಗೆ ಹೇಳುತ್ತೀರಿ) ವಿಧೇಯಭಾಗ. के (ಯಾರು ?) ಎಂದು ಪ್ರಶ್ನೆಯನ್ನು ಹಾಕಿಕೊಂಡರೆ ಉಳಿದಭಾಗವು ಉತ್ತರವಾಗಿ ಬಂದು ಉದ್ದೇಶ್ಯವಾಗುವದು. ಕ್ರಿಯಾಪದ वदथ ; ಮಧ್ಯಮಪುರುಷ, ಏಕೆಂದರೆ ಉದ್ದೇಶದಲ್ಲಿ त्वं ಎಂಬ ಮಧ್ಯಮಪುರುಷದ ಪದವಿದೆ. ಕ್ರಿಯಾಪದವು ಬಹುವಚನ ; ಏಕೆಂದರೆ ಉದ್ದೇಶ್ಯದಲ್ಲಿ ಮೂರು ಪ್ರಥಮಾಂತಗಳಿವೆ.]

ನಿಯಮ : (ಅ) ಉದ್ದೇಶ್ಯದಲ್ಲಿ ಏಕವಚನದ, ದ್ವಿವಚನದ, ಅಥವಾ ಬಹುವಚನದ ಒಂದೊಂದೇ ಪದವಿದ್ದರೂ ಎಷ್ಟು ಪ್ರಥಮಾಂತಪದಗಳಿರುವವೋ ಒಟ್ಟು ಸಂಖ್ಯೆಗೆ ಅನುಗುಣವಾಗಿ ಕ್ರಿಯಾಪದದ ವಚನವಿರುತ್ತದೆ.

(ಆ) ಉದ್ದೇಶ್ಯದಲ್ಲಿ ಉತ್ತಮಪುರುಷದ ಪದವಿದ್ದರೆ, ಮಿಕ್ಕ ಪ್ರಥಮಾಂತಗಳು ಯಾವ ಪುರುಷವಾದರೂ ಕ್ರಿಯಾಪದವು ಉತ್ತಮಪುರುಷವಾಗಿರುವದು ; ಉದ್ದೇಶ್ಯದಲ್ಲಿ ಮಧ್ಯಮ ಪುರುಷವಿದ್ದರೆ ಕ್ರಿಯಾಪದವೂ ಮಧ್ಯಮಪುರುಷದಲ್ಲಿರುವದು ; ಉದ್ದೇಶ್ಯದಲ್ಲಿ ಉತ್ತಮ ಮಧ್ಯಮಪುರುಷಗಳೆರಡೂ ಇಲ್ಲದಿದ್ದರೆ ಕ್ರಿಯಾಪದವು ಪ್ರಥಮಪುರುಷದಲ್ಲಿಯೇ ಇರುವದು.

## ಅಭ್ಯಾಸ ೬೧

ಇಲ್ಲಿರುವ ವಾಕ್ಯಗಳನ್ನು ಕನ್ನಡಿಸಿ. ಉದ್ದೇಶ್ಯವಿಧೇಯಭಾಗಗಳನ್ನು ವಿಂಗಡಿಸಿ. ಕ್ರಿಯಾಪದವು ಯಾವ ಪುರುಷ, ಯಾವ ವಚನ ? ಅದು ಆ ಪುರುಷವಚನಗಳದ್ದಾಗಿರಲು ಏನು ಕಾರಣ ?

- १. अहं पत्तनं गमिष्यामि । २. त्वं ग्रामे एव तिष्ठसि किम् ? ३. भवन्तः किं करिष्यन्ति ? ४. अहं च त्वं च क्रीडावः । ५. त्वं च स च किं पश्यथः ? ६. अहं च मम मित्राणि च देवं भजामः । ७. रामश्च लक्ष्मणश्च विश्वामित्रम् अनुगच्छतः । ८. वयं च भवन्तश्च कं देवं भजामहे ? ९. त्वं चाहं च स च सहैव वने भ्रमिष्यामः (ಸಂಚರಿಸೋಣ) । १०. भवान्, कर्णः, कृपश्च भीष्ममेव अभिरक्षन्तु ॥

೯೧. च ಎಂಬ ಅವ್ಯಯವನ್ನು ಉಪಯೋಗಿಸಿದ ಪ್ರಥಮಾಂತಗಳು ಉದ್ದೇಶ್ಯದಲ್ಲಿ ಎಷ್ಟಿರುವವೋ ಅದಕ್ಕನುಗುಣವಾಗಿ ಕ್ರಿಯಾಪದದ ವಚನವಿರುವದಷ್ಟೆ ? वा ಎಂಬ ಅವ್ಯಯವನ್ನು ಸೇರಿಸಿದ ಉದ್ದೇಶ್ಯಗಳು ಅನೇಕವಿದ್ದರೆ ಕ್ರಿಯಾಪದವು ತನ್ನ ಹತ್ತಿರವಿರುವ ಉದ್ದೇಶ್ಯದ ಪುರುಷವಚನಗಳನ್ನು ತೆಗೆದುಕೊಳ್ಳುವದು. ಈ ಅವ್ಯಯವನ್ನು ಎಲ್ಲಾ ಉದ್ದೇಶ್ಯಗಳಿಗೂ ಸೇರಿಸಬಹುದು. ಅಥವಾ ಕೊನೆಯ ಉದ್ದೇಶ್ಯವೊಂದಕ್ಕೇ ಸೇರಿಸಿದರೂ ಸಾಕಾಗುತ್ತದೆ. (ಒಂದನೆಯ ಭಾಗದ ಪಾ. ೩೮ನ್ನು ನೋಡಿ).

## ಅಭ್ಯಾಸ ೬೨

ಈ ಕೆಳಗಿನ ವಾಕ್ಯಗಳಲ್ಲಿ ಕ್ರಿಯಾಪದಗಳ ಪುರುಷವಚನಗಳನ್ನು ತಿಳಿಸಿರಿ ; ಅದು ಯಾವ ಉದ್ದೇಶ್ಯಕ್ಕೆ ಸೇರಿದೆಯೋ ತಿಳಿಸಿ. ವಾಕ್ಯಗಳ ಅರ್ಥವೇನು ?

१. सेनापतिर्वा भटा वा तत्र गच्छन्ति । २. रावणश्च विभीषणश्च संभाषेथे । ३. कृष्णोऽर्जुनश्च तत्र वने संचरतः । ४. त्वं वा तव पिता वा नदीं पङ्किलां (ಕೆಸರಿನಿಂದ ಕೂಡಿದ್ದನ್ನಾಗಿ) अकरोत् । ५. अहं वा मम भृत्या (ಆಳುಗಳು) वा तत्र कार्यं करिष्यन्ति । ६. मम भृत्या वा मित्रं वा त्वां नयति । ७. स वा वयं वा तत् कथयिष्यामः । ८. अहं मम शत्रुर्वा अद्य (ಇಂದು) म्रियते ॥

### ಪ್ರಶ್ನಾರ್ಥಕಸರ್ವನಾಮಗಳು

೯೨. किम् ಶಬ್ದದ ರೂಪಗಳನ್ನು ಒಂದನೆಯ ಭಾಗದಲ್ಲಿ (ಪಾ. ೩೧, ೪೬) ತಿಳಿಸಿರುತ್ತದೆಯಾದರೂ ಇಲ್ಲಿ ಅದನ್ನು ಸರ್ವನಾಮಗಳ ಪ್ರಯೋಗವನ್ನು ತಿಳಿಯಿಸಿ ಕೊಡುವದಕ್ಕಾಗಿ ಮತ್ತೆ ತೆಗೆದುಕೊಂಡಿರುತ್ತೇವೆ.

कः (ಪುಲ್ಲಿಂಗ), का (ಸ್ತ್ರೀ), किम् (ನಪುಂ.) ಈ ಸರ್ವನಾಮರೂಪಗಳು ಪ್ರಶ್ನೆಯನ್ನು ಕೇಳುವದಕ್ಕೆ ಉಪಯುಕ್ತವಾಗುವದರಿಂದ ಅವನ್ನು **ಪ್ರಶ್ನಾರ್ಥಕ ಸರ್ವನಾಮ** (Interrogative Pronouns) ಗಳೆಂದು ಕರೆಯಬಹುದು. ಇವುಗಳನ್ನು ಸ್ವತಂತ್ರವಾಗಿಯೂ ವಿಶೇಷಣಗಳಾಗಿಯೂ ಪ್ರಯೋಗಿಸಬಹುದು. ಹೇಗೆಂದರೆ :

१. क एवं वदति ? - ಯಾವನು ಹೀಗೆನ್ನುತ್ತಾನೆ ? २. को वा विवेकी एवं वदिष्यति ? - ಯಾವ ವಿವೇಕಿಯು ತಾನೆ ಹೀಗೆಂದಾನು ? ३. का सा ? - ಆಕೆ ಯಾರು ? ४. का बाला अत्राऽऽगता ? - ಯಾವ ಹುಡುಗಿ ಇಲ್ಲಿಗೆ ಬಂದಳು ? ५. किं वाञ्छसि ? - ಏನನ್ನು ಇಚ್ಛಿಸುತ್ತೀಯೆ ? (= ಏನು ಬೇಕು ?) ६. पापस्य किं फलं भवति ? -

ಹೀಗೆಯೇ किम् ಶಬ್ದದ ಎಲ್ಲಾ ಲಿಂಗಗಳ ಎಲ್ಲಾ ವಿಭಕ್ತಿಗಳ ರೂಪಗಳನ್ನೂ ವಿಶೇಷ್ಯವಾಗಿಯೂ ವಿಶೇಷಣವಾಗಿಯೂ ಬಳಸಬಹುದು.

## ಅಭ್ಯಾಸ ೬೩

ಈ ಪ್ರಶ್ನೆಗಳನ್ನೂ ಉತ್ತರಗಳನ್ನೂ ಕನ್ನಡಿಸಿ :

१. पञ्चमहाभूतानि कस्मात्[1] जायन्ते ? तानि परमेश्वरादेव जायन्ते । २. महाभूतानि कानि ? पृथिवी, जलम्, अग्निः, वायुः, आकाशश्च - इतीमानि (ಎಂಬಿವು) महाभूतानि । ३. देवाः, पितरः, ऋषयः, मनुष्याश्च कस्मात् जायन्ते ? ते सर्वे परमेश्वरादेव जायन्ते । ४. इतरे जन्तवः कस्मात् उत्पद्यन्ते ? तेऽपि परमेश्वरादेव उत्पद्यन्ते । ५. जगत् सर्वं कस्य वशे वर्तते ? परमेश्वरस्यैव वशे (ಪರಮೇಶ್ವರನದೇ ವಶದಲ್ಲಿ[2] = ಪರಮೇಶ್ವರನ ವಶದಲ್ಲಿಯೇ) । ६. को देवादीनां रक्षकः ? परमेश्वर एव तेषां रक्षकः । ७. जीवेभ्यः परमेश्वरः किं किं यच्छति ? तान् शरीरेण, इन्द्रियैश्च अनुगृह्णाति ; तेषां भोगार्थं विविधान् पदार्थान् सृजति । तेभ्यो बुद्धिर्बलं सुखं च यच्छति ॥

---

1. ಯಾವದರಿಂದ ಹುಟ್ಟುವದೆಂದು ಹೇಳುವೆವೋ ಅದರ ಹೆಸರು ಸಂಸ್ಕೃತದಲ್ಲಿ ಪಂಚಮೀವಿಭಕ್ತಿಯಲ್ಲಿರಬೇಕು.

2. 'ಈಶ್ವರನದೇ' ವಶದಲ್ಲಿ ಎಂಬ ಅವಧಾರಣೆ ಬೇಕಿರುವದರಿಂದ 'ಪರಮೇಶ್ವರಸ್ಯೈವ' ಎಂದು ಹೇಳುವದೇ ಯುಕ್ತ ; ಆದರೂ ಹೊಸಕನ್ನಡದಲ್ಲಿ ಷಷ್ಠೀವಿಭಕ್ತಿಗೆ ಅವಧಾರಣಾರ್ಥಕಾವ್ಯಯವನ್ನು ಜೋಡಿಸುವ ರೂಢಿಯು ಇಲ್ಲವಾಗಿಬಿಟ್ಟಿದೆ.

## ಅಭ್ಯಾಸ ೭೪

ಇಲ್ಲಿ ಕಂಸದಲ್ಲಿಟ್ಟಿರುವ ಶಬ್ದಗಳ ಯೋಗ್ಯವಿಭಕ್ತಿರೂಪಗಳನ್ನು ಹಾಕಿ ವಾಕ್ಯಗಳನ್ನು ಪೂರ್ಣಮಾಡಿ :

**१. (किम्) सरोवरे जलं नास्ति ? २. केभ्यः (ब्राह्मण) दक्षिणां यच्छसि ? ३. (किम्) भार्यायां भरतो जातः ? ४. (किम्) प्रयोजनाय तत्र गच्छथ ? ५. केषु केषु (ग्राम) जना इदानीं शीतज्वरेण दुःखम् अनुभवन्ति ? ६. कस्मिन् वने (किम्) वृक्षा रोहन्ति ? ७. (किम्) हेतोः कमलानि इदानीं सङ्कुचन्ति ?**

೯೩. ಎದುರಿಗಿರುವ ವಸ್ತುವನ್ನಾಗಲಿ ಮನುಷ್ಯರನ್ನಾಗಲಿ ಕುರಿತು ಪ್ರಶ್ನೆ ಮಾಡುವಾಗ ಗಂಡಸು ಎಂದು ಗೊತ್ತಾಗಿದ್ದರೆ '**कः**' ಎಂದೂ, ಹೆಂಗಸು ಎಂದು ಗೊತ್ತಾಗಿದ್ದರೆ '**का**' ಎಂದೂ ಪ್ರಶ್ನೆಮಾಡಬೇಕು. ಪದಾರ್ಥಗಳ ಹೆಸರು ಪುಲ್ಲಿಂಗವಾಗಿರುವ ವಿಶೇಷ್ಯವಾಗಿದ್ದರೆ '**कः**', ಸ್ತ್ರೀಲಿಂಗವಾಗಿದ್ದರೆ **का** ಎಂದೇ ಕೇಳಬೇಕು. ಹೆಸರಿಲ್ಲದೆ ಸ್ವತಂತ್ರವಾಗಿಯೇ 'ಏನು' ? ಎಂದು ಕೇಳಬೇಕಾದರೆ **किम्** ? ಎಂದು ನಪುಂಸಕಲಿಂಗದಲ್ಲಿಯೇ ಕೇಳಬೇಕು. ಉತ್ತರದ ವಾಕ್ಯದಲ್ಲಿ ವಿಶೇಷ್ಯಪದಾರ್ಥದ ಹೆಸರು ಸಂದರ್ಭಕ್ಕೆ ತಕ್ಕಂತೆ ಆಯಾ ಲಿಂಗದಲ್ಲಿರುತ್ತದೆ. ಉದಾಹರಣೆಗೆ :

१. कोऽयम् ? - ಇವನು ಯಾರು ? केयम् ? (= का इयम्) - ಇವಳು ಯಾರು ?

२. कोऽयं वृक्षः ? - ಈ ಮರವು ಯಾವ (ಮರ) ? केयं नदी ? - ಇದು ಯಾವ ನದಿ ? किं फलमिदम् ? - ಇದು ಯಾವ ಹಣ್ಣು ? किमिदं सत्त्वम् ? - ಈ ಪ್ರಾಣಿ ಯಾವದು ?

३. किमिदम् ? - ಇದೇನು ? (ಉತ್ತರ) : इयम् अस्माकं पाठशाला ; इदम् अन्नसत्रम् ; इयं मम पुस्तिका ; अयं निम्बवृक्षः ॥

೯೪. किम् ಶಬ್ದದಿಂದ कतर, कतम ಎಂಬ ಎರಡು **ಪ್ರಶ್ನಾರ್ಥಕಸರ್ವ**

ನಾಮಗಳು ವ್ಯುತ್ಪನ್ನವಾಗಿವೆ. ಅವುಗಳ ಪ್ರಯೋಗಕ್ರಮವನ್ನು ಈ ಕೆಳಗಿನ ವಾಕ್ಯಗಳ ಉದಾಹರಣೆಯಿಂದ ತಿಳಿದುಕೊಳ್ಳಬೇಕು :

१. **कतरोऽत्र रामः** - ಇಲ್ಲಿರುವ ಇಬ್ಬರಲ್ಲಿ ಯಾವನು ರಾಮನು ?

२. **कतमोऽत्र पञ्चसु युधिष्ठिरः** - ಈ ಐವರಲ್ಲಿ ಯಾವನು ಯುಧಿಷ್ಠಿರನು ?

३. **कति रुद्राः** - (ಎಷ್ಟು ಮಂದಿ ರುದ್ರರು) ? **एकादश रुद्राः । कतमे ते ?** - ಹನ್ನೊಂದು ಮಂದಿ ರುದ್ರರು. ಅವರು ಯಾರು ಯಾರು ?

೯೫. ಯಾವದು, ಯಾವನು (Which) ? ಎಂಬರ್ಥದಲ್ಲಿ **किम्** ಶಬ್ದವನ್ನೂ **कतर, कतम** ಶಬ್ದಗಳನ್ನೂ ಉಪಯೋಗಿಸಿದಾಗ ಎದುರಿಗಿರುವ ವಸ್ತುವನ್ನು ತೋರಿಸುವದಕ್ಕೆ ಉಪಯೋಗಿಸುವ ಸರ್ವನಾಮಗಳನ್ನು **ನಿರ್ದೇಶಕ ಸರ್ವನಾಮಗಳು** (Demonstrative Pronouns) ಎಂದು ಕರೆಯಬಹುದು. ಅವುಗಳಲ್ಲಿ **ಸಾಮಾನ್ಯ ನಿರ್ದೇಶಕ ಸರ್ವನಾಮಗಳೆಂದೂ, ವಿಶೇಷನಿರ್ದೇಶಕ ಸರ್ವನಾಮಗಳೆಂದೂ** ಎರಡು ಪಂಗಡವಾಗಿ ವಿಂಗಡಿಸುವದಕ್ಕೆ ಬರುತ್ತದೆ. ಉದಾಹರಣೆಗೆ :

(೧) **कोऽयम् ?** ಇಲ್ಲಿ अयम् - ಇವನು ಎಂಬುದು ಎದುರಿಗಿರುವ ಗೊತ್ತಾದ ಮನುಷ್ಯನನ್ನು ಹೇಳುತ್ತದೆ. ಆದ್ದರಿಂದ ವಿಶೇಷನಿರ್ದೇಶಕ.

(೨) **कस्मिंश्चिद् ग्रामे काऽपि ब्राह्मणी अवर्तत** - ಇಲ್ಲಿ कस्मिंश्चिद् (ಒಂದಾನೊಂದು) **काऽपि** (ಒಬ್ಬಾನೊಬ್ಬಳು) ಎಂಬಿವು ಇಂಥದ್ದೆಂದು ಗೊತ್ತು ಮಾಡಿಹೇಳುವದಿಲ್ಲ. ಆದ್ದರಿಂದ ಸಾಮಾನ್ಯನಿರ್ದೇಶಕಗಳಿವು.

(೩) **इयम् अस्माकं विद्याशाला । तस्यां वयं संस्कृतं शिक्षामहे ॥** ಇಲ್ಲಿ **इयम्** ಎಂಬುದು ಗೊತ್ತಾಗಿ ಎದುರಿಗಿರುವ ವಿದ್ಯಾಶಾಲೆಯನ್ನೇ ತೋರಿಸುತ್ತದೆ. ಆದ್ದರಿಂದ ವಿಶೇಷನಿರ್ದೇಶಕವೇ.

**किम्** ಶಬ್ದಕ್ಕೆ **चित्, चन, अपि** - ಇವುಗಳನ್ನು ಸೇರಿಸಿದರೆ ಸಾಮಾನ್ಯ ನಿರ್ದೇಶಕಸರ್ವನಾಮಗಳಾಗುವವು. ಇವಕ್ಕೆ **किम्** ಶಬ್ದದ ರೂಪಗಳಂತೆಯೇ **(चित्, चन)** ಸೇರಿಸಿ ನಡೆಯಿಸಿಕೊಳ್ಳಬೇಕು. ಉದಾ :

कश्चित् कश्चन कोऽपि । कौचित् कौचन कावपि । केचित् केचन केऽपि ।। ಹೀಗೆಯೇ ಮಿಕ್ಕ ವಿಭಕ್ತಿಗಳಿಗೂ ತಿಳಿಯಬೇಕು.

एकः ಶಬ್ದವನ್ನೂ ಹೀಗೆಯೇ ಸಾಮಾನ್ಯನಿರ್ದೇಶಕವಾಗಿ ಉಪಯೋಗಿಸಬಹುದು. ಉದಾ : एकस्मिन् ग्रामे काचन वृद्धा आसीत् । तस्या वशे एका हसन्ती (ಕುಮಟಿ) आसीत् ।। ಇಲ್ಲಿ एकस्मिन् = कस्मिंश्चित्, कस्मिंश्चन ; एका = काचित्, काचन । ಹೀಗೆಯೇ एके (= केचित्), अपरे, अन्ये (ಇನ್ನು ಕೆಲವರು) ಎಂಬಿವುಗಳನ್ನೂ[1] ತಿಳಿಯಬೇಕು. ಇವುಗಳ ವಿಚಾರವನ್ನು ಒಂದನೆಯ ಪುಸ್ತಕ (ಪಾ. ೩೮)ದಲ್ಲಿಯೇ ಕೊಡಲಾಗಿದೆ.

ಈ ಸರ್ವನಾಮಗಳನ್ನು ವಿಶೇಷಣವಾಗಿಯೂ ಉಪಯೋಗಿಸಬಹುದು. ಉದಾ : कश्चिद् ब्राह्मणः स्वस्य सुतायाः विवाहार्थं धनमिच्छन् पत्तनं गतः । ಒಬ್ಬಾನೊಬ್ಬ ಬ್ರಾಹ್ಮಣನು ತನ್ನ ಮಗಳ ಮದುವೆಗಾಗಿ ಹಣವನ್ನು ಬಯಸಿ ಪಟ್ಟಣಕ್ಕೆ ಹೋದನು.

## ಅಭ್ಯಾಸ ೬೫

ಈ ವಾಕ್ಯಗಳನ್ನು ಕನ್ನಡಿಸಿರಿ :

**१. अत्र केचित् एवं वदन्ति । २. इदं केनचित् दुष्टेन कृतम् । ३. कासुचित् पाठशालासु आङ्ग्लभाषामिव संस्कृतमपि शिक्षयन्ते । ४. देह एव आत्मा, नास्त्यन्यः इति केचित् प्रवदन्ति । ५. अस्ति देहात्, इन्द्रियेभ्यश्च व्यतिरिक्तः (ಬೇರೆ) इति अपरे मन्यन्ते । ६. कस्याञ्चिद् नद्यां एको ग्राह (ಮೊಸಳೆ) आसीत् । ७. तस्य वृक्षस्य कोटरे (ಪೊಟ್ಟರೆಯಲ್ಲಿ) कश्चन गृध्रः प्रतिवसति स्म । ८. इमं कङ्कणं (ಕಡಗ) कस्मैचिद् ब्राह्मणाया यच्छामि । ९. कोऽपि विदेशीयः ग्रामे अस्ति ।।**

---

1. ಈ ಸರ್ವನಾಮಗಳನ್ನೆಲ್ಲ ಏಕ, ಸರ್ವ - ಈ ಶಬ್ದಗಳಂತೆಯೇ (೧ನೆಯ ಭಾಗ, ಪಾ. ೪೬) ನಡೆಯಿಸಬೇಕು.

೯೬. ವಿಶೇಷನಿರ್ದೇಶಕಸರ್ವನಾಮಗಳು **अदस्** (ಅದು, ಇದು), **इदम्** (ಇದು), **एतद्** (ಇದು) ಎಂಬಿವುಗಳು. ಇವುಗಳಿಗೆ ಮೂರು ಲಿಂಗಗಳಲ್ಲೂ ಬೇರೆಬೇರೆಯ ರೂಪಗಳಿವೆ :

| ಪುಲ್ಲಿಂಗ | | | ಸ್ತ್ರೀಲಿಂಗ | | |
|---|---|---|---|---|---|
| असौ | अमू | अमी | असौ | अमू | अमूः |
| अमुम् | ,, | अमून् | अमुम् | ,, | ,, |
| अमुना | अमीभ्याम् | अमीभिः | अमुया | अमूभ्याम् | अमूभिः |
| अमुष्मै | ,, | अमीभ्यः | अमुष्यै | ,, | अमूभ्यः |
| अमुष्मात् | ,, | ,, | अमुष्याः | ,, | ,, |
| अमुष्य | अमुयोः | अमीषाम् | ,, | अमुयोः | अमूषाम् |
| अमुष्मिन् | ,, | अमीषु | अमुष्याम् | ,, | अमूषु |

**ವಿಶೇಷ** : ಪುಲ್ಲಿಂಗಕ್ಕೆ ದ್ವಿತೀಯಾವಿಭಕ್ತಿ (ಅಮುನಾ - ಹೊರತು) **ಅಮೀಭಿಃ, ಅಮೀಭ್ಯಃ** ಎಂದುಮುಂತಾಗಿ ಈಕಾರಾಂತನಾಮದಂತೆ ರೂಪಗಳಿವೆ.

೯೭. ವಿಶೇಷನಿರ್ದೇಶಕಸರ್ವನಾಮಗಳು ದೂರ ಅಥವಾ ಹತ್ತಿರವಿರುವ ವಸ್ತುವನ್ನು ಅಥವಾ ಮನುಷ್ಯನನ್ನು ತೋರಿಸುವದರಿಂದ ಸಂದರ್ಭಕ್ಕೆ ಬೇಕಾದಂತೆ ಅವನ್ನು ಆರಿಸಿಕೊಳ್ಳಬೇಕು. ಉದಾ :

**१. युष्माकं मध्ये को (कतमो) गीर्वाणभाषां बोधति ? असौ सम्यग् जानाति ; अयम् ईषत् (ಸ್ವಲ್ಪ) भाषितुं शक्तः ; एतस्य तु भाषायां प्रवेश एव नास्ति ।।**

**ವಿಶೇಷ** : ಕನ್ನಡದಲ್ಲಿ ದೂರದಲ್ಲಿರುವದನ್ನು ತೋರಿಸುವದಕ್ಕೆ ಅವನು, ಅವಳು, ಅದು - ಎಂಬ ಶಬ್ದಗಳನ್ನೂ, ಹತ್ತಿರದಲ್ಲಿರುವದಕ್ಕೆ ಇವನು, ಇವಳು, ಇದು - ಎಂಬಿವುಗಳನ್ನೂ ಬಳಸುವರು. (ಇಂಗ್ಲೀಷ್‌ನಲ್ಲಿ That ಅದು, This ಇದು ಎಂಬ ಶಬ್ದಗಳನ್ನು ಬಳಸುತ್ತಾರೆ.) ಆದರೆ ಸಂಸ್ಕೃತದಲ್ಲಿ ನಿಯಮವೇನೆಂದರೆ :

इदमस्तु संनिकृष्टं समीपतरवर्ति चैतदो रूपम् ।
अदसस्तु विप्रकृष्टं तदिति परोक्षे विजानीयात् ।।

**इदम्** ಶಬ್ದವು ಹತ್ತಿರವಿರುವದನ್ನು (ಇದು, ಇವನು, ಇವಳು ಎಂದು)

ತೋರಿಸಿ ಹೇಳುತ್ತದೆ. **एतत्** ಶಬ್ದವು ಇನ್ನೂ ಹತ್ತಿರವಿದ್ದರೆ 'ಇಗೊ ಇಲ್ಲಿ, ಇನ್ನೂ ಹತ್ತಿರವಿರುವದು' - ಎಂದು ಹೇಳುವದು. **अदस्** (ಅದು) ಎಂಬುದು ದೂರದಲ್ಲಿರುವ ವಸ್ತುವನ್ನೂ, **तत्** (it) ಶಬ್ದವು ಪರೋಕ್ಷದಲ್ಲಿರುವದನ್ನೂ (ಎದುರಿಗಿಲ್ಲದ್ದನ್ನೂ) ಹೇಳುತ್ತವೆ.

(२) अनयोः को (= कतरो) लवः ? कः कुशः ? अयं लवः, एष कुशः ॥ ಇವರಿಬ್ಬರಲ್ಲಿ ಲವನು ಯಾರು, ಕುಶನು ಯಾರು ? ಇವನು ಲವನು, ಅಗೊ, ಅವನು ಕುಶನು.

(३) ತೋರಿಸಿ ಹೇಳದೆ ಇರುವಾಗ असौ वानरः, अयं वानरः, एष वानरः - ಇವೆಲ್ಲಕ್ಕೂ 'ಇದು' ಎಂದೇ ಅರ್ಥಮಾಡುವದು ಹೆಚ್ಚು ಒಪ್ಪುತ್ತದೆ.

೯೮. **इदम्, एतत्** - ಈ ಶಬ್ದಗಳಿಗೆ ರೂಪಗಳನ್ನು ಒಂದನೆಯ ಭಾಗದಲ್ಲಿಯೇ ಅಲ್ಲಲ್ಲಿ ಕೊಟ್ಟಿರುತ್ತದೆಯಾದರೂ ಸೌಕರ್ಯಕ್ಕಾಗಿ ಇಲ್ಲಿ ಒಕ್ಕಡೆಯಲ್ಲಿ ಪೂರ್ಣವಾಗಿ ಸಂಗ್ರಹಿಸಲಾಗಿದೆ. ಮೊದಲು **इदम्** ಶಬ್ದದ ರೂಪಗಳನ್ನು ನೋಡಿರಿ :

**१. इदम्**

| ಪುಲ್ಲಿಂಗ | | | ಸ್ತ್ರೀಲಿಂಗ | | |
|---|---|---|---|---|---|
| १. अयम् | इमौ | इमे | १. इयम् | इमे | इमाः |
| २. इमम्<br>एनम् | इमौ<br>एनौ | इमान्<br>एनान् | २. इमाम्<br>एनाम् | इमे<br>एने | इमाः<br>एनाः |
| ३. अनेन<br>एनेन | आभ्याम् | एभिः | ३. अनया<br>एनया | आभ्याम् | आभिः |
| ४. अस्मै | ,, | एभ्यः | ४. अस्यै | ,, | आभ्यः |
| ५. अस्मात् | ,, | ,, | ५. अस्याः | ,, | ,, |
| ६. अस्य | अनयोः<br>एनयोः | एषाम् | ६. ,, | अनयोः<br>एनयोः | आसाम् |
| ७. अस्मिन् | ,, | एषु | ७. अस्याम् | ,, | आसु |

ನಪುಂಸಕ : १. इदम् इमे इमानि । २. इदम्-एनम् इमे-एने इमानि-एनानि ।
ಮಿಕ್ಕದ್ದು ಪುಲ್ಲಿಂಗದಂತೆ.

२. तत्, ३. एतत्

| तत् ಪುಲ್ಲಿಂಗ | | | एतत् ಪುಲ್ಲಿಂಗ | | |
|---|---|---|---|---|---|
| १. सः | तौ | ते | एषः | एतौ | एते |
| २. तम् | ,, | तान् | एतम् / एनम् | एतौ / एनौ | एतान् / एनान् |
| ३. तेन | ताभ्याम् | तैः | एतेन / एनेन | एताभ्याम् | एतैः |
| ४. तस्मै | ,, | तेभ्यः | एतस्मै | ,, | एतेभ्यः |
| ५. तस्मात् | ,, | ,, | एतस्मात् | ,, | ,, |
| ६. तस्य | तयोः | तेषाम् | एतस्य | एतयोः / एनयोः | एतेषाम् |
| ७. तस्मिन् | ,, | तेषु | एतस्मिन् | ,, | एतेषु |

ವಿಶೇಷ : ಪುಲ್ಲಿಂಗದ ತತ್ ಶಬ್ದದ ರೂಪಗಳಿಗೆ ಆದಿಯಲ್ಲಿ ಏ ಸೇರಿಸಿದರೆ ಏತತ್ ಶಬ್ದದ ರೂಪಗಳು. ಆದರೆ ದ್ವಿತೀಯಾ, ತೃತೀಯಾ ಏಕವಚನದಲ್ಲಿಯೂ, ದ್ವಿತೀಯಾ, ಷಷ್ಠೀ, ಸಪ್ತಮೀದ್ವಿವಚನಗಳಲ್ಲಿಯೂ, ದ್ವಿತೀಯಾಬಹುವಚನದಲ್ಲಿಯೂ ಏತತ್ ಶಬ್ದಕ್ಕೆ ಹೆಚ್ಚಿಗೆಯ ರೂಪಗಳೂ ಇವೆ.

ನಪುಂಸಕ : १, २. तत् ते तानि ॥ १. एतत् एते एतानि । २. एतत्-एनत् एते-एने एतानि-एनानि ॥

೯೯. इदम् ಶಬ್ದಕ್ಕೂ एतत् ಶಬ್ದಕ್ಕೂ ಆಯಾ ವಿಭಕ್ತಿಗಳಲ್ಲಿ ಕೊಟ್ಟಿರುವ ಎರಡನೆಯ ರೂಪವನ್ನು ಅನ್ವಾದೇಶದಲ್ಲಿ, ಎಂದರೆ ಮತ್ತೆ ಅದೇ ವಸ್ತುವನ್ನು ಪರಾಮರ್ಶೆಮಾಡುವಾಗ, ಉಪಯೋಗಿಸುವರು. ಉದಾ :

१. अनेन व्याकरणम् अधीतम्, एनम् तर्कशास्त्रम् अध्यापय ।

(ಇವನು ವ್ಯಾಕರಣವನ್ನು ಕಲಿತಿದ್ದಾನೆ, ಇವನಿಗೆ ತರ್ಕಶಾಸ್ತ್ರವನ್ನು ಹೇಳಿಕೊಡು.)

२. इमां कन्यां तुभ्यं दास्यामि, एनां धर्मेण परिपालय ।

(ಈ ಕನ್ಯೆಯನ್ನು ನಿನಗೆ ಕೊಡುವೆನು, ಈಕೆಯನ್ನು ಧರ್ಮದಿಂದ ಕಾಪಾಡಿಕೊ.)

३. एतानि पुस्तकानि इदानीं दुर्लभानि, एनानि जागरूकतया रक्ष ।

(ಈ ಪುಸ್ತಕಗಳು ಈಗ ಸಿಕ್ಕುವದಿಲ್ಲ ; ಇವನ್ನು ಎಚ್ಚರಿಕೆಯಿಂದ ಕಾಪಾಡಿಕೊ.)

೧೦೦. तत् ಶಬ್ದವನ್ನು ಪರೋಕ್ಷದಲ್ಲಿರುವ ವಸ್ತುಗಳಿಗೇ ಅಲ್ಲದೆ ಪ್ರಕೃತದಲ್ಲಿ ಹಿಂದೆ ಹೇಳಿರುವ, ಅಥವಾ ಸುಪ್ರಸಿದ್ಧವಾಗಿರುವ ವಸ್ತುವನ್ನು ಪರಾಮರ್ಶಿಸುವದಕ್ಕೆ ಬಳಸುವರು. ಬುದ್ಧಿಯಲ್ಲಿದ್ದು ಮುಂದೆ ಹೇಳುವ ವಸ್ತುಗಳನ್ನು ಹೇಳುವದಕ್ಕೂ इदम्, एतत्, तत् ಶಬ್ದಗಳನ್ನು ಬಳಸಬಹುದು.

## ಅಭ್ಯಾಸ ೬೬

ಇಲ್ಲಿರುವ ವಾಕ್ಯಗಳನ್ನು ಕನ್ನಡಿಸಿ ; ಸರ್ವನಾಮಗಳು ಏನನ್ನು ಪರಾಮರ್ಶಿಸುತ್ತವೆ ? ಅವು ಯಾವವು ? ಅವುಗಳ ಅರ್ಥವಿಶೇಷವೇನಾದರೂ ಇದ್ದರೆ ತಿಳಿಸಿ :

१. का इमा नार्यः ? ता दशरथस्य भार्याः । असौ कौसल्या, इयं सुमित्रा, एषा कैकेयी । २. मणिना भूषितः सर्पः, किमसौ न भयङ्करः ? ३. स एवायं देवदत्तः । ४. असौ जम्बीरवृक्षः । ५. कृष्ण, इमं स्वजनं पश्यतो मम गात्राणि (ಅವಯವಗಳು) सीदन्ति (ಕುಸಿಯುತ್ತಿವೆ) । ६. ते (ಅಂಥ) वयं कुत्र गच्छामः ? ७. काऽसौ तव निकटे ? ८. एषा मे पत्नी, इमां मातृगृहं नयामि । ९. कतमे ते वेदाः ? ऋग्वेदः, यजुर्वेदः, सामवेदः, अथर्ववेदश्च - इति त इमे वेदाः । १०. कोऽसौ प्राणी ? ११. अस्त्येतत् (ಇದು ಉಂಟು, ನಿಜ), तथापि ममाभिप्रायं वदामि । १२. अयं मणिर्न मह्यं[1] रोचते । १३. कथमम्ं नदीं तरामः ?

---

1. ಯಾರಿಗೆ ರುಚಿಸುವದೋ, ಒಪ್ಪಾಗಿದೆಯೋ, ಅವರ ಹೆಸರು ಚತುರ್ಥೀವಿಭಕ್ತಿಯಲ್ಲಿರಬೇಕು.

# ೧೭. ಕೆಲವು ವ್ಯಂಜನಸಂಧಿಗಳು

೧೦೧. ಸಂಧಿಯು ಪ್ರಕೃತಿಪ್ರತ್ಯಯಗಳಿಗೂ, ಧಾತೂಪಸರ್ಗಗಳಿಗೂ ಸಮಾಸದಲ್ಲಿಯೂ ನಿತ್ಯವಾಗಿ ಆಗಬೇಕು - ಎಂದು ಹಿಂದೆ (ಪು. ೨೯) ಹೇಳಿದ್ದೆವಷ್ಟೆ? ವಾಕ್ಯದಲ್ಲಿ ವಿವಕ್ಷೆಯಿಂದ ಎಂದರೆ ಮಾತಾಡುವವನ ಅಭಿಪ್ರಾಯಕ್ಕೆ ತಕ್ಕಂತೆ ಸಂಧಿಯನ್ನು ಬಿಡಿಸಿಯೂ ಹೇಳಬಹುದು. ಹೇಗೆಂದರೆ :

**तत्क्षणात् काकः काकी च तदाकर्ण्यात्मेच्छयोत्पतितौ ॥**

(ಆ ಕ್ಷಣದಲ್ಲಿ ಗಂಡುಕಾಗೆಯೂ ಹೆಣ್ಣುಕಾಗೆಯೂ ಅದನ್ನು ಕೇಳಿ ತಮ್ಮ ಇಚ್ಛೆಯಂತೆ ಹಾರಿಬಿಟ್ಟವು.)

ಇಲ್ಲಿ "तत्क्षणात् काकः काकी च तदाकर्ण्य आत्मेच्छया उत्पतितौ" ಎಂದು ಬಿಡಿಸಿ ಹೇಳಬಹುದು. ಅದರಿಂದ ಅಭಿಪ್ರಾಯವು ಸ್ಫುಟತರವಾಗಿ ಗೊತ್ತಾಗುತ್ತದೆ.

ಸಂಧಿನಿಯಮ : 'ತತ್ ಆಕರ್ಣ್ಯ' ಎಂದು ಬಿಡಿಸಬಹುದಾದರೂ ಅದು ಓದುವದಕ್ಕೆ ಅಥವಾ ಕೇಳುವದಕ್ಕೆ ಅಷ್ಟು ಹಿತವಲ್ಲ. 'ಏವಮಪಿ', 'ತಥೈವ', 'ಭಾಸುರಕೋನಾಮ', 'ಚಿನ್ತಯತಸ್ತಸ್ಯ' - ಇಂಥ ಕಡೆಗಳಲ್ಲಿ ಒಟ್ಟಿಗೆ ಉಚ್ಚರಿಸಬೇಕಾಗಿರುವ ಪದಗಳನ್ನು ಜೋಡಿಸಿಯೇ ಬರೆಯಬೇಕು.

## ಅಭ್ಯಾಸ ೬೭

ಇಲ್ಲಿ ಸಂಧಿಗಳನ್ನು ಬಿಡಿಸಿ ತೋರಿಸಿರುವ ಕಡೆಗಳಲ್ಲಿ ಆಗಿರುವ ಸಂಧಿಕಾರ್ಯವೇನು ? ವಾಕ್ಯಗಳನ್ನು ಕನ್ನಡಿಸಿರಿ :

**१. (सम्यक् न =) सम्यङ्न सञ्जातम्** ಸರಿಯಾಗಿ ಆಗಲಿಲ್ಲ **। २. (मनाक् मन्यन्ते =) मनाङ्मन्यन्ते सभ्याः** (ಸಭಿಕರು ಒಂದಿಷ್ಟು ಆಲೋಚನೆಮಾಡುತ್ತಾರೆ) **३. (षट् मनुष्याः =) षण्मनुष्याः सन्ति । ४. (षट् न =) षण्न सन्ति, ननु पञ्चैव तत्र दृश्यन्ते । ५. (तत् नित्यम् =) तन्नित्यम् ; न हि वस्तुनि 'एवं नैवम्' इति विकल्पः संभवति । ६. (तत् मे =) तन्मे भवति** (ಅದು ನನಗೆ ಆಗುತ್ತದೆ) **। (ककुप् न =) ककुम्न शुभोऽयम्** (ಈ ದಿಕ್ಕು ಒಳ್ಳೆಯದಲ್ಲ) **॥**

ಸಂಧಿನಿಯಮ : ವರ್ಗೀಯವ್ಯಂಜನಗಳಿಗೆ ಅನುನಾಸಿಕಾಕ್ಷರವು ಪರವಾದಾಗ ಆಯಾ

ವರ್ಗದ ಅನುನಾಸಿಕವರ್ಣಗಳು (ಙ, ಞ, ಣ, ನ, ಮ) ಆದೇಶವಾಗಿ ಬರುವವು. ('ಸಮ್ಯಗ್ಗ್ನ, ಮನಾಗ್ಮನ್ಯನ್ತೇ' ಎಂದು ವರ್ಗದ ತೃತೀಯಾಕ್ಷರವೂ ಬರುವದುಂಟು ; ಅನುನಾಸಿಕವರ್ಣವನ್ನುಪಯೋಗಿಸುವದೇ ಹೆಚ್ಚು ವಾಡಿಕೆ.)

೧೦೨. ಈ ವಾಕ್ಯಗಳಲ್ಲಿ ಆಗಿರುವ ಸಂಧಿಕಾರ್ಯಗಳನ್ನು ಲಕ್ಷಿಸಿರಿ :

१. (तत् लीयते =) **तल्लीयते कुत्रापि** । ಅದು ಎಲ್ಲಿಯೋ ಅಡಗಿ ಹೋಗುತ್ತದೆ.

२. (पुण्यान् लोकान् =) **पुण्याँल्लोकान् गच्छति** । ಒಳ್ಳೆಯ ಲೋಕಗಳಿಗೆ ಹೋಗುತ್ತಾನೆ.

ಸಂಧಿನಿಯಮ : ತವರ್ಗದ ಅಕ್ಷರಗಳಿಗೆ ಮುಂದೆ ಲಕಾರವಿದ್ದರೆ ಹಿಂದಿನ ಅಕ್ಷರಕ್ಕೆ ಲಕಾರವು ಬರುತ್ತದೆ ; ಈ ಸಂದರ್ಭದಲ್ಲಿ ನಕಾರದ ಮುಂದೆ ಲಕಾರವಿದ್ದರೆ ಅದಕ್ಕೆ ಅನುನಾಸಿಕ ಲಕಾರವು ಬರುವದು.

೧೦೩. ಈ ವಾಕ್ಯಗಳಲ್ಲಿ ಆಗಿರುವ ಸಂಧಿಕಾರ್ಯಗಳನ್ನು ಲಕ್ಷಿಸಿರಿ. ವಾಕ್ಯಗಳನ್ನು ಕನ್ನಡಿಸಿಧಿ :

१. (तत् चित्रम् =) **तच्चित्रं सुन्दरम्** । २. (सत् छत्रम् =) **सच्छत्रम्** (ಒಳ್ಳೆಯ ಕೊಡೆ ; ಕೊಡೆ ಒಳ್ಳೆಯದು) । ३. (तत् टङ्कं =) **तट्टङ्कं** (ಉಳಿ) **कुत्रापि रक्षति तक्षकः** (ಬಡಗಿ) । ४. (हसन् जनो =) **हसञ्जनो विलपन् म्रियते** । ५. (जाग्रत् ठक्कुरः =) **जाग्रट्ठक्कुरः** (ಎಚ್ಚತ್ತಿರುವ ಠಾಕೂರನು) **पश्यति प्रविशन्तं चोरम्** । ६. **स बालकः तदा** (अपठत् श्लोकम् =) **अपठच्छ्लोकम् एकम्** ॥

ಸಂಧಿನಿಯಮ : ತವರ್ಗದ ವ್ಯಂಜನಗಳು ಚವರ್ಗದ ವ್ಯಂಜನಗಳೊಡನೆ ಸೇರಿದಾಗ ತವರ್ಗದ ವರ್ಣಕ್ಕೆ ಚವರ್ಗದ (ಅಷ್ಟನೆಯ) ವ್ಯಂಜನವೂ, ಟವರ್ಗದ ವ್ಯಂಜನಗಳು ಪರವಾದಾಗ ತವರ್ಗದ ವರ್ಣಕ್ಕೆ ತಕ್ಕ ಟವರ್ಗದ ವರ್ಣವೂ ಬರುತ್ತದೆ. ವರ್ಗೀಯವ್ಯಂಜನದ ಮುಂದೆ (ಶಕಾರದಮೇಲೆ ಸ್ವರವಾಗಲಿ, ಯರಲವಗಳಾಗಲಿ, ಅನುನಾಸಿಕವಾಗಲಿ, ಇದ್ದರೆ) ಶಕಾರಕ್ಕೆ ಛಕಾರವು ಆದೇಶ.

## ಅಭ್ಯಾಸ ೬೮

ಸಂಧಿಯನ್ನು ಮಾಡಿ ವಾಕ್ಯಗಳನ್ನು ಕನ್ನಡಿಸಿರಿ :

१. **पिटकात्** (ಬುಟ್ಟಿಯಿಂದ) **+ चत्वारि फलानि गृह्णाति** । २. **तस्मात् +**

नित्यमहं गीतां पठामि । ३. तस्मिन् वने षट् + नद्यः प्रवहन्ति । ४. दुर्गात्[1] + शूरा भटा निर्गताः (ಹೊರಟರು) । ५. जीवः शरीरात् + शरीरं गच्छति । ६. रिपून् + जयति राजा । ७. रामः मातुर्गृहात् + लक्ष्मणस्य गृहं गतः । ८. प्रासादात् (ಅರಮನೆಯಿಂದ) + छत्रं पतति । ९. कस्मात् कारणात् + टिप्पणं लिख्यते ? १०. कस्मात् + शैलात् गङ्गा इतः प्रवहति । ११. एतत् + लवणवर्जितम् उपसेचनम् (ಚಟ್ನಿಣಿ) । १२. कस्मात् + ढक्का न वाद्यते ॥

## ೧೮. ಕ್ರಿಯಾಪದದ ಅರ್ಥವಿಶೇಷದ ರೂಪಗಳು

೧೦೪. ಕ್ರಿಯಾಪದಗಳಿಗೆ ಇರುವ ಅರ್ಥವಿಶೇಷದ ರೂಪಗಳನ್ನು ಈ ಕೆಳಗಿನ ವಾಕ್ಯಗಳಲ್ಲಿ ಲಕ್ಷಿಸಿರಿ :

१. (अ) रे, मम पीठम् आनय - ಎಲೊ, ನನ್ನ ಮಣೆಯನ್ನು ತೆಗೆದುಕೊಂಡು ಬಾ.

(आ) चाराः पीठानि आनयन्तु - ಸೇವಕರು ಮಣೆಗಳನ್ನು ತರಲಿ (ಆಜ್ಞಾರ್ಥಕ).

२. (अ) पत्रमेवं लिखेत् - ಕಾಗದವನ್ನು ಹೀಗೆ ಬರೆಯಬೇಕು (ವಿಧ್ಯಾದ್ಯರ್ಥಕ).

(आ) अनृतं न वदेत् - ಸುಳ್ಳನ್ನು ಹೇಳಬಾರದು. (ವಿಧ್ಯಾದ್ಯರ್ಥಕ).

३. (अ) तव पुत्रो मूर्खोऽभविष्यत् - ನಿನ್ನ ಮಗನು ಮೂರ್ಖನಾಗಿ ಬಿಡುತ್ತಿದ್ದನು.

(आ) वृष्टिश्चेत् नाभविष्यत्, दुर्भिक्षमभविष्यत् - ಮಳೆಯಾಗದಿದ್ದರೆ ದುರ್ಭಿಕ್ಷವಾಗಿಬಿಡುತ್ತಿತ್ತು (ಹೇತುಫಲಾರ್ಥಕ).

४. (अ) देवो नः पायात् - ದೇವರು ನಮ್ಮನ್ನು ಕಾಪಾಡಲಿ.

(आ) तेजस्वी भूयासम् - (ನಾನು) ತೇಜಸ್ವಿಯಾಗುವಂತಾಗಲಿ ! (ಆಶೀರರ್ಥ).

೧೦೫. ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿರುವ **ಆಜ್ಞಾದ್ಯರ್ಥಕಕ್ರಿಯಾ** ಪದಗಳನ್ನು ಕನ್ನಡಿಸಿರುವ ಬಗೆಯನ್ನು ನೋಡಿರಿ. ಇಲ್ಲಿ ಮೊದಲಿರುವದು ಪರಸ್ಮೈಪದಿ

---

1. ಯಾವದನ್ನು ಬಿಟ್ಟಗಲುತ್ತಾರೋ ಅದರ ಹೆಸರಿಗೆ ಪಂಚಮೀ ವಿಭಕ್ತಿ ಬೇಕು.

ಧಾತುಗಳ ರೂಪಗಳು ; ಕಂಸದಲ್ಲಿಟ್ಟಿರುವವು. ಅದೇ ಅರ್ಥದ ಆತ್ಮನೇಪದಿಧಾತುಗಳ ರೂಪಗಳು.

**१. सत्यं वद (भाषस्व) । २. वृक्षं पश्यतम् (ईक्षेथाम्) । ३. तत्रैव तिष्ठत (वर्तध्वम्) । ४. देवो जयतु (विजयताम्) ५. सुखं गच्छताम् (लभेताम्) । ६. छात्रा प्रतिवदन्तु (प्रतिभाषन्ताम्) । ७. काक आह - अहम् उत्पतानि (उड्डयै) इति । ८. तौ स्वगतम् अचिन्तयताम् - इदं धनम् अपहराव (चोरयावहै) इति । ९. तेन सह मिलाम (सङ्गच्छामहे ) ॥**

೧. ನಿಜವನ್ನು ಹೇಳು. ೨. (ನೀವಿಬ್ಬರೂ) ಮರವನ್ನು ನೋಡಿರಿ. ೩. ಇಲ್ಲಿಯೇ ಇರಿ. ೪. ದೇವನು ಗೆಲ್ಲಲಿ ! ೫. (ಅವರಿಬ್ಬರೂ) ಸುಖವನ್ನು ಹೊಂದಲಿ ! ೬. ಶಿಷ್ಯರುಗಳು ಉತ್ತರಕೊಡಲಿ ! ೭. ಕಾಗೆ ಇಂತೆಂದಿತು : 'ನಾನು ಹಾರುವೆ'. ೮. ಅವರಿಬ್ಬರೂ ತಮ್ಮಲ್ಲಿ ತಾವು ಹೀಗೆ ಯೋಚಿಸಿಕೊಂಡರು : 'ಈ ಧನವನ್ನು ಅಪಹರಿಸೋಣ'. ೯. ಅವನೊಡನೆ (ನಾವು) ಸೇರೋಣ.

೧೦೬. ಸಂಸ್ಕೃತದ **ಆಜ್ಞಾದ್ಯರ್ಥದ** (Imperative) **ಕ್ರಿಯಾಪದಕ್ಕೆ** ಕನ್ನಡದ ಆಜ್ಞಾದ್ಯರ್ಥದ ಕ್ರಿಯಾಪದಕ್ಕಿರುವಂತೆಯೇ ರೂಪಗಳು ಇರುತ್ತವೆ. ಆಜ್ಞಾದ್ಯರ್ಥ ಕ್ರಿಯಾಪದದ ರೂಪಗಳು ಹೀಗಾಗುತ್ತವೆ : ಧಾತು(ವಿಕೃತರೂಪ) + ವಿಕರಣ + ಪ್ರತ್ಯಯ.

ಪರ : तु-तात् ताम् अन्तु । -तात् तम् त । आनि आव आम ॥

ಆತ್ಮ : ताम् इताम् अन्ताम् । स्व इथाम् ध्वम् । ऐ आवहै आमहै ॥

ವಿಶೇಷ : ಆಶೀರರ್ಥದಲ್ಲಿ तात् ಎಂಬ ಪ್ರತ್ಯಯವು ವಿಕಲ್ಪದಿಂದ ಬರುವದು. ವರ್ತಮಾನಕ್ರಿಯೆಗಳಂತೆಯೇ ಇವುಗಳ ಅರ್ಥವನ್ನು ಸಂದರ್ಭಾನುಸಾರವಾಗಿ ತಿಳಿಯಬೇಕಾಗುವದು.

### ಆಜ್ಞಾದ್ಯರ್ಥ, ಪರಸ್ಮೈಪದ

१. पठतु पठताम् पठन्तु । पठ पठतम् पठत । पठानि पठाव पठाम ।

पश्यतु पश्यताम् पश्यन्तु । पश्य पश्यतम् पश्यत । पश्यानि पश्याव पश्याम ।

सरतु सरताम् सरन्तु । सर सरतम् सरत । सरानि सराव सराम ।

४. नृत्यतु नृत्यताम् नृत्यन्तु । नृत्य नृत्यतम् नृत्यत । नृत्यानि नृत्याव नृत्याम ।

६. तुदतु तुदताम् तुदन्तु । तुद तुदतम् तुदत । तुदानि तुदाव तुदाम ।

१०. कथयतु कथयताम् कथयन्तु । कथय कथयतम् कथयत । कथयानि कथयाव कथयाम ।

### ಆತ್ಮನೇಪದ

१. मोदताम् मोदेताम् मोदन्ताम् । मोदस्व मोदेथाम् मोदध्वम् ।
मोदै मोदावहै मोदामहै ॥

४. युध्यताम् युध्येताम् युध्यन्ताम् । युध्यस्व युध्येताम् युध्यध्वम् ।
युध्यै युध्यावहै युध्यामहै ॥

६. दिशताम् दिशेताम् दिशन्ताम् । दिशस्व दिशेथाम् दिशध्वम् ।
दिशै दिशावहै दिशामहै ॥

१०. घोषयताम् घोषयेताम् घोषयन्ताम् । घोषयस्व घोषयेथाम् घोषयध्वम् ।
घोषयै घोषयावहै घोषयामहै ॥

## ಅಭ್ಯಾಸ ೬೯

ಈ ವಾಕ್ಯಗಳಲ್ಲಿ ಆಜ್ಞಾದ್ಯರ್ಥದ ಕ್ರಿಯಾಪದಗಳನ್ನು (೧) ಕಂಸದಲ್ಲಿರುವದನ್ನು ಬಿಟ್ಟು, (೨) ಕಂಸದಲ್ಲಿರುವ ಕ್ರಿಯಾಪದಗಳನ್ನು ಸೇರಿಸಿ, ವಾಕ್ಯ ಗಳನ್ನು ಮಾಡಿಕೊಂಡು - ಹೀಗೆ ಎರಡು ವಿಧದಿಂದಲೂ ಕನ್ನಡಿಸಿರಿ. ಒಂದನೆಯ ವಾಕ್ಯಕ್ಕೆ ಮಾದರಿಯಾಗಿ ಅರ್ಥವನ್ನು ಬರೆದಿದೆ.

१. अर्जुनेन सह युद्धं मा कुरु (= युध्यस्व) । (ಅರ್ಜುನನೊಡನೆ ಯುದ್ಧವನ್ನು ಮಾಡಬೇಡ ; अर्जुनेन सह मा युध्यस्व - ಅರ್ಜುನನೊಡನೆ ಕಾದಾಡಬೇಡ.) २. अत्र त्वम् उपविष्टो भव (= उपविश) । ३. दीनेषु दयां करवाम (= दयामहै) । ४. अद्यैव (ಈಗಲೆ) मरणमस्तु (= म्रियताम्),

युगान्तरे (ಬೇರೊಂದು ಯುಗದಲ್ಲಿ) वा । ५. भवताम् अत्रैव स्थितिर्भवतु (= स्थीयताम्) ॥

೧೦೭. अस्, कृ, भू - ಎಂಬ ಧಾತುಗಳಿಂದಾದ ಆಜ್ಞಾದ್ಯರ್ಥಕಕ್ರಿಯಾ ಪದಗಳನ್ನು ಭಾವನಾಮಗಳೊಡನೆ ಸೇರಿಸಿಯೂ ಭಾವನಾಮದ ಮೂಲಧಾತುವಿನ ಆಜ್ಞಾದ್ಯರ್ಥವನ್ನು ತಿಳಿಸಬಹುದು. ಆದರೆ ಆಗ ವಾಕ್ಯದ ರೂಪವು ಸ್ವಲ್ಪ ಮಾರ್ಪಡ ಬೇಕಾಗುವದು. अस, कृ ಧಾತುಗಳ ಆಜ್ಞಾದ್ಯರ್ಥಕರೂಪಗಳಿವು :

| | | | | | |
|---|---|---|---|---|---|
| अस्तु<br>स्तात् | स्ताम् | सन्तु | करोतु<br>कुरुतात् | कुरुताम् | कुर्वन्तु |
| एधि<br>स्तात् | स्तम् | स्त | कुरु<br>कुरुतात् | कुरुतम् | कुरुत |
| असानि | असाव | असाम | करवाणि | करवाव | करवाम |

## ಅಭ್ಯಾಸ ೭೦

ಇಲ್ಲಿ ಭಾವನಾಮದ ಕ್ರಿಯಾರೂಪಗಳನ್ನು ಉಪಯೋಗಿಸಿಕೊಂಡು ವಾಕ್ಯಗಳನ್ನು ರೂಪಾಂತರಿಸಿ :

**१. ब्राह्मणो विघ्नेश्वरस्य पूजां करोतु । २. अत्र आसनं भवतु भवताम् । ३. किम् उपकारं करोमि ? ('कथम्' ಎಂದು ಪ್ರಾರಂಭಿಸಿರಿ.) ४. गवां पीडां मा कुरु । ५. मृतस्य योगिनः श्रीमतां कुले जन्म भवति ॥**

೧೦೮. ಅನದ್ಯತನಭೂತಕಾಲಕ್ಕೆ ಭಾವನಾಮಗಳೊಡನೆ ಈ अस् ಮುಂತಾದ ಧಾತುಗಳನ್ನುಪಯೋಗಿಸಿ ವಾಕ್ಯಗಳನ್ನು ಮಾಡಬಹುದು. ಉದಾ :

सोऽतिष्ठत् गृहे एव = तस्य स्थितिरासीत् गृहे एव । अभक्षयत्, भक्षितवान् = भक्षणम् अकरोत् । सोऽम्रियत, स मृतः = तस्य मरणम् अभूत् । वालिना सह अयुध्यत (= युद्धम् अकरोत्) ॥

ಅಸ್, ಕೃ ಧಾತುಗಳ ಅನದ್ಯತನರೂಪಗಳು

| | | | | | |
|---|---|---|---|---|---|
| आसीत् | आस्ताम् | आसन् | अकरोत् | अकुरुताम् | अकुर्वन् |
| आसीः | आस्तम् | आस्त | अकरोः | अकुरुतम् | अकुरुत |
| आसम् | आस्व | आस्म | अकरवम् | अकुर्व | अकुर्म |

## ಅಭ್ಯಾಸ ೭೧

ಈ ವಾಕ್ಯಗಳಲ್ಲಿ ಭಾವನಾಮದ ಧಾತುವಿನ ಅನದ್ಯತನಭೂತರೂಪಗಳನ್ನು ಪ್ರಯೋಗಿಸಿ ವಾಕ್ಯಗಳನ್ನು ಬೇರೆಯ ರೂಪದಲ್ಲಿ ಬರೆಯಿರಿ :

१. बालाः कुत्र क्रीडाम् अकुर्वन् ? २. यूयं तत्र नृत्यम् अकुरुत किम् ? ३. वयं न तेषां निन्दाम् अकुर्म । ४. नाहं तं प्रति क्रोधम् अकरवम् । ५. किम् अग्निना कुट्याः दहनमभूत् ?

೧೦೯. ಧಾತುವು ಪರಸ್ಮೈಪದಿಯಾಗಲಿ ಆತ್ಮನೇಪದಿಯಾಗಲಿ य ಸೇರಿಸಿ, ಆತ್ಮನೇಪದದ ಪ್ರತ್ಯಯಗಳನ್ನು ಸೇರಿಸಿ ಆಜ್ಞಾರ್ಥದ ಕರ್ಮಣಿಪ್ರಯೋಗದ ರೂಪಗಳನ್ನು ಮಾಡಿಕೊಳ್ಳಬಹುದು. ಭಾವೇಪ್ರಯೋಗವನ್ನೂ ಹೀಗೆಯೇ ಮಾಡಿಕೊಳ್ಳಬಹುದು. ಉದಾ :

१. स पठतु पुस्तकम् = तेन पठ्यतां पुस्तकम् ।

२. त्वां राक्षसो भक्षयतु = त्वं राक्षसेन भक्ष्यस्व ।

३. अस्मान् देवाः पालयन्तु = वयं देवैः पाल्यामहै ।

४. एवं चेद् गच्छ = एवं चेद् गम्यताम् ।

५. उपविशन्तु सर्वे = सर्वैरुपविश्यताम् ।

## ಅಭ್ಯಾಸ ೭೨

ಈ ವಾಕ್ಯಗಳನ್ನು ಅರ್ಥವು ಮಾರ್ಪಡದಂತೆ ಕರ್ಮಣಿ ಅಥವಾ ಭಾವೇಪ್ರಯೋಗದ ಕ್ರಿಯಾಪದಗಳಿರುವ ವಾಕ್ಯಗಳಾಗಿ ಮಾಡಿರಿ :

१. शास्त्रिणः, आचमनं कुरुत । २. तत्रैव तिष्ठ, रे धूर्त ! ३. राघव,

देवालयं इदानीं प्रविशाव । ४. हे जनाः, स्वे स्वे आसने उपविशत । ५. कृपया किञ्चिदन्नं यच्छत । ६. अधुना वयं किं करवामहै ?

೧೧೦. ಆಜ್ಞಾದ್ಯರ್ಥಕಕ್ರಿಯಾಪದಗಳಲ್ಲದೆ ವಿಧ್ಯಾದ್ಯರ್ಥಕ (Potential Mood) ಕ್ರಿಯಾಪದಗಳೂ ಇವೆ. ಇವಕ್ಕೆ ಆಜ್ಞಾದ್ಯರ್ಥಕಕ್ರಿಯಾಪದಗಳಿಗಿರುವ ಅರ್ಥಗಳ ಜೊತೆಗೆ ಹೆಚ್ಚಿಗೆಯ ಅರ್ಥಗಳೂ ಇವೆ. ಯೋಗ್ಯತೆ, ಸಾಮರ್ಥ್ಯ, ಸಂಭವ, ಪ್ರತೀಕ್ಷೆ, ಇಚ್ಛೆ - ಮುಂತಾದವುಗಳು ಕೆಲವು ಇಂಥ ಅರ್ಥಗಳು. ಈ ಕೆಳಗಿನ ವಾಕ್ಯಗಳನ್ನೂ ಅವುಗಳ ಕನ್ನಡದ ಅನುವಾದವನ್ನೂ ನೋಡಿರಿ. ಕಂಸದಲ್ಲಿರುವದು ಆತ್ಮನೇಪದಿಯ ರೂಪ.

१. सत्यं वदेत् (भाषेत) । २. तौ ब्राह्मणस्यापि धनं हरताम् (चोरयेयाताम्) । ३. भवन्तो मम पुत्रान् कृपया व्याकरणम् अध्यापयेयुः (शिक्षेरन्) । ४. नूनं त्वं पर्वतमपि शीर्षेण वहेः (धारयेथाः) । ५. कथं वा युवां देवान् निन्देतम् (दूषयेथाम्) । ६. आश्चर्यं यदि यूयं पङ्गवोऽपि गिरिम् आरोहेत (लङ्घयेध्वम्) । ७. अप्यहं तस्य मुखं पश्येयम् (ईक्षेय) । ८. कथम् आवां पुण्यक्षेत्रे अनृतं कथयेव (भाषेवहि) ? ९. यदि वयं नित्यं स्तोत्रमेनत् पठेम, सर्वस्मात् पापात् मुक्ता भवेम (मुच्येमहि) ॥

೧. ನಿಜವನ್ನು ಹೇಳಬೇಕು. ೨. ಅವರಿಬ್ಬರೂ ಬ್ರಾಹ್ಮಣನ ಧನವನ್ನು ಕೂಡ ಅಪಹರಿಸಿಯಾರು. ೩. ತಾವುಗಳು ನನ್ನ ಮಕ್ಕಳಿಗೆ ದಯೆಯಿಂದ ವ್ಯಾಕರಣವನ್ನು ಕಲಿಸಿ ಕೊಡಬೇಕು. ೪. ಖಂಡಿತವಾಗಿಯೂ ನೀನು ಪರ್ವತವನ್ನುಕೂಡ ತಲೆಯಿಂದ (= ತಲೆಯಮೇಲೆ) ಹೊತ್ತೀಯೆ. ೫. ನೀವಿಬ್ಬರೂ ಹೇಗೆತಾನೆ ದೇವತೆಗಳನ್ನು ನಿಂದಿಸೀರಿ. ೬. ನೀವು ಹೆಳವರಾದರೂ ಬೆಟ್ಟವನ್ನು ಏರೀರಿ (ದಾಟೀರಿ) - ಎಂದರೆ ಆಶ್ಚರ್ಯ. ೭. ಅವನ ಮುಖವನ್ನು ನಾನು ಕಂಡೇನೆ ! ೮. ನಾವಿಬ್ಬರೂ ಪುಣ್ಯಕ್ಷೇತ್ರದಲ್ಲಿ ಸುಳ್ಳನ್ನು ಹೇಗೆ ಹೇಳಿಯೇವು ? ೯. ನಾವು ನಿತ್ಯವೂ ಈ ಸ್ತೋತ್ರವನ್ನು ಹೇಳುತ್ತಿದ್ದರೆ ಎಲ್ಲ ಪಾಪದಿಂದಲೂ ಮುಕ್ತರಾದೇವು.

೧೧೧. ವಿಧ್ಯಾದ್ಯರ್ಥಕಕ್ರಿಯಾಪದಗಳ ಪ್ರತ್ಯಯಗಳನ್ನು ಇಲ್ಲಿ ಕೊಟ್ಟಿರುತ್ತವೆ :

| ಪರಸ್ಮೈಪದ | | | ಆತ್ಮನೇಪದ | | |
|---|---|---|---|---|---|
| ईत् | ईताम् | ईयुः | ईत | ईयाताम् | ईरन् |
| ईः | ईतम् | ईत | ईथाः | ईयाथाम् | ईध्वम् |
| ईयम् | ईव | ईम | ईय | ईवहि | ईमहि |

ಈ ಕೆಳಗೆ ಆಜ್ಞಾದ್ಯರ್ಥಕರೂಪಗಳನ್ನೂ ವಿಧ್ಯಾದ್ಯರ್ಥಕರೂಪಗಳನ್ನೂ ಹೋಲಿಕೆಗಾಗಿ ಕೊಟ್ಟಿದೆ :

आज्ञादि

| ಪರಸ್ಮೈ | | | ಆತ್ಮನೇ | | |
|---|---|---|---|---|---|
| वदतु, वदतात् | वदताम् | वदन्तु | वन्दताम् | वन्देताम् | वन्दन्ताम् |
| वद, वदतात् | वदतम् | वदत | वन्दस्व | वन्देथाम् | वन्दध्वम् |
| वदानि | वदाव | वदाम | वन्दै | वन्दावहै | वन्दामहै |

विध्यादि

| | | | | | |
|---|---|---|---|---|---|
| वदेत् | वदेताम् | वदेयुः | वन्देत | वन्देयाताम् | वन्देरन् |
| वदेः | वदेतम् | वदेत | वन्देथाः | वन्देयाथाम् | वन्देध्वम् |
| वदेयम् | वदेव | वदेम | वन्देय | वन्देवहि | वन्देमहि |

೧೧೨. अस्, कृ ಧಾತುಗಳಿಗೆ (ಪರಸ್ಮೈಪದದ) ವಿಧ್ಯಾದ್ಯರ್ಥದ ರೂಪಗಳು ಇಂತಿವೆ (ಇವುಗಳ ಆಜ್ಞಾದ್ಯರ್ಥರೂಪಗಳನ್ನು ಖಂ. ೧೦೭ರಲ್ಲಿ ನೋಡಿ) :

| अस् | | | कृ | | |
|---|---|---|---|---|---|
| स्यात् | स्याताम् | स्युः | कुर्यात् | कुर्याताम् | कुर्युः |
| स्याः | स्यातम् | स्यात | कुर्याः | कुर्यातम् | कुर्यात |
| स्याम् | स्याव | स्याम | कुर्याम् | कुर्याव | कुर्याम |

## ಅಭ್ಯಾಸ ೭೩

ವಾಕ್ಯಗಳನ್ನು ಕನ್ನಡಿಸಿ. ಆಯಾ ಪುರುಷದ ಮೂರು ವಚನಗಳ ರೂಪಗಳನ್ನೂ ಬರೆಯಿರಿ :

१. रे रे भटाः, वस्त्राणि शीघ्रं क्षालयत । २. लिपिकरः किं लिखतु ? ३. अहं परस्य धनं न जातु (ಎಂದಿಗೂ) हरेयम् । ४. दीनानां रक्षणेन धर्मं कीर्तिं लभेमहि । ५. क्षम्यताम् अस्माकम् अपराधः । ६. मित्र, किं करवाणि ते ? ७. अयि भटाः, धैर्येण युध्येध्वम् । ८. अयं भटः पञ्चापि व्याघ्रान् युगपत् (ಒಮ್ಮೆಗೇ) मारयेत् । ९. आगच्छत, अत्र शिलायाम् उपविशामः । १०. पुत्र, सत्ये रमेथाः, महतः (ದೊಡ್ಡವರನ್ನು) सेवेथाः ॥

## ಅಭ್ಯಾಸ ೭೪

ಈ ವಾಕ್ಯಗಳನ್ನು ಆಜ್ಞಾದ್ಯರ್ಥಕ - ಅಥವಾ ವಿಧ್ಯಾದ್ಯರ್ಥಕ - ರೂಪದ ಕ್ರಿಯಾಪದವನ್ನುಪಯೋಗಿಸಿ ಸಂಸ್ಕೃತಕ್ಕೆ ತಿರುಗಿಸಿ :

೧. ದೂರವಾದ ದಾರಿಯನ್ನು (अध्वन्) ನಡೆಯಬಾರದು (गच्छ्). ೨. ಸಾಲವನ್ನು ಮಾಡಿಯಾದರೂ (कृत्वापि) ತುಪ್ಪವನ್ನು ಕುಡಿಯಬೇಕು (पा). ೩. ಒಂದು ವೇಳೆ ಮರದಿಂದ ಬಿದ್ದೀಯೆ (पत्). ೪. ಸತ್ಯವನ್ನು ನುಡಿ (वद्) ; ಧರ್ಮವನ್ನು ಮಾಡು (चर्). ೫. ಕಾಮದಿಂದಲಾಗಲಿ ಲೋಭದಿಂದಲಾಗಲಿ ಧರ್ಮವನ್ನು ಬಿಡ(त्यज्)ಬಾರದು. ೬. ಅಪ್ಪ, ಹಾಗೇ ಆಗಲಿ (अस्). ೭. ಎಲೈ ಬ್ರಾಹ್ಮಣ, ನನ್ನ ಮಾತನ್ನು ಕೇಳು (श्रु). ೮. ಈ ಹೊರೆಯನ್ನು ಹೊತ್ತೀರಾ (वह्) ?

## ೧೯. ಕೆಲವು ಸರ್ವನಾಮಗಳು (ಮುಂದುವರಿದದ್ದು)

೧೧೩. ಈ ವಾಕ್ಯಗಳಲ್ಲಿ ಕನ್ನಡದ ಏನು, ಯಾವದು - ಎಂಬ ಮಾತುಗಳನ್ನು ಸಂಸ್ಕೃತದಲ್ಲಿ ಅನುವಾದಮಾಡಿರುವ ಬಗೆಯನ್ನು ನೋಡಿ :

೧. ಅದು ಏನು ? किं तत् ? ೨. ಅದು ಯಾವದು ? – किं तत् ? कतरत् तत्, कतमत् तत् ? (ಇಲ್ಲಿ ಎರಡರಲ್ಲಿ ಒಂದು, ಅನೇಕ ವಸ್ತುಗಳಲ್ಲಿ ಒಂದು ಎಂಬ ರ್ಥವು ಕನ್ನಡದಲ್ಲಿ ತೋರುವದಿಲ್ಲ). ೩. ಅವು ಯಾವಯಾವವು ? कतमे ते ? ೪. ಅಲ್ಲಿ ಏನು ಇದೆಯೋ (ಅದು) ಇದೆ. – तत्र यदस्ति तदस्ति । (ಇಲ್ಲಿ

ಪ್ರಶ್ನಾರ್ಥಕಶಬ್ದವಿಲ್ಲ.) ೫. ದೇವನೆ, ಯಾವದು ನನ್ನಿಂದ ಮಾಡಲ್ಪಟ್ಟಿತೋ ಅದು (ನಾನು ಮಾಡಿದ್ದು) ಸಂಪೂರ್ಣವಾಗಲಿ ! - **देव, यत्कृतं मया, तत् परिपूर्णमस्तु ।** ೬. ಅವನು ಯಾರು ? - **कोऽसौ ?** ೭. ಯಾವನು ಇಲ್ಲಿ ನಿಂತಿದ್ದಾನೋ ಅವನು (ಇಲ್ಲಿ ನಿಂತಿರುವವನು) ನನ್ನ ಮಗನು - **योऽत्र तिष्ठति, असौ मम पुत्रः ।** ೮. ಯಾರವಳು ? - **का सा ? काऽसौ ? कतरा सा ?** ೯. ಯಾವಳು ಅಲ್ಲಿ ಹೋಗುತ್ತಿರುವಳೋ ಅವಳು (ಅಲ್ಲಿ ಹೋಗುತ್ತಿರುವಳಲ್ಲ, ಅವಳು) ನನ್ನ ತಂಗಿ - **या तत्र गच्छति सा मम स्वसा ॥**

ವಿಶೇಷ : (1) ಕನ್ನಡದಲ್ಲಿ ಪ್ರಶ್ನೆಗೂ ಸಂಬಂಧವನ್ನು ತಿಳಿಸುವದಕ್ಕೂ ಏನು, ಯಾರು - ಎಂಬ ಸರ್ವನಾಮಗಳನ್ನೇ (Interrogative Pronouns) ಉಪಯೋಗಿಸುತ್ತಾರೆ. ಸಂಸ್ಕೃತದಲ್ಲಿ ಪ್ರಶ್ನೆಗೆ **किम्** ಶಬ್ದ, ಸಂಬಂಧಾರ್ಥಕಕ್ಕೆ **यत्** ಶಬ್ದ (Relative Pronoun).

(2) ಮೇಲೆ ನಾವು ಕನ್ನಡದಲ್ಲಿ ಬರೆದಿರುವ ಸಂಬಂಧಾರ್ಥಕಸರ್ವನಾಮಗಳಿರುವ ವಾಕ್ಯಗಳು ಸಂಸ್ಕೃತದ ಮರ್ಯಾದೆಗೆ ತಕ್ಕಂತೆ ಇವೆ ; ಕಂಸದಲ್ಲಿ ಕನ್ನಡದ ಮರ್ಯಾದೆಗೆ ತಕ್ಕಂತೆ ಅರ್ಥವನ್ನು ಬರೆದಿದೆ.

**या असौ तत्र गच्छति सा मम स्वसा ।** ಈ ವಾಕ್ಯಕ್ಕೆ ಇದ್ದಂತೆ ಕನ್ನಡದ ಅನುವಾದವು ಹೀಗೆ ; "ಅಗೋ, ಯಾವಳು ಅಲ್ಲಿ ಹೋಗುತ್ತಿದಾಳೆಯೋ, ಅವಳು ನನ್ನ ತಂಗಿ" ಎಂದಾಗುವದು. ಕನ್ನಡದ ಮರ್ಯಾದೆಗೆ ತಕ್ಕಂತೆ ಹೇಳಿದರೆ "ಅಗೋ ಅಲ್ಲಿ ಹೋಗುತ್ತಿದಾಳಲ್ಲ, ಅವಳು ನನ್ನ ತಂಗಿ" ಅಥವಾ "ಅಲ್ಲಿ ಹೋಗುತ್ತಿರುವವಳು ನನ್ನ ತಂಗಿ" ಎಂದಾಗುವದು.

೧೧೪. ಇಲ್ಲಿರುವ ವಾಕ್ಯಗಳಲ್ಲಿರುವ **यद्, तद्** ಶಬ್ದಗಳ ಲಿಂಗವಿಭಕ್ತಿವಚನಗಳನ್ನು ಹೇಳಿ. ಒಂದು ಮಾದರಿಯನ್ನು ಇಲ್ಲಿ ತೋರಿಸಿದೆ :

**१. य इदं स्तोत्रं शृणुयात्, यश्चापि परिकीर्तयेत्, स किञ्चिदपि अशुभं न गच्छेत् ।**

'यः' - ಪುಲ್ಲಿಂಗ, ಪ್ರಥಮಾವಿಭಕ್ತಿ, ಏಕವಚನ, 'सः' - ಪುಲ್ಲಿಂಗ, ಪ್ರಥಮೈಕವಚನ.

२. येनेदं क्रियते, स राज्ञा दण्ड्येत । ३. यश्चापस्य आरोपयिता, तस्मै मम दुहिता प्रदीयते । ४. महाजना येन गच्छन्ति, स मार्गः । ५. यां मालाम् इच्छसि, सा तत्र नास्ति । ६. यद् वाञ्छसि, तत् स्वीकुरु । ७. ये सदा सत्यं वदन्ति, तेभ्यो नमः ।

೧. ಯಾವನು ಈ ಸ್ತೋತ್ರವನ್ನು ಕೇಳುವನೋ, ಯಾವನಾದರೆ ಗಟ್ಟಿಯಾಗಿ ಹೇಳುವನೋ ಅವನು ಒಂದಿಷ್ಟೂ ಕೆಟ್ಟದ್ದನ್ನು ಪಡೆಯುವದಿಲ್ಲ. ೨. ಯಾವನಿಂದ ಇದು ಮಾಡಲ್ಪಡುತ್ತದೆಯೋ ಅವನು (= ಇದನ್ನು ಮಾಡುವವನು) ರಾಜನಿಂದ ದಂಡಿಸಲ್ಪಟ್ಟಾನು (= ಅವನನ್ನು ಅರಸನು ದಂಡಿಸಿಯಾನು). ೩. ಯಾವನು ಬಿಲ್ಲನ್ನು (ಹುರಿಕಟ್ಟಿ) ಏರಿಸುವವನೋ ಅವನಿಗೆ (= ಬಿಲ್ಲನ್ನು ಹುರಿಕಟ್ಟಿ ಏರಿಸುವವನಿಗೆ) ನನ್ನ ಮಗಳು ಕೊಡಲ್ಪಡುತ್ತಾಳೆ (= ನನ್ನ ಮಗಳನ್ನು ಕೊಡುವೆನು). ೪. ಬಹುಜನರು ಯಾವ (ದಾರಿಯಿಂದ) ಹೋಗುತ್ತಾರೋ ಅದು (= ಬಹುಜನರು ನಡೆಯುವದೇ) ದಾರಿ. ೫. ಯಾವ ಮಾಲೆಯನ್ನು ನೀನು ಬೇಕೆನ್ನುತ್ತಿರುವೆಯೋ ಅದು (= ನೀನು ಬೇಕೆನ್ನುತ್ತಿರುವ ಮಾಲೆಯು) ಅಲ್ಲಿಲ್ಲ. ೬. ಯಾವದನ್ನು ಬಯಸುತ್ತೀಯೋ ಅದನ್ನು (= ನಿನಗೆ ಬೇಕಾದದ್ದನ್ನು) ತೆಗೆದುಕೊ. ೭. ಯಾರು ಯಾವಾಗಲೂ ಸತ್ಯವನ್ನೇ ನುಡಿಯುತ್ತಿರುವರೋ ಅವರಿಗೆ (= ಯಾವಾಗಲೂ ಸತ್ಯವನ್ನೇ ನುಡಿಯುತ್ತಿರುವವರಿಗೆ) ನಮಸ್ಕಾರ !

ವಿಶೇಷ : (೧) 'ಯದ್' ಶಬ್ದವಿರುವ ಅಧೀನವಾಕ್ಯಕ್ಕೆ (Subordinate Clause), 'ತದ್' ಇರುವ ಮತ್ತೊಂದು ವಾಕ್ಯವು ಬೇಕಾಗುವದು. ಈ (ಯದ್ - ತದ್) ಶಬ್ದಗಳು ಒಂದೇ ಲಿಂಗ, ಒಂದೇ ವಚನದಲ್ಲಿ ಇರಬೇಕು ; ವಿಭಕ್ತಿಯು ಆಯಾ ವಾಕ್ಯಕ್ಕೆ ತಕ್ಕಂತೆ ಇರುತ್ತದೆ.

(೨) ಯಚ್ಛಬ್ದವಿರುವ ವಾಕ್ಯವು ಮೊದಲೇ ಇರಬೇಕೆಂಬ ನಿಯಮವೇನೂ ಸಂಸ್ಕೃತದಲ್ಲಿಲ್ಲ. ಉದಾ : "**ಸ ಏವ ಮಾರ್ಗೋ ಯೇನ ಮಹಾಜನೋ ಗಚ್ಛತಿ**" ಎಂದು ಬರೆಯಬಹುದು.

## ಅಭ್ಯಾಸ ೭೫

ಇಲ್ಲಿರುವ ಸಂಸ್ಕೃತವಾಕ್ಯಗಳನ್ನು ಅಕ್ಷರಾನುಸಾರವಾಗಿ ಕನ್ನಡಿಸಿ, ಕನ್ನಡದ ಮರ್ಯಾದೆಗೆ ತಕ್ಕಂತೆ ಅರ್ಥವನ್ನು ಹೇಳಿ :

१. यस्यास्ति वित्तं स नरः कुलीनः । २. येन प्रेरितः पुरुषः पापं करोति, स कामः । ३. अयमेव चौरो, यो वस्त्राणि तदा अपाहरत् । ४. भीमं (ಭಯಂಕರವಾದ) वनं भवेत् तत्, यस्मिन्नीदृशा हिंस्रा मृगाः । ५. ये पापं कुर्वन्ति, ते सूकरा (ಹಂದಿ) जायन्ते । ६. येषां भगवान् प्रियो भवति, ते भगवतोऽपि प्रिया भवन्ति । ७. यस्मात् ते एवं वदन्ति, तस्मात् ते वञ्चकाः । ८. यस्मिन् ग्रामे जलं नास्ति, तत्र न वसेयम् ।।

## ಅಭ್ಯಾಸ ೭೬

ಈ ವಾಕ್ಯಗಳ ಅಭಿಪ್ರಾಯವನ್ನು ಯಚ್ಛಬ್ದವನ್ನುಪಯೋಗಿಸಿ ಸಂಸ್ಕೃತದಲ್ಲಿ ಬರೆಯಿರಿ :

೧. ತಮಗೋಸ್ಕರ (आत्मार्थे) ಅಡಿಗೆಮಾಡಿಕೊಳ್ಳುವವರು ಪಾಪಿಗಳು. ೨. ಯಾರಿಗೆ ಇದು ರುಚಿಸುವದಿಲ್ಲವೋ (रुच्) ಅವರು ಎಂದಿಗೂ ಇದನ್ನು ಓದಲಾರರು (पठ्). ೩. ನಾವು ಬೇಕೆನ್ನುವ ಪದಾರ್ಥವು ನಿಮ್ಮಲ್ಲಿಲ್ಲ. ೪. ಅವರು ವಾಸಮಾಡುತ್ತಿರುವ ಗುಡಿಸಲು ಎಲ್ಲಿದೆ ? ೫. ನೀವು ನಿನ್ನೆ ಕರೆತಂದ ಬ್ರಾಹ್ಮಣನು ಯಾವ ಊರಿನಲ್ಲಿರುತ್ತಾನೆ ?

೧೧೫. ಈ ವಾಕ್ಯಗಳಲ್ಲಿರುವ यद्-तद् ಶಬ್ದಗಳ ಲಿಂಗಗಳು ಯಾವವು ?

१. यं सर्पं मन्यते भवान् सा रज्जुः । यम् ಪು., सा ಸ್ತ್ರೀ.

२. यद् अदो भवनम्, सा पाठशाला । यद्-ನ., सा - ಸ್ತ್ರೀ.

ವಿಶೇಷ : ಯಚ್ಛಬ್ದಕ್ಕೆ ಸಂಬಂಧಿಸಿರುವ ತಚ್ಛಬ್ದವು ತನ್ನ ವಿಧೇಯಕ್ಕೆ (Predicate) ತಕ್ಕ ಲಿಂಗದಲ್ಲಿಯೇ ಇರಬಹುದು.

೧೧೬. ಈ ವಾಕ್ಯಗಳಲ್ಲಿ ಯಚ್ಛಬ್ದದ ಪರಾಮೃಷ್ಟಶಬ್ದವು (Antecedent) ಯಾವದು ? ಯಚ್ಛಬ್ದಕ್ಕೆ ವಿಧೇಯವಾದ ಕ್ರಿಯಾಪದವು ಯಾವ ಪುರುಷವಚನಗಳಲ್ಲಿವೆ ?

१. प्रवेशय तान् पुरुषान्, ये मम दर्शनम् इच्छन्ति । २. सर्वे मूर्खा यूयम्, ये वासाय गृहं न रचयथ (ಮಾಡಿಕೊಂಡಿಲ್ಲವಲ್ಲ) । ३. अहो !

विनष्टा (ಕೆಟ್ಟವು) वयं ये चोरेष्वपि[1] विश्वस्ताः (ವಿಶ್ವಾಸವುಳ್ಳವರು) स्मः ।

४. किं पापं कृतवानहं य ईदृशीं यातनाम् अनुभवामि ॥

ನಿಯಮ : ಯಚ್ಛಬ್ದವಿರುವ ವಾಕ್ಯದಲ್ಲಿ ಅದರ ಪರಾಮೃಷ್ಟಶಬ್ದಕ್ಕೆ (Antecedent) ತಕ್ಕಂತೆ ಕ್ರಿಯಾಪದದ ಪುರುಷವಚನಗಳಿರುತ್ತವೆ.

೧೧೭.❖ ಈ ವಾಕ್ಯಗಳನ್ನು ಕನ್ನಡಿಸಿರುವದರಲ್ಲಿ ಏನು ವಿಶೇಷವಿದೆ ?

१. येयमत्र नदी प्रवहति, सैव हेमावती ।

ಇಗೊ, ಇಲ್ಲಿ ಹರಿಯುತ್ತಿದೆಯಲ್ಲ, ಇದೇ (ಇಲ್ಲಿ ಹರಿಯುತ್ತಿರುವದೇ) ಹೇಮಾವತಿ.

२. योऽहं तत्र अवसम्, सोऽहमिदानीम् अत्र तिष्ठामि ।

ಅಗೊ, ಆಗ ಅಲ್ಲಿ ವಾಸಮಾಡುತ್ತಿದ್ದೆನಲ್ಲ, ಅದೇ ನಾನೇ ಈಗ ಇಲ್ಲಿ ನಿಂತಿದ್ದೇನೆ (ಇರುತ್ತೇನೆ).

३. योऽसौ वञ्चकः, मायावी चोरः, सोऽयमिह धावति ।

ಅಗೊ, ವಂಚಕನೂ ಮಾಯಾವಿಯೂ ಆದ ಆ ಕಳ್ಳನಿದ್ದಾನಲ್ಲ, ಅವನೇ ಇಲ್ಲಿ ಓಡುತ್ತಿದ್ದಾನೆ.

ವಿಶೇಷ : ಯಚ್ಛಬ್ದವನ್ನು ಬೇರೆಯ ಸರ್ವನಾಮಗಳಿಗೂ ಸೇರಿಸುವದುಂಟು. ಆಗ ಅಗೊ, ಇಗೊ, ಅಂಥ - ಎಂಬ ಮಾತುಗಳಿಂದ ಅದರ ಅರ್ಥವನ್ನು ತಿಳಿಸಬೇಕಾಗುತ್ತದೆ.

४. येऽपि तथा वदन्ति, तेऽपि एवमेव कुर्वन्ति ।

ಯಾರು ಹಾಗೆಂದು ಹೇಳುತ್ತಾರೋ ಅವರೂ (= ಹಾಗೆ ಹೇಳುತ್ತಾರಲ್ಲ, ಅವರೂ) ಹೀಗೆಯೇ ಮಾಡುತ್ತಾರೆ.

५. यदपि केचिदेवमाहुः, तदपि न सम्यक् ।

ಇನ್ನು ಕೆಲವರು ಹೀಗೆನ್ನುತ್ತಾರಲ್ಲ, ಅದೂ ಸರಿಯಲ್ಲ.

---

1. ಯಾರಲ್ಲಿ ವಿಶ್ವಾಸವೋ ಅವರ ಹೆಸರಿಗೆ ಷಷ್ಠೀವಿಭಕ್ತಿಯಾಗಲಿ ಸಪ್ತಮೀವಿಭಕ್ತಿಯಾಗಲಿ ಬೇಕು.

❖ ಹೀಗೆ ಗುರುತುಹಾಕಿರುವ ಖಂಡಗಳು ಕಷ್ಟವಾಗಿ ತೋರಿದರೆ ಅವನ್ನು ಮೊದಲನೆಯ ಸಲಕ್ಕೆ ಬಿಟ್ಟುಬಿಡಬಹುದು.

६. य एव पण्डितमात्मानम् अमन्यत, स एव वस्तुतोऽज्ञः ।

ಯಾವನು ತಾನು ಪಂಡಿತನೆಂದುಕೊಂಡಿದ್ದನೋ ಅವನೇ ನಿಜವಾಗಿ ದಡ್ಡನು.

७. यथैवोऽक्तं मया तथैव करोमि ।

ಹೇಗೆ ನನ್ನಿಂದ ಹೇಳಲ್ಪಟ್ಟಿತೋ ಹಾಗೆಯೇ (= ನಾನು ಹೇಳಿದ್ದಂತೆಯೇ) ಮಾಡುತ್ತೇನೆ.

ವಿಶೇಷ : ಸಂಸ್ಕೃತದಲ್ಲಿ ಯದ್-ತದ್ ಶಬ್ದಗಳಿರುವ ವಾಕ್ಯಗಳಲ್ಲಿ ಈ ಎರಡಕ್ಕೂ ಅದೇ ಅವ್ಯಯವನ್ನು (ಅಪಿ, ಏವ, ಚ - ಮುಂತಾಗಿ) ಸೇರಿಸುವ ರೂಢಿಯಿದೆ. ಕನ್ನಡದಲ್ಲಿ ಎರಡನೆಯದೊಂದಕ್ಕೇ ಅವಧಾರಣೆಯ ಶಬ್ದವು ಬರುತ್ತದೆ.

## ಅಭ್ಯಾಸ ೭೭

ಈ ವಾಕ್ಯಗಳನ್ನು ಯದ್-ತದ್ ಶಬ್ದಗಳಿರುವಂತೆಯೂ ಕನ್ನಡದ ಮರ್ಯಾದೆಗೆ ಒಪ್ಪುವಂತೆಯೂ ಅನುವಾದಮಾಡಿರಿ :

१. किं तदेवेदं पुस्तकं यत् तव मित्रेण दत्तम् । २. यान्येव फलानि वाञ्छथ, तान्येवेमानि । ३. यदैव त्वं मां स्मरसि, तदैव आगमिष्यामि । ४. यत्तूक्तम् एभिः - नेदमनृतमिति, तत्तु न विश्वसनीयम् (ನಂಬತಕ್ಕದ್ದಲ್ಲ) । ५. स यश्चायम् अस्माकं शरीरस्यान्तः, यश्चासौ सूर्यमण्डले स एकः ॥

೧೧೮.* ಈ ವಾಕ್ಯಗಳಲ್ಲಿ ಯಚ್ಛಬ್ದವನ್ನು ಕನ್ನಡಿಸಿರುವ ಬಗೆಯನ್ನು ನೋಡಿರಿ :

१. न युक्तमनुष्ठितं भवता यदत्राऽऽगतोऽसि । २. तेन हृदये चिन्तितं यत् भव्य उपायोऽस्ति । ३. कथितमासीन्मया ते यत् समुद्रवेलायां अण्डानां विनाशो भविष्यति । ४. तदपसराग्रतः, येन अहं स्वामिनं विज्ञापयामि । ५. किं तवाहं भृत्यो येनैवं वदसि ? ६. नूनं त्वमुन्मत्तोऽसि येनैवं भणसि । ७. तत् त्वया सह तत्र गमिष्यामि, येन ते मां नावमन्येरन् । ८. नाहं तेन सह वसामि, यस्मात् कृतघ्नोऽसौ ॥

೧. ಇಲ್ಲಿಗೆ ಬಂದೆಯಲ್ಲ ಇದು (= ಇಲ್ಲಿಗೆ ನೀನು ಬಂದದ್ದು) ನಿನ್ನಿಂದ ಸರಿಯಾಗಿ ಮಾಡಲ್ಪಡಲಿಲ್ಲ (= ಸರಿಯಾಗಿ ಮಾಡಿದಂತಾಗಲಿಲ್ಲ). ೨. ಅವನಿಂದ ಮನಸ್ಸಿನಲ್ಲಿ ಚಿಂತಿಸಲ್ಪಟ್ಟಿದ್ದೇನೆಂದರೆ, (= ಅವನು ಮನಸ್ಸಿನಲ್ಲಿಯೇ ಅಂದು ಕೊಂಡದ್ದೇನೆಂದರೆ) ಉತ್ತಮವಾದ ಉಪಾಯವಿದೆ. ೩. ನನ್ನಿಂದ ನಿನಗೆ ಹೇಳಲ್ಪಟ್ಟಿದ್ದೇನೆಂದರೆ ಸಮುದ್ರದುಬ್ಬರದಿಂದ ಮೊಟ್ಟೆಗಳು ನಾಶವಾಗುವವು. (= ಸಮುದ್ರದ ಉಬ್ಬರದಿಂದ ಮೊಟ್ಟೆಗಳು ನಾಶವಾಗುವವೆಂದು ನಿನಗೆ ಹೇಳಿ ದ್ದೆನು.) ೪. ಆದ್ದರಿಂದ ಮುಂದುಗಡೆಯಿಂದ ಅತ್ತ ಸರಿ, ಹಾಗಾದರೆ ನಾನು ಸ್ವಾಮಿಗೆ ಬಿನ್ನವಿಸಿಕೊಳ್ಳುತ್ತೇನೆ (= ಆದ್ದರಿಂದ ಅತ್ತ ಸರಿ, ನಾನು ಬಿನ್ನವಿಸಿಕೊಳ್ಳಬೇಕು). ೫. ನಾನು ನಿನ್ನ ಸಂಬಳದಾಳೊ, ಹೀಗೆನ್ನುತ್ತಿರುವೆಯಲ್ಲ ! ೬. ನಿಜವಾಗಿ ನೀನು ಹುಚ್ಚನಾಗಿದ್ದೀಯೆ, (ಹುಚ್ಚನಾಗಿರಬೇಕು), ಆದ್ದರಿಂದಲೇ ಹೀಗೆ ಹೇಳುತ್ತಿರುವೆ. ೭. ಆದ್ದರಿಂದ ನಿನ್ನೊಡನೆ ಅಲ್ಲಿಗೆ ಹೋಗುವೆನು ; ಹಾಗಾದರೆ ಅವರು ನನ್ನನ್ನು ಅಪಮಾನಗೊಳಿಸದೆ ಇದ್ದಾರು (= ನನ್ನನ್ನು ಅವರು ಅಪಮಾನಗೊಳಿಸದೆ ಇರ ಲೆಂಬುದಕ್ಕಾಗಿ ನಾನು ನಿನ್ನೊಡನೆಯೇ ಅಲ್ಲಿಗೆ ಬರುವೆನು). ೮. ನಾನು ಅವನೊಡನೆ ವಾಸಮಾಡುವದಿಲ್ಲ. ಏಕೆಂದರೆ ಅವನು ಕೃತಘ್ನನು.

ವಿಶೇಷ : ಯತ್ ಎಂಬುದನ್ನು ವಾಕ್ಯದ ಮುಂದೆ ಇಟ್ಟರೆ 'ಹೀಗೆಂಬುದು', 'ಹೀಗೆಂದು', ಎಂದರ್ಥ. ಇಂಗ್ಲಿಷಿನ that ಎಂಬ ಅವ್ಯಯಕ್ಕೆ ಸಮಾನಾರ್ಥಕವಿದು. **ಸ ವದತಿ ಯತ್ ತತ್ರ ನ ಕೇನಾಪಿ ಆಗನ್ತವ್ಯಮ್** (He says that no one should come there) ಅಲ್ಲಿಗೆ ಯಾರೂ ಬರಬಾರದೆಂದು ಅವನು ಹೇಳುತ್ತಿದಾನೆ. ಕಾರಣ ಹೇಳುವ **ತತ್** (ಆದ್ದರಿಂದ), **ಯತ್** (ಎಂದು) ಈ ಎರಡೂ ಅವ್ಯಯಗಳು. **ಯೇನ** (ಹಾಗಾದರೆ, ಆ ಕಾರಣದಿಂದ), **ಯಸ್ಮಾತ್** (ಏಕೆಂದರೆ, ಹೀಗಿರುವದರಿಂದ) ಇವೆರಡೂ ಕಾರಣವನ್ನೂ ಹೇಳುವ ಸಂಬಂಧಾರ್ಥಕಗಳು. ಅವಕ್ಕೆ **ತೇನ, ತಸ್ಮಾತ್** ಎಂಬ ನಿತ್ಯಸಂಬದ್ಧಸರ್ವನಾಮಗಳಿಲ್ಲದೆಯೂ ಪ್ರಯೋಗವುಂಟು.

೧೧೯. ಹಿಂದೆ (೩೦. ೯೫ರಲ್ಲಿ) **कश्चित्, एक** ಎಂಬ **ಸಾಮಾನ್ಯ ನಿರ್ದೇಶಕ ಸರ್ವನಾಮ** (Indefinite Demonstrative Pronouns) ಗಳ ರೂಪವು ಹೇಗಾಗುವ ದೆಂಬುದನ್ನು ಆಗಲೆ ತಿಳಿಸಿರುತ್ತದೆ. ಅವುಗಳನ್ನು **कश्चित्, काचित्, किञ्चित्** ; **एकः, एका, एकम्** ಎಂದು ಮೂರು ಲಿಂಗಗಳಲ್ಲಿಯೂ ನಡೆಯಿಸಿಕೊಳ್ಳಬಹುದು. ಒಂದಾನೊಂದು, ಒಬ್ಬಾನೊಬ್ಬ, ಯಾವನೋ ಒಬ್ಬ - ಎಂದು ಅವುಗಳಿಗೆ ಕನ್ನಡದ ಅನುವಾದ. **किम्** ಶಬ್ದಕ್ಕೆ **चित्, चन** ಎಂಬ ಅವ್ಯಯಗಳಲ್ಲದೆ **अपि** ಎಂಬುದನ್ನು

ಸೇರಿಸಿದರೂ ಇದೇ ಅರ್ಥವೆಂಬುದನ್ನು ನೆನಪಿನಲ್ಲಿಡಬೇಕು. ಈ ಶಬ್ದಗಳನ್ನು ಸ್ವತಂತ್ರ ಶಬ್ದಗಳಾಗಿಯೂ, ವಿಶೇಷಣಗಳಾಗಿಯೂ ಉಪಯೋಗಿಸಬಹುದು. ಈ ಕೆಳಗೆ ಕೆಲವು ಉದಾಹರಣೆಗಳಿವೆ :

१. एकस्मिन् कासारे द्वे मित्रे स्नानाय आगच्छताम् । तत्र च तटे ताभ्यां कश्चन भिक्षुको दृष्टः । भिक्षुकस्य पाणौ एकं रत्नमस्ति । मित्रे तम् अपृच्छताम् - रे रे, कथमयं मणिस्तव हस्ते आगतः ? नूनं कस्यचित् रत्नमिदं त्वया चोरितम् । स आह - न कस्यापि रत्नमिदम् । काचिद् वृद्धा मह्यं तद्दत्तवति । रे रे, किमिति अनृतं वदसि ? न कोऽपि विवेकी एनम् अनर्घं रत्नं कस्मैचित् परस्मै प्रयोजनं विना यच्छेत् । नूनमिदं केनचित् विस्मृत्या अत्र त्यक्तम् ॥

ಒಂದು ಕೊಳದಲ್ಲಿ (= ಕೊಳಕ್ಕೆ) ಇಬ್ಬರು ಮಿತ್ರರು ಸ್ನಾನಕ್ಕಾಗಿ ಬಂದರು. ಮತ್ತು ಅಲ್ಲಿ ದಡದಮೇಲೆ ಅವರಿಂದ ಒಬ್ಬ ತಿರುಕನು ನೋಡಲ್ಪಟ್ಟನು (= ಅವರು ಒಬ್ಬ ತಿರುಕನನ್ನು ಕಂಡರು). ತಿರುಕನ ಕೈಯಲ್ಲಿ ಒಂದು ರತ್ನವು ಇತ್ತು. ಮಿತ್ರರಿಬ್ಬರೂ ಅವನನ್ನು (ಹೀಗೆಂದು) ಕೇಳಿದರು : ಎಲ ಎಲಾ, ಈ ರತ್ನವು ನಿನ್ನ ಕೈಯಲ್ಲಿ (= ಕೈಗೆ) ಹೇಗೆ ಬಂತು ? ನಿಜವಾಗಿ ಯಾರೋ ಒಬ್ಬನ ಈ ರತ್ನವು ನಿನ್ನಿಂದ ಕಳವುಮಾಡಲ್ಪಟ್ಟಿದೆ (= ಯಾವನೋ ಒಬ್ಬನ ಈ ರತ್ನವನ್ನು ನೀನು ಕದ್ದಿರಬೇಕು). ಅವನು ಇಂತೆಂದನು : ಈ ರತ್ನವು ಯಾರದ್ದೂ ಅಲ್ಲ, ಒಬ್ಬ ಮುದುಕಿ ಅದನ್ನು ನನಗೆ ಕೊಟ್ಟಳು. 'ಎಲ ಎಲಾ, ಏತಕ್ಕೆ ಸುಳ್ಳುಹೇಳುತ್ತಿದ್ದೀಯೆ ? ವಿವೇಕಿಯಾದವನು ಯಾವನೂ ಈ ಅಮೂಲ್ಯ (= ಹೆಚ್ಚಿನ ಬೆಲೆಯ) ರತ್ನವನ್ನು ಯಾವನೋ ಇನ್ನೊಬ್ಬನಿಗೆ ಪ್ರಯೋಜನವಿಲ್ಲದೆ ಕೊಡಲಾರನು. ನಿಜವಾಗಿ ಇದು ಯಾವನೋ ಒಬ್ಬನಿಂದ ಮರೆತು ಇಲ್ಲಿ ಬಿಡಲ್ಪಟ್ಟಿದೆ (= ಯಾವನೋ ಇದನ್ನು ಮರೆತು ಇಲ್ಲಿ ಬಿಟ್ಟಿರಬೇಕು).

## ಅಭ್ಯಾಸ ೭೮

ಇಲ್ಲಿರುವ ಸರ್ವನಾಮವಿಶೇಷಣಗಳ ವಿಶೇಷ್ಯಗಳನ್ನೂ ಲಿಂಗಭಕ್ತಿವಚನಗಳನ್ನೂ ತಿಳಿಸಿ ವಾಕ್ಯಗಳನ್ನು ಕನ್ನಡಿಸಿ :

१. तयोरेकस्य परिधानं (ಉಟ್ಟುಬಟ್ಟೆ) पीतम्, अपरस्य (ಇನ್ನೊಬ್ಬನದು) श्वेतम् । २. कश्चित् एवं वदति, अन्यस्तु अन्यथैव वदति । ३. न कस्यचित्

(ಯಾರಿಗೂ) कश्चिन्मित्रं शत्रुर्वा । ४. तत्र चोरोऽस्तीति एके वदन्ति, नास्तीति अन्ये । ५. परमेश्वरो जीवादन्यः[1] - इति एकेषां मतम्, आत्मैव स जीवस्य इति अपरेषाम् (ಮತ್ತೆ ಕೆಲವರ) मतम् । ६. केषाञ्चिन्मते जगतः स्रष्टा नास्त्येव । ७. केषुचित् ग्रामेषु नापित (ಕ್ಷೌರಿಕ) एव न विद्यते । ८. पाटलिपुत्रे कश्चन परिव्राजकोऽस्ति ॥

೧೨೦. ಈ ವಾಕ್ಯಗಳಲ್ಲಿ यद्, किम् - ಈ ಶಬ್ದಗಳನ್ನು ಜೊತೆಯಲ್ಲಿ ಉಪಯೋಗಿಸಿದ್ದರಿಂದ ಯಾವ ವಿಶೇಷಾರ್ಥವು ಹೊರಟಿರುತ್ತದೆ ?

१. यो वा को वा भवतु, तमानय । २. यः कोऽपि तत्र गच्छतु । ३. अम्ब,[2] क्षुधिता वयम्, यत्किञ्चित् खाद्यं यच्छ । ४. या काचिदाश्रमे आगच्छति, सा शिलारूपा भविष्यति । ५. यं कमपि ब्राह्मणम् आनय, यस्मै कस्मैचन इदं कङ्कणं दास्यामि । ६. येन केनाप्युपायेन प्रसिद्धपुरुषो भव । ७. यस्मिन् कस्मिन्नपि वने वासो वरम्, न तु वैरिणां मध्ये ॥

೧. ಯಾವನಾದರೂ ಆಗಲಿ, ಅವನನ್ನು ಕರೆದುಕೊಂಡು ಬಾ. ೨. ಯಾವನಾದರೂ ಅಲ್ಲಿಗೆ ಹೋಗಲಿ. ೩. ಅಮ್ಮ, ನಾವು ಹಸಿದವರಾಗಿದ್ದೇವೆ (= ಹಸಿದಿದ್ದೇವೆ, ನಮಗೆ ಹಸಿವಾಗಿದೆ), ಏನಾದರೂ ತಿಂಡಿ ಕೊಡು. ೪. ಯಾವಳೇ ಆಶ್ರಮದಲ್ಲಿ (= ಆಶ್ರಮದೊಳಕ್ಕೆ) ಬಂದರೂ ಅವಳು ಕಲ್ಲಿನ ರೂಪದವಳಾಗುವಳು. ೫. ಯಾವನಾದರೂ ಬ್ರಾಹ್ಮಣನನ್ನು ಕರೆದುಕೊಂಡು ಬಾ, ಯಾವನಿಗಾದರೂ ಈ ಕೈಬಳೆಯನ್ನು ಕೊಡುವೆನು. ೬. ಯಾವದಾದರೊಂದು ಉಪಾಯದಿಂದ ಪ್ರಸಿದ್ಧಪುರುಷನಾಗು. ೭. ಯಾವದೇ ಕಾಡಿನಲ್ಲಾದರೂ ವಾಸವು ಉತ್ತಮ, ಆದರೆ ಶತ್ರುಗಳ ನಡುವೆ (ತಕ್ಕ)ದ್ದಲ್ಲ.

**ವಿಶೇಷ : ಯದ್, ಕಿಮ್** - ಈ ಎರಡೂ ಶಬ್ದಗಳನ್ನು ಒಟ್ಟುಗೂಡಿಸಿ ಪ್ರಯೋಗಿಸಿದೆ. ಯಾವನಾದರೂ, ಯಾವನೇ ಆಗಲಿ, ಯಾವನಾದರೂ ಸರಿಯೆ - ಎಂಬಂತೆ ಮೂರು ಲಿಂಗ

1. ಯಾವದಕ್ಕಿಂತ ಬೇರೆಯೋ ಅದರ ಹೆಸರು ಪಂಚಮೀವಿಭಕ್ತಿಯಲ್ಲಿರಬೇಕು.

2. ಈ ಶಬ್ದವನ್ನು ಅಮ್ಬಾ, ಅಮ್ಬೇ, ಅಮ್ಬಾಃ - ಎಂದು ಮಾಲಾ ಶಬ್ದದಂತೆ ನಡೆಯಿಸಿರಿ. ಸಂಬೋಧನಾವಿಭಕ್ತಿಯಲ್ಲಿ ಮಾತ್ರ ಹೇ ಅಮ್ಬ, ಅಮ್ಬೇ, ಅಮ್ಬಾಃ ॥

ದಲ್ಲಿಯೂ (Whoever, whosoever, whichever, whatever, whatsoever) ಪ್ರಯೋಗವಾಗಬಹುದು. ಇವು ಸಾಮಾನ್ಯನಿರ್ದೇಶಕ (Indefinite Demonstrative Pronouns) ಸರ್ವನಾಮಗಳು.

## ೨೦. ಕೃದಂತಗಳೂ ಕೃದಂತಾವ್ಯಯಗಳೂ

೧೨೧. ಧಾತುಗಳಿಂದಾಗುವ ವರ್ತಮಾನದ ಮತ್ತು ಭೂತಕಾಲದ ಕೃದಂತಗಳನ್ನು ಹಿಂದೆ (ಖಂ. ೫೩-೫೬) ತಿಳಿಸಿಕೊಟ್ಟಿದೆ. ಅವುಗಳ ರೂಪಗಳನ್ನು ಮತ್ತೆ ನೆನಪಿಗೆ ತರುವದಕ್ಕಾಗಿ ಇಲ್ಲಿ ಕೆಲವು ವಾಕ್ಯಗಳನ್ನು ಕೊಡುವೆವು. ಅರ್ಥವನ್ನು ಊಹಿಸಿರಿ :

१. मार्गे गच्छन्तम् एकं वृद्धम् अपश्यम् । २. तैः पठ्यमानं श्लोकं नाहं जानामि । ३. वानरयूथ इतस्ततः परिभ्रमन् देवालयमागतः । ४. स तिष्ठन् पठति श्लोकम् । ५. अनयोर्यः क्षीरं पिबन्नास्ते स मम पुत्रः । ६. अनृतं वदन् नरकं गच्छति । ७. दरिद्रान् पीडयन्न लज्जसे । ८. कालो गतः । ९. कुत आगतस्त्वम् ? १०. राज्ञि गते सचिवा (ಮಂತ್ರಿಗಳು) मन्त्रयन्ते । ११. किं कृतवान् सः ? १२. ते सर्वे स्नानार्थं ह्रदे प्रविष्टाः ॥

೧೨೨. ಈ ವಾಕ್ಯಗಳಲ್ಲಿ ಕೃದಂತಗಳು ಯಾವ ಅರ್ಥದಲ್ಲಿ ಪ್ರಯುಕ್ತವಾಗಿವೆ ? ಅವುಗಳು ಯಾವ ಲಿಂಗವಿಭಕ್ತಿವಚನಗಳಲ್ಲಿವೆ ?

१. त्वया कटः कर्तव्यः (करणीयः, कार्यः) । २. दीनजनाय वित्तं दातव्यम् (दानीयम्, देयम्) । ३. इयं माला त्वया जागरूकेण रक्षितव्या (रक्षणीया, रक्ष्या) । ४. पिता पुत्रेण वन्दितव्यः (वन्दनीयः, वन्द्यः) । ५. अनेन मार्गेण न गन्तव्यं भवद्भिः । ६. रक्षणीयाः प्राणिनां प्राणाः । ७. राज्ञा प्रजा धर्मेण परिपालयितव्याः । ८. अवश्यं युष्माभि-र्भूयोऽप्यागन्तव्यम् । ९. भो महादेव, क्षन्तव्यो मेऽपराधः । १०. असत्यं न कदापि वदनीयम् ॥

ವಿಶೇಷ : ವಿಧ್ಯಾದ್ಯರ್ಥವನ್ನು ಹೇಳುವದಕ್ಕೆ ತವ್ಯ, ಅನೀಯ, ಯ - ಎಂಬ ಕರ್ಮಣಿ ಭಾವೇಪ್ರಯೋಗದ ಕೃದಂತಗಳನ್ನು ಉಪಯೋಗಿಸುತ್ತಾರೆ. ಕರ್ಮಣಿಪ್ರಯೋಗದ ಕೃದಂತಗಳು ವಿಶೇಷಣಗಳಾದ್ದರಿಂದ ಅವಕ್ಕೆ ವಿಶೇಷ್ಯಕ್ಕೆ ತಕ್ಕಂತೆ ಲಿಂಗವಚನವಿಭಕ್ತಿಗಳಿರುತ್ತವೆ.

## ಅಭ್ಯಾಸ ೭೯

೧. "ನಿನ್ನಿಂದ ಚಾಪೆ ಮಾಡಲ್ಪಡಬೇಕು. (= ನೀನು ಚಾಪೆಯನ್ನು ಮಾಡಬೇಕು)."

೮. "ಅವಶ್ಯವಾಗಿ ನಿಮ್ಮಿಂದ ಮತ್ತೊಮ್ಮೆ ಬರೋಣಾಗಬೇಕು. (= ಅವಶ್ಯವಾಗಿ ತಾವು ಮತ್ತೊಮ್ಮೆ ಬರೋಣಾಗಬೇಕು.)"

ಈ ಮಾದರಿಗಳಂತೆ ಮೇಲಿನ ವಾಕ್ಯಗಳನ್ನು ಕನ್ನಡಿಸಿರಿ.

## ಅಭ್ಯಾಸ ೮೦

ಈ ವಾಕ್ಯಗಳನ್ನು ಕನ್ನಡಿಸಿರಿ. ಮೇಲೆ ಕೊಟ್ಟಿರುವ ವಾಕ್ಯಗಳಲ್ಲಿರುವ ಕ್ರಿಯಾಪದಗಳ ವಿಧ್ಯಾದಿರೂಪಗಳು ಇಲ್ಲಿವೆ :

१. त्वं कटं कुर्याः । २. दीनजनाय वित्तं दद्यात् । ३. त्वम् इमां मालां जागरूको रक्षेः । ४. पुत्रः पितरं वन्देत । ५. भवन्तोऽनेन मार्गेण न गच्छेयुः । ६. प्राणिनां प्राणान् रक्षेत् । ७. राजा प्रजा धर्मेण परिपालयेत् । ८. अवश्यं यूयं भूयोऽपि आगच्छेत । ९. भो महादेव, ममापराधं क्षमेथाः । १०. असत्यं न कदापि वदेत् ॥

೧೨೩. ಧಾತುಗಳಿಂದ ಆಗುವ तुम् ಪ್ರತ್ಯಯಾಂತಾವ್ಯಯ (Infinitives) ಗಳನ್ನು ಈ ಕೆಳಗಿನ ವಾಕ್ಯಗಳಲ್ಲಿ ಉಪಯೋಗಿಸಿರುತ್ತದೆ :

१. वयम् उत्सवं द्रष्टुम् आगताः । २. सेनापतिरान्श्रैः सह योद्धुं गतः । ३. इदानीं प्रस्थातुं वेला । ४. किं श्येनः शिशुं हर्तुं प्रभवेत् ? ५. 'हा हा ! हतोऽस्मि' इति फूत्कर्तुम् आरभस्व । ६. अहं विदेशं गन्तुमिच्छामि । ७. एवं

न वक्तुमर्हसि । ८. न युक्तं तत्र गन्तुम् । ९. किमियं वित्तमात्रा अपहर्तुमिष्यते त्वया ? १०. तत् तुभ्यं कथयितुं न शक्तोऽहम् ॥

೧. ನಾವು ಉತ್ಸವವನ್ನು ನೋಡುವದಕ್ಕೆ ಬಂದೆವು. ೨. ಸೇನಾಪತಿಯು ಆಂಧ್ರರೊಡನೆ ಯುದ್ಧಮಾಡುವದಕ್ಕೆ ಹೋದನು. ೩. ಈಗ ಹೊರಡುವದಕ್ಕೆ (ಹೊರಡುವ) ಸಮಯ. ೪. ಗಿಡುಗನು ಮಗುವನ್ನು ಹೊತ್ತುಕೊಂಡುಹೋಗಲು ಶಕ್ತವಾದೀತೆ (= ಗಿಡುಗನಿಂದ ಹೊತ್ತುಕೊಂಡುಹೋಗುವದಕ್ಕಾದೀತೆ) ? ೫. 'ಅಯ್ಯೊ ಅಯ್ಯೊ ! ಕೆಟ್ಟೆ' ಎಂದು ಕೂಗಿಕೊಳ್ಳುವದಕ್ಕೆ ಪ್ರಾರಂಭಿಸು. ೬. ನಾನು ವಿದೇಶಕ್ಕೆ ಹೋಗಲಿಚ್ಛಿಸುತ್ತೇನೆ. ೭. (ನೀನು) ಹೀಗೆ ಹೇಳಬಾರದು. ೮. ಅಲ್ಲಿಗೆ ಹೋಗುವದು ಯುಕ್ತವಲ್ಲ. ೯. ಈ ಹಣದ ಗಂಟು ನಿನ್ನಿಂದ ಕದ್ದೊಯ್ಯಲಿಚ್ಛಿಸಲ್ಪಡುತ್ತಿದೆಯೊ (= ಈ ಹಣದ ಗಂಟನ್ನು ಕದ್ದೊಯ್ಯಬೇಕೆಂದಿರುವೆಯಾ) ? ೧೦. ಅದನ್ನು ನಿನಗೆ ಹೇಳಲು ನಾನು ಶಕ್ತನಲ್ಲ (= ಅದನ್ನು ನಿನಗೆ ಹೇಳಲಾರೆ).

ವಿಶೇಷ : ಧಾತುವಿಗೆ **ತುಮ್** ಪ್ರತ್ಯಯವು ಸೇರಿದರೆ 'ಈ ಕೆಲಸವನ್ನು ಮಾಡುವದಕ್ಕೆ' 'ಈ ಕೆಲಸವನ್ನು ಮಾಡುವದು' ಎಂಬರ್ಥದ ಅವ್ಯಯವಾಗುವದು. (Noun Infinitive, or Gerundial Infinitive) 'ಮಾಡುವದಕ್ಕೆ' ಎಂಬರ್ಥವಿರುವಾಗ ಕಾಲ, ಶಕ್ತಿ, ಯೋಗ್ಯತೆ, ಇಚ್ಛೆ - ಇವುಗಳನ್ನು ಹೇಳುವ ಮಾತುಗಳ ಜೊತೆಗೆ ಇವನ್ನು ಪ್ರಯೋಗಿಸುವರು. ಉದಾ : **'ಗನ್ತುಮರ್ಹಸಿ, ಗನ್ತುಮಿಚ್ಛತಿ, ಗನ್ತುಂ ಶಕ್ಯತೇ'**.

೧೨೪. ಈ ವಾಕ್ಯಗಳಲ್ಲಿ, **त्वा**,[1] **य** - ಎಂಬ ಪ್ರತ್ಯಯಗಳಿರುವ ಕೃದಂತಾವ್ಯಯಗಳ ಅರ್ಥವೇನು ?

**१. पाणी पादौ क्षालयित्वा (प्रक्षाल्य), फलं खादामि । २. क्षणं तत्र स्थित्वा (अवस्थाय) व्रज । ३. एष चित्राङ्गो मार्गे गत्वा (आगत्य) किञ्चित् पल्वलम् आसाद्य** (ಕುಂಟೆಯನ್ನು ಪಡೆದುಕೊಂಡು, ಕುಂಟೆಗೆ ಹೋಗಿ) **तीरे निश्चेतनो भूत्वा पततु ॥**

ವಿಶೇಷ : ಏಕಕರ್ತೃಕವಾದ ಅನೇಕಕ್ರಿಯೆಗಳಿದ್ದರೆ ಮೊದಲು ನಡೆದ ಕ್ರಿಯೆಯನ್ನು

---

1. ತ ಪ್ರತ್ಯಯದ ಕೃದಂತವಿಶೇಷಣಗಳಂತೆಯೇ **ತುಮ್**, **ತ್ವಾ** ಪ್ರತ್ಯಯಾಂತಾವ್ಯಯಗಳಲ್ಲಿಯೂ ಕೆಲವಕ್ಕೆ ಇ ಸೇರುತ್ತದೆ, ಕೆಲವಕ್ಕೆ ಇಲ್ಲ. ಉದಾ : **ಭೂತಮ್, ಚೋರಿತಮ್ ; ಗನ್ತುಮ್, ಅನುಭವಿತುಮ್ ; ಭೂತ್ವಾ, ಕ್ಷಾಲಯಿತ್ವಾ** ॥

ಹೇಳುವದಕ್ಕೆ ತ್ವಾ ಪ್ರತ್ಯಯದ ಅವ್ಯಯ(Gerund)ವನ್ನುಪಯೋಗಿಸುವರು. ಅದಕ್ಕೆ ಉಪಸರ್ಗವೂ ಸೇರಿದ್ದರೆ ತ್ವಾ ಪ್ರತ್ಯಯದ ಬದಲು ಯ, ಹ್ರಸ್ವಸ್ವರಾಂತಧಾತುವಿಗೆ ತ್ಯ ಪ್ರತ್ಯಯವು ಬರುತ್ತದೆ. ಉದಾ : ಭೂತ್ವಾ, ಅನುಭೂಯ ; ನತ್ವಾ, ಪ್ರಣಮ್ಯ, ಪ್ರಣತ್ಯ ; ಪೀತ್ವಾ, ನಿಪೀಯ.

## ೨೧. ಕೆಲವು ವ್ಯಂಜನಾಂತಶಬ್ದಗಳು

## (ಶ, ಷ, ಸಾಂತ ಶಬ್ದಗಳು)

೧೨೫. ಈ ವಾಕ್ಯಗಳಲ್ಲಿ ಶ-ಷ-ಕಾರಾಂತಶಬ್ದಗಳ ಪ್ರಥಮೈಕವಚನದ ರೂಪವು ಹೇಗೆ ಆಗಿದೆ ? ವ್ಯಂಜನಾಂತಪ್ರತ್ಯಯಗಳು ಪರವಾದಾಗ ಶಬ್ದದಲ್ಲಿ ಯಾವ ಮಾರ್ಪಾಡಾಗಿದೆ ?

**१. एषु विट्सु (विट्त्सु) स एक एव धनिको विट् । २. अन्यैर्विड्भिः कैश्चित् तस्य धनस्य भागो लब्धः । ३. एते विशः कं मृगयन्ते** (ಹುಡುಕುತ್ತಾರೆ) **? ४. हे विशः, नैषा दिक् । ५. कस्यां दिशि प्रधाविताश्चोराः ? ६. किराताः सर्वाभ्यो दिग्भ्यः आगच्छन्तो दृश्यन्ते । ७. कासु कासु दिक्षु ऋषयो वसन्ति ? ८. इन्द्रोऽसुराणां द्विट्, शुक्रस्तु तेषां पुरोहितः । ९. तत्र कथं कचो द्विट्सु (द्विट्त्सु) मध्ये न्यवसत् ? १०. तस्यै दिशे नमः ॥**

೧. ಈ ವೈಶ್ಯರುಗಳಲ್ಲಿ ಅವನೊಬ್ಬನೇ ಧನಿಕನಾದ ವೈಶ್ಯನು. ೨. ಬೇರೆಯ ಕೆಲವರು ವೈಶ್ಯರಿಂದ ಅವನ ಧನದ ಭಾಗವು ಪಡೆಯಲ್ಪಟ್ಟಿತು. (= ಬೇರೆಯ ಕೆಲವರು ವೈಶ್ಯರಿಗೆ ಅವನ ಧನದ ಭಾಗವು ದೊರಕಿತು.) ೩. ಈ ವೈಶ್ಯರು ಯಾವನನ್ನು ಹುಡುಕುತ್ತಿದಾರೆ ? ೪. ಎಲೈ ವೈಶ್ಯರೆ, ಇದಲ್ಲ, ದಿಕ್ಕು, ೫. ಯಾವ ದಿಕ್ಕಿನಲ್ಲಿ ಕಳ್ಳರು ಓಡಿದರು ? ೬. ಕಿರಾತರು ಎಲ್ಲಾ ದಿಕ್ಕುಗಳಿಂದಲೂ ಬರುವವರಾಗಿ ಕಾಣಿಸುತ್ತಿದಾರೆ ? (= ಬರುತ್ತಿರುವದು ಕಾಣಿಸುತ್ತಿದೆ). ೭. ಯಾವ ಯಾವ ದಿಕ್ಕುಗಳಲ್ಲಿ ಋಷಿಗಳು ವಾಸಮಾಡುತ್ತಿದಾರೆ ? ೮. ಇಂದ್ರನು ಅಸುರರ ಹಗೆ. ಶುಕ್ರನೊ, ಅವರ ಪುರೋಹಿತ. ೯. ಅಲ್ಲಿ (= ಹೀಗಿರುವಲ್ಲಿ) ಕಚನು ಹೇಗೆ ಹಗೆಗಳ ನಡುವೆ ವಾಸಮಾಡಿಕೊಂಡಿದ್ದನು ? ೧೦. ಆ ದಿಕ್ಕಿಗೆ ನಮಸ್ಕಾರ !

**ವಿಶೇಷ** : ಶಬ್ದಗಳ ಕೊನೆಯಲ್ಲಿರುವ ಶಷಕಾರಗಳಿಗೆ ಸ್ವರಾದಿಪ್ರತ್ಯಯಗಳು

ಪರವಾಗದೆ ಇರುವಾಗ ಸಾಮಾನ್ಯವಾಗಿ ಟಕಾರವಾಗುತ್ತವೆ. ಅಂಥ ಶಬ್ದಗಳು **विट्** (ಪು.) ಶಬ್ದದಂತೆ ನಡೆಯುತ್ತವೆ. ಕೆಲವು ಶಬ್ದಗಳ ಶಷಕಾರಗಳು ಮಾತ್ರ ಕಕಾರಾಂತ ವಾಗುವವು ; ಅಂಥವುಗಳನ್ನು **दिक्** (ಸ್ತ್ರೀ.) ಶಬ್ದದಂತೆ ನಡೆಯಿಸಬೇಕು.

### (೧) **विट्** - ವೈಶ್ಯ

विट् विशौ विशः । हे विट् विशौ विशः । विशम् विशौ विशः । विशा विड्भ्याम् विड्भिः । विशे विड्भ्याम् विड्भ्यः। विशः विड्भ्याम् विड्भ्यः । विशः विशोः विशाम् । विशि विशोः विट्सु (विट्त्सु) ॥

[ **द्विट्** (ಪು.) - ಹಗೆ, **त्विट्** (ಸ್ತ್ರೀ.) - ಕಾಂತಿ. ಈ ಷಕಾರಾಂತಶಬ್ದಗಳನ್ನು '**ವಿಟ್**' ಶಬ್ದದಂತೆ ನಡೆಯಿಸಿರಿ. ಆ ಶಬ್ದದಲ್ಲಿ ಶಕಾರವಿರುವಲ್ಲಿ ಇಲ್ಲಿ ಷಕಾರವಿರಬೇಕು.]

### (೨) **दिक्** - ದಿಕ್ಕು

दिक् दिशौ दिशः । हे दिक् दिशौ दिशः । दिशम् दिशौ दिशः । दिशा दिग्भ्याम् दिग्भिः । दिशे दिग्भ्याम् दिग्भ्यः । दिशः दिग्भ्याम् दिग्भ्यः । दिशः दिशोः दिशाम् । दिशि दिशोः दिक्षु ॥

೧೨೬. **किम्, इदम्, एतत्, यत्, तत्, मत्, अस्मत्, त्वत्, युष्मत्, भवत्** - ಇವುಗಳಿಂದ ಉತ್ಪನ್ನವಾಗುವ ಪ್ರಕಾರವಾಚಕಗಳನ್ನು ಇಲ್ಲಿ ತೋರಿಸಿದೆ. ಇವುಗಳಲ್ಲಿ ಶಕಾರಾಂತ ಶಬ್ದಗಳನ್ನು '**दिक्**' ಶಬ್ದದಂತೆ ನಡೆಯಿಸಬೇಕು.

#### ಶಕಾರಾಂತ

**किम्** - कीदृक् (कीदृशौ कीदृशः) - ಇತ್ಯಾದಿ. कीदृशः ? कीदृक्षः ? ಎಂಥ ? (ಅಕಾರಾಂತ)

**इदम्** - ईदृक् (ईदृशौ ईदृशः) । ईदृशः, ईदृक्षः - ಇಂಥ.

**एतत्** - एतादृक् (एतादृशौ एतादृशः) । एतादृशः, एतादृक्षः - ಇಂಥ.

**यत्** - यादृक् (यादृशौ यादृशः) । यादृशः, यादृक्षः ॥ ಎಂಥ.

तत् - तादृक् (तादृशौ तादृशः) । तादृशः, तादृक्षः ।। ಅಂಥ.

मत् - मादृक् (मादृशौ मादृशः) । मादृशः, मादृक्षः ।। ನನ್ನಂಥ.

अस्मत् - अस्मादृक् (अस्मादृशौ अस्मादृशः) । अस्मादृशः, अस्मादृक्षः ।। ನಮ್ಮಂಥ.

त्वम् - त्वादृक् (त्वादृशौ त्वादृशः) । त्वादृशः, त्वादृक्षः ।। ನಿನ್ನಂಥ.

युष्मत् - युष्मादृक् (युष्मादृशौ युष्मादृशः) । युष्मादृशः, युष्मादृक्षः ।। ನಿಮ್ಮಂಥ.

भवत् - भवादृक् (भवादृशौ भवादृशः) । भवादृशः, भवादृक्षः ।। ನಿನ್ನಂಥ.

**ವಿಶೇಷ** : (1) ಇವುಗಳೆಲ್ಲ ಸ್ತ್ರೀಲಿಂಗದಲ್ಲಿ ಈಕಾರಾಂತಗಳಾಗುವವು. **ಕೀದೃಶೀ, ಈದೃಶೀ, ಏತಾದೃಶೀ** - ಇತ್ಯಾದಿ.

(2) ನಪುಂಸಕಲಿಂಗದಲ್ಲಿ **ಕೀದೃಕ್, ಕೀದೃಶೀ, ಕೀದೃಂಶಿ** - ಇತ್ಯಾದಿ.

## ಅಭ್ಯಾಸ ೮೧

ಇಲ್ಲಿ ಕೊಟ್ಟಿರುವ ಸಂಸ್ಕೃತವಾಕ್ಯಗಳನ್ನು ಕನ್ನಡಿಸಿರಿ. ಕನ್ನಡವಾಕ್ಯಗಳಿಗೆ ಕೊಡಿದ ಮಟ್ಟಿಗೆ ಶಕಾರಾಂತ ಪ್ರಕಾರವಾಚಕಗಳನ್ನುಪಯೋಗಿಸಿ ಸಂಸ್ಕೃತಾನುವಾದವನ್ನು ಮಾಡಿರಿ :

१. कीदृशो रामः ? कीदृशी सीता ? कीदृशं तयोर्दाम्पत्यम् ? २. कीदृश्यस्ता मालाः ? कीदृशास्ते पुरुषाः ? ३. एतादृंशी रत्नानि न मया कुत्रापि दृष्टानि । ४. तादृक्षानां महात्मनां दर्शनमेव पुण्यम् । ५. मादृशां दरिद्राणां कथं तत्र गतिः (ಹೋಗುವದು) ? ६. एतादृक्षु स्थलेषु न वसतिः कार्या । ७. यादृशो यक्षः, तादृशो बलिः । ८. त्वादृक्षा अपि सन्ति केचित् तत्र ।।

೧. ಇಂಥ ಸ್ನೇಹಿತರಿಂದ ಏನು (ಆದೀತು) ? ೨. ಆ ಸಾಹುಕಾರನ ಮನೆ ಎಂಥದ್ದು ? ೩. ಅಂಥ ಹಣ್ಣುಗಳು ಎಲ್ಲಿ ಸಿಕ್ಕಿಯಾವು ? ೪. ಎಂಥ ರಾಜನೋ ಅಂಥ ಪ್ರಜೆಗಳು. ೫. ಆ ಸ್ತ್ರೀಯರು ಎಂಥವರೆಂಬುದನ್ನು ಬಲ್ಲೆಯ ? ೬. ನಿನ್ನಂಥ ಮೂರ್ಖರೇ ಅಲ್ಲಿ ಬಹಳ. ೭. ನನ್ನಂಥವರಲ್ಲಿ ಅಂಥ ಸಾಮರ್ಥ್ಯವು ಎಲ್ಲಿದ್ದೀತು ?

೧೨೭. ಈ ವಾಕ್ಯಗಳಲ್ಲಿ ಸಕಾರಾಂತಶಬ್ದಗಳ ರೂಪಗಳು ಹೇಗೆ ಆಗಿವೆ ಎಂಬುದನ್ನು ಲಕ್ಷಿಸಿರಿ. ವಾಕ್ಯಗಳನ್ನು ಕನ್ನಡಿಸಿರಿ :

१. चन्द्रमाः (ಚಂದ್ರನು) शोभते आकाशे । २. भो चन्द्रमः, तवैव भासा (ಬೆಳಕಿನಿಂದ) रात्र्यां तमो नश्यति । ३. चन्द्रमसं कुतूहलेन निरीक्षन्ते जनाः । ४. चन्द्रमसा सर्वेषां मनांसि आह्लादितानि भवन्ति । ५. किं द्वौ चन्द्रमसौ विद्येते ? ६. द्वाभ्यां चन्द्रमोभ्यां त्रिभिर्वा चन्द्रमोभिः किमस्ति प्रयोजनम् ? ७. चन्द्रमसि स्थितं मे मनः । ८. अचक्षुषो न पश्यन्ति चन्द्रमसम् ; नापि (ಇಲ್ಲವೂ ಇಲ್ಲ) तेषां चन्द्रमसा प्रयोजनम् । ९. इन्द्रस्य सहस्रचक्षूंषि विद्यन्ते ॥

ವಿಶೇಷ : ಅಸ್ ಕೊನೆಯಲ್ಲಿರುವ ಸಕಾರಾಂತಗಳಿಗೆ ಪ್ರಥಮೈಕವಚನದಲ್ಲಿ 'ಅಸ್' ಎಂಬುದರ ಅಕಾರಕ್ಕೆ ದೀರ್ಘ, ಸಕಾರಕ್ಕೆ ವಿಸರ್ಗ, ಮೃದುವ್ಯಂಜನಾದಿಪ್ರತ್ಯಯಗಳು ಪರವಾದಾಗ ಸಕಾರವು ವಿಸರ್ಗವಾಗಿ ಓ ಆಗುತ್ತದೆ.

चन्द्रमस् ಶಬ್ದದ ರೂಪಗಳು

| | | | | | |
|---|---|---|---|---|---|
| चन्द्रमाः | चन्द्रमसौ | चन्द्रमसः | चन्द्रमसे | चन्द्रमोभ्याम् | चन्द्रमोभ्यः |
| हे चन्द्रमः | ,, | ,, | चन्द्रमसः | ,, | ,, |
| चन्द्रमसम् | ,, | ,, | ,, | चन्द्रमसोः | चन्द्रमसाम् |
| चन्द्रमसा | चन्द्रमोभ्याम् | चन्द्रमोभिः | चन्द्रमसि | ,, | चन्द्रमस्सु |

(೧) वेधस् (ಪು.) ಬ್ರಹ್ಮ. ಇದನ್ನು ಹೀಗೆಯೇ ನಡೆಯಿಸಿರಿ. ಸ್ತ್ರೀಲಿಂಗದ ಸಕಾರಾಂತಗಳೂ ಹೀಗೆಯೇ.

(೨) अचक्षुष् (ಪು. ಸ್ತ್ರೀ.) ಕಣ್ಣಿಲ್ಲದ. ಇದಕ್ಕೆ १. अचक्षुः अचक्षुषौ अचक्षुषः । ३. अचक्षुषा अचक्षुर्भ्याम् अचक्षुर्भिः । ७. अचक्षुषि अचक्षुषोः अचक्षुःसु ॥

(ನಪುಂಸಕಲಿಂಗದಲ್ಲಿ १. चक्षुः चक्षुषी चक्षूंषि । ३. चक्षुषा चक्षुर्भ्याम् चक्षुर्भिः । ७. चक्षुषि चक्षुषोः चक्षुःसु ॥)

(೩) १. मनः मनसी मनांसि । ३. मनसा मनोभ्याम् मनोभिः । ७. मनसि मनसोः मनस्सु ॥

೧೨೮. ಒಂದಕ್ಕಿಂತ ಒಂದು ಹೆಚ್ಚು (Comparative degree), ಎಲ್ಲಕ್ಕಿಂತಲೂ ಹೆಚ್ಚು (Superlative degree) - ಇವುಗಳನ್ನು ಸಂಸ್ಕೃತದಲ್ಲಿ ಯಥಾಕ್ರಮವಾಗಿ 'तर', 'ईयस्' ಎಂಬ ಪ್ರತ್ಯಯಗಳಿಂದಲೂ, 'तम', इष्ठ' ಎಂಬ ಪ್ರತ್ಯಯಗಳಿಂದಲೂ ತಿಳಿಸುವದುಂಟು :

१. अयम् अनयोरतिशयेन लघुः (लघुतरः) ॥ ಇವನು ಇವರಿಬ್ಬರಲ್ಲಿ ಹೆಚ್ಚು ಹಗುರ.

अयमेषाम् अतिशयेन लघुः (लघुतमः) ॥ ಇವನು ಇವರುಗಳಲ್ಲೆಲ್ಲ ಹಗುರ.

२. न च तस्मात् प्रियतरोऽस्ति भगवतः । ಅವನಿಗಿಂತ ಭಗವಂತನಿಗೆ ಹೆಚ್ಚು ಪ್ರಿಯನಿಲ್ಲ.

सर्वेष्वेतेषु को गरिष्ठः ? ಇವರಲ್ಲೆಲ್ಲ ಹೆಚ್ಚಿನವನು ಯಾರು ?

ಅದಕ್ಕಿಂತ ಇದು ಹೆಚ್ಚು (ಈ ಸ್ವಭಾವವುಳ್ಳದ್ದು) ಎಂದು ಹೇಳುವಾಗ, ಯಾವದಕ್ಕಿಂತ ಹೆಚ್ಚು ಎಂದು ತಿಳಿಸುವೆವೋ ಅದಕ್ಕೆ ಪಂಚಮಿಯೂ, ಎಲ್ಲದರಲ್ಲಿಯೂ ಹೆಚ್ಚಿನದು ಎಂಬುದನ್ನು ತಿಳಿಸುವದಕ್ಕೆ ಸಪ್ತಮಿಯೂ ಬರುವವು.

೧೨೯. तर-तम ಪ್ರತ್ಯಯಗಳಿಲ್ಲದೆಯೂ ಕೇವಲ ಗುಣವನ್ನು ಅಥವಾ ಸ್ವಭಾವವನ್ನು ಹೇಳಿಯೂ ತರ-ತಮಗಳ ಅರ್ಥವನ್ನು ತಿಳಿಯಿಸಬಹುದು. ಹೇಗೆಂದರೆ :

१. भाषासु मुख्या मधुरा दिव्या गीर्वाणभारती ॥ ಇಲ್ಲಿ ಸಂಸ್ಕೃತಭಾಷೆ ಎಲ್ಲಕ್ಕಿಂತಲೂ ಹೆಚ್ಚು ಮಧುರ ಎಂಬರ್ಥವನ್ನು तम ಪ್ರತ್ಯಯವಿಲ್ಲದೆಯೇ ತಿಳಿಯಿಸಿದೆ.

(२) गिरेरपि अप्रकम्प्योऽयम् ॥ ಇಲ್ಲಿ ಬೆಟ್ಟಕ್ಕಿಂತಲೂ ಹೆಚ್ಚು ಅಲುಗಾಡದವನು ಎಂಬರ್ಥವನ್ನು तर ಪ್ರತ್ಯಯವಿಲ್ಲದೆಯೇ ತಿಳಿಯಿಸಿದೆ.

೧೩೦. (೧) ವರ್ಗೀಯವ್ಯಂಜನಾಂತವಾದ ವಿಶೇಷಣಗಳಿಗೆ तर-तम ಗಳನ್ನು

ಸೇರಿಸುವಾಗ ಅವು ತೃತೀಯಾದ್ವಿವಚನದಲ್ಲಿ ತಮಗೆ ಬರುವ ರೂಪವನ್ನು ಧರಿಸುವವು. ಉದಾ : विद्वस् (विद्वत्-भ्याम्) : विद्वत्तरः, विद्वत्तमः । प्राच् : प्राक्तरः, प्राक्तमः । धनिन् : धनितरः, धनितमः ॥

(೨) ಕ್ರಿಯಾಪದಗಳಿಗೂ ಕ್ರಿಯಾವಿಶೇಷಣಾವ್ಯಯಗಳಿಗೂ ಸೇರುವಾಗ तर-तम ಪ್ರತ್ಯಯಗಳ ಕೊನೆಯ ಅಕಾರವು ದೀರ್ಘವಾಗುವದು. ಉದಾ : **पचतितराम्** (ಇನ್ನೂ ಹೆಚ್ಚಾಗಿ ಬೇಯಿಸುತ್ತಾನೆ), **पचतितमाम्** (ಎಲ್ಲಕ್ಕಿಂತಲೂ ಹೆಚ್ಚಾಗಿ ಬೇಯಿಸುತ್ತಾನೆ) ; **उच्चैस्तराम्** (ಇನ್ನೂ ಎತ್ತರವಾಗಿ), **उच्चैस्तमाम्** (ಎಲ್ಲಕ್ಕಿಂತ ಎತ್ತರವಾಗಿ).

(೩) तर, तम - ಇವನ್ನು ईयस्, इष्ठ ಪ್ರತ್ಯಯಗಳಿಗೆ ಸೇರಿಸಿ 'ಬಹಳ' ಎಂಬರ್ಥದಲ್ಲಿಯೂ ಉಪಯೋಗಿಸುವರು.

## ಅಭ್ಯಾಸ ೮೨

ಕನ್ನಡಿಸಿ :

**१. अयं शुक्लः खगः, असौ तु शुक्लतरः । २. काकः कृष्णः, पिकोऽपि कृष्णः ; एकः कृष्णः, अन्यः कृष्णतरः इति चास्ति तारतम्यं तयोः । ३. कृष्णार्जुनयोः संवादं यो भक्तजनेषु कथयति स एव मनुष्येषु भगवतः प्रियकृत्तमः । ४. न तस्मात् भगवतः प्रियतरोऽस्ति । ५. एषु ब्राह्मणेषु विद्वत्तमः कतमः ? ६. तत्रैकः शिशुः क्रन्दति स्म उच्चैस्तमाम् । ७. तत्र ब्राह्मणानां न प्रवेशः, नतरां प्राचीनसंप्रदायस्थानाम्** (ಪೂರ್ವದ ಸಂಪ್ರದಾಯದವರು) **। ८. किं हिमाचल एव पर्वतेषु उच्चैस्तमः ?**

## ಅಭ್ಯಾಸ ೮೩

ಈ ವಾಕ್ಯಗಳಲ್ಲಿ ತರ, ತಮ, ಈಯಸ್ - ಈ ಪ್ರತ್ಯಯಗಳನ್ನು ಹೋಲಿಕೆಗೆ ಬಳಸಿರುವ ಸ್ಥಳಗಳನ್ನೂ ಹೋಲಿಕೆಯಿಲ್ಲದೆ ಬಳಸಿರುವ ಸ್ಥಳಗಳನ್ನೂ ಹೇಳಿ : ಎಲ್ಲಿ ಹೋಲಿಕೆಗೂ ಈ ಪ್ರತ್ಯಯಗಳಿಲ್ಲ ?

१. त्वया सुन्दरतरं कृतम् । २. शीघ्रतरम् आगच्छ । ३. वन्येषु मृगेषु सिंह एव उच्चैस्तमां गर्जति । ४. नारिकेल एव तेषां उच्चैस्तमः । ५. गिरिर्महान्, गिरेरपि समुद्रो महान् । ६. प्रासादस्य समीपे रम्यतरम् उद्यानमस्ति । ७. अल्पीयसा कारणेन ताडितोऽहम् । ८. भो जनाः, भूयसे श्रेयसे यतध्वम् ॥

೧೩೧. ईयस्, इष्ठ - ಎಂಬ ಪ್ರತ್ಯಯಗಳನ್ನು ತಾರತಮ್ಯವನ್ನು ತಿಳಿಸುವದಕ್ಕೆ ಗುಣವಚನಗಳಿಗೆ ಮಾತ್ರ ಉಪಯೋಗಿಸಲಾಗುತ್ತದೆ.

ईयस् ಪ್ರತ್ಯಯವುಳ್ಳ ಶಬ್ದಗಳ ರೂಪಗಳು ಹೀಗಾಗುತ್ತವೆ :

| | | | | | |
|---|---|---|---|---|---|
| श्रेयान् | श्रेयांसौ | श्रेयांसः | श्रेयसे | श्रेयोभ्याम् | श्रेयोभ्यः |
| हे श्रेयन् | ,, | ,, | श्रेयसः | ,, | ,, |
| श्रेयांसं | ,, | श्रेयसः | ,, | श्रेयसोः | श्रेयसाम् |
| श्रेयसा | श्रेयोभ्याम् | श्रेयोभिः | श्रेयसि | ,, | श्रेयःसु |

ಇಲ್ಲಿ ಕಪ್ಪಕ್ಷರ (antique) ದಲ್ಲಿರುವವುಗಳನ್ನು ಬಿಟ್ಟರೆ ಉಳಿದವುಗಳೆಲ್ಲ ಚನ್ದ್ರಮಸ್ ಶಬ್ದದಂತೆಯೇ ರೂಪಗಳು. ನಪುಂಸಕದಲ್ಲಿ ಶ್ರೇಯಃ, ಶ್ರೇಯಸೀ, ಶ್ರೇಯಾಂಸಿ ಎಂದು ಮುಂತಾಗಿ ಮನಃ ಶಬ್ದದಂತೆ.

೧೩೨. ಈ ಕೆಳಗೆ ಕೊಟ್ಟಿರುವ ಶಬ್ದಗಳಿಗೆ 'ईयस्', 'इष्ठ' ಪ್ರತ್ಯಯಗಳು ಸೇರುವಾಗ

(೧) ಪ್ರಾತಿಪದಿಕದ (ಮೂಲಶಬ್ದದ) ಕೊನೆಯ ಸ್ವರವೂ (ಅದರ ಮುಂದಿರಬಹುದಾದ ವ್ಯಂಜನವೂ) ಲೋಪವಾಗುವದು :

अणुः अणीयान् अणिष्ठः । महान् महीयान् महिष्ठः ॥
लघुः लघीयान् लघिष्ठः । पटुः पटीयान् पटिष्ठः ॥

(೨) ವ್ಯಂಜನವು ಹಿಂದಿರುವ ಋಕಾರವುಳ್ಳ ಶಬ್ದಗಳಲ್ಲಿ ಋಕಾರಕ್ಕೆ ರಕಾರವು ಬರುವದು :

कृशः क्रशीयान् क्रशिष्ठः । दृढः द्रढीयान् द्रढिष्ठः ॥
मृदुः म्रदीयान् म्रदिष्ठः । पृथुः प्रथीयान् प्रथिष्ठः ॥

(೩) ಈ ಕೆಳಗಿರುವ ಕೆಲವು ಶಬ್ದಗಳಿಗೆ ಬಂದಿರುವ ईयस्, इष्ठ ಪ್ರತ್ಯಯಗಳ ರೂಪಗಳನ್ನು ನೆನಪಿಡಬೇಕು :

अन्तिकः नेदीयान् नेदिष्ठः । अल्पः अल्पीयान् अल्पिष्ठः ಅಥವಾ कनीयान् कनिष्ठः । वृद्धः वर्षीयान् वर्षिष्ठः ಅಥವಾ ज्यायान् ज्येष्ठः । क्षिप्रः क्षेपीयान् क्षेपिष्ठः । क्षुद्रः क्षोदीयान् क्षोदिष्ठः ।।

गुरुः गरीयान् गरिष्ठः । दीर्घः द्राघीयान् द्राघिष्ठः ।।

दूरः दवीयान् दविष्ठः । प्रशस्यः श्रेयान् श्रेष्ठः । प्रियः प्रेयान् प्रेष्ठः ।।

बहुः भूयान् भूयिष्ठः । स्थूलः स्थवीयान् स्थविष्ठः ।।

(೪) ಕೆಲವು ವೇಳೆ ईयस्, इष्ठ ಪ್ರತ್ಯಯಗಳ ಜೊತೆಯಲ್ಲಿಯೇ तर, तम ಪ್ರತ್ಯಯಗಳಿರಬಹುದು : पापीयस्तरः, श्रेष्ठतमः ।।

೧೩೩. वस्, इवस् ಅಂತಹ ಶಬ್ದಗಳ ರೂಪಗಳನ್ನು ಈ ಕೆಳಗೆ ಉದಾಹರಿಸಿದೆ.

विद्वस् - ವಿದ್ವಾಂಸನು, ಬಲ್ಲವನು.

| | | | | | |
|---|---|---|---|---|---|
| विद्वान् | विद्वांसौ | विद्वांसः | विदुषे | विद्वद्भ्याम् | विद्वद्भ्यः |
| हे विद्वन् | ,, | ,, | विदुषः | ,, | ,, |
| विद्वांसम् | ,, | विदुषः | ,, | विदुषोः | विदुषाम् |
| विदुषा | विद्वद्भ्याम् | विद्वद्भिः | विदुषि | ,, | विद्वत्सु |

उपेयिवान् - ಹತ್ತಿರಕ್ಕೆ ಬಂದವನು, ಸೇರಿದವನು.

| | | | | | |
|---|---|---|---|---|---|
| उपेयिवान् | उपेयिवांसौ | उपेयिवांसः | उपेयुषे | उपेयिवद्भ्याम् | उपेयिवद्भ्यः |
| उपेयिवन् | ,, | ,, | उपेयुषः | ,, | ,, |
| उपेयिवांसम् | ,, | उपेयुषः | ,, | उपेयुषोः | उपेयुषाम् |
| उपेयुषा | उपेयिवद्भ्याम् | उपेयिवद्भिः | उपेयुषि | ,, | उपेयिवत्सु |

ವಿಶೇಷ : ಧಾತುಗಳಿಂದ ಬಂದಿರುವ ವಸ್, ಇವಸ್ ಅಂತವಾದ ಸಕಾರಾಂತ ಭೂತಕೃದಂತ

ಗಳಿಗೆ ವಿದ್ವಸ್ ಶಬ್ದದಂತೆ ರೂಪಗಳಾಗುವವು. ಇವಕ್ಕೆ ದ್ವಿತೀಯಾ ದ್ವಿವಚನದವರೆಗೆ (**ಈಯಸ್** ಪ್ರತ್ಯಯಾಂತಶಬ್ದಗಳಂತೆಯೇ) ಸಕಾರದ ಹಿಂದೆ ನಕಾರವು (ಅದಕ್ಕೆ ಅನುಸ್ವಾರವು) ಬರುತ್ತದೆ. ಉದಾ : **ಉಪೇಯಿವಾಂಸೌ । ಜಗ್ಮಿವಾಂಸೌ** (ಹೋದವರು) । ದ್ವಿತೀಯಾ ಬಹುವಚನದಿಂದ ಮುಂದಕ್ಕೆ ಸ್ವರಾದಿಪ್ರತ್ಯಯಗಳು ಸೇರುವಾಗ ವಕಾರಕ್ಕೆ ಉಕಾರಾದೇಶ, ವ್ಯಂಜನಾದಿಪ್ರತ್ಯಯಗಳ ಹಿಂದೆ ಸಕಾರಾದೇಶ. **ಜಗ್ಮುಷಃ, ತಸ್ಥುಷಃ** (ನಿಂತವರನ್ನು), **ಸೇದಿವದ್ಭಿಃ** (ಕೂತವರಿಂದ) ಸಪ್ತಮೀಬಹುವಚನದಲ್ಲಿ ಆ ಸಕಾರವು ತಕಾರವಾಗುತ್ತದೆ - ವಿದ್ವತ್ಸು

## ಅಭ್ಯಾಸ ೮೪

ಈ ವಾಕ್ಯಗಳಲ್ಲಿ ವಸ್, ಇವಸ್ - ಅಂತದಲ್ಲಿರುವ ಶಬ್ದಗಳ ವಿಭಕ್ತಿವಚನಗಳನ್ನು ಹೇಳಿ :

कस्यचिद् **विदुषो** द्वौ पुत्रौ स्तः । स च **विद्वान्** उभावपि तौ आदरेण शास्त्रम् अध्यापयति 'अहमिव इमावपि **विद्वांसौ** स्याताम्' इति । परं तयोर्ज्यायान् विलासलम्पटो नाम पुत्रो न सम्यक् पाठम् अभ्यस्यति । चिन्तयति च 'मया न केवलं **विदुषा** भाव्यम्, न हि वित्तहीने **विदुषि** जनानां गौरवं वर्तते' इति । अतः स **विदुषां** मध्ये न कदापि तिष्ठति, **विद्वद्भिः** सह आलापमपि न करोति ; पाठकालेऽपि तदा तदा बहिरेव सञ्चरति । कनीयांस्तु विद्यारसिको नाम पुत्रः श्रद्धया पाठाभ्यासपरः स्वल्पेनैव कालेन महान् पण्डितः संवृत्तः (ಆದನು) । विद्वद्भिः श्रीमद्भिश्च पूजितः स्वार्जितं (ತಾನು ಗಳಿಸಿದ) वित्तं सेवमानः सुखेन कालं नयते[1] ॥

पित्रे **विदुषे** ब्राह्मणाय छात्रैः (ಶಿಷ್ಯರಿಂದ) दत्तं प्रभूतं धनमासीत् । स च तत् सर्वं विलासलम्पटाय प्रायच्छत् 'कथमपि सुखेन जीवतात्' (ಬದುಕಲಿ !) इति । तदपि धनं कालेन व्ययितं (ವೆಚ್ಚಮಾಡಲ್ಪಟ್ಟಿತು) तेन मूर्खेण । अतो दारिद्र्येण पीडितः सन् स वराकः कनीयांसं भ्रातरं विद्वांसम् उपेयिवान्, तस्य उपजीवी (ಆಶ್ರಯಿಸಿಕೊಂಡು ಜೀವಿಸುವವನು) च अभवत् ॥

1. ಇದು ಆತ್ಮನೇಪದಿಯೂ ಆಗಿದೆ.

# ೨೨. ಎಷ್ಟು ? - ಎಂಬರ್ಥದ ಶಬ್ದಗಳು

೧೩೪. ಎಷ್ಟು ? ಎಂಬ ಶಬ್ದವು ಕನ್ನಡದಲ್ಲಿ ಸಂಖ್ಯಾವಾಚಕ (Number) ವಾಗಿಯೂ ಪರಿಮಾಣವಾಚಕ (Quantitative)ವಾಗಿಯೂ ಪ್ರಯೋಗವಾಗುತ್ತದೆ. ಸಂಸ್ಕೃತದಲ್ಲಿ **ಸಂಖ್ಯೆಗೆ** कति ? (ಬಹುವಚನ) ಎಂದು, ಪರಿಮಾಣಕ್ಕೆ कियत् ? (ಏಕವಚನ) ಎಂದು - ಹೀಗೆ ಎರಡು ಬೇರೆಬೇರೆಯ ಶಬ್ದಗಳಿವೆ.

## ಅಭ್ಯಾಸ ೮೫

ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನೂ ಪರಿಮಾಣವಾಚಕಗಳನ್ನೂ ಕಪ್ಪಕ್ಷರದಲ್ಲಿ ಅಚ್ಚುಮಾಡಿದೆ. ಅವು ಯಾವ ಲಿಂಗ, ಯಾವ ವಚನ ? ವಾಕ್ಯಗಳನ್ನು ಕನ್ನಡಿಸಿರಿ :

१. एवं **बहवो** जनाः कथयन्ति । २. उत्सवे वसुगुप्तस्य **कियत्** धनं व्ययितम् ? ३. तस्य **बहु** (बहुलम्, प्रचुरम्, प्रभूतम्, भूरि)[1] धनं व्यनश्यत् इति वदन्ति । ४. **कति** दिनानि तत्र न्यवसन् भवतो बान्धवाः ? ५. तत्र **स्तोकानि** (स्वल्पानि, कतिपयान्येव) दिवसानि न्यवसन् । ६. पात्रे **कियत्** क्षीरमस्ति ? ७. **कतिभ्यः** प्रदीयते अन्नं तत्र ? ८. पात्रे इदानीं **स्तोकमेव** (अल्पमेव, स्वल्पमेव) क्षीरम् अवशिष्यते , न **इयतां** जनानां पर्याप्तं (ಸಾಕಷ್ಟು) भवेत् । ९. **कियान्** कालो व्यतीतः (ಕಳೆದುಹೋಯಿತು) ? १०. **इयतीं** (ಇಷ್ಟು) निद्रां मा भजस्व (ಮಾಡಬೇಡ) । ११. पिटके **कियन्ति** फलानि विद्यन्ते, बहिः **कियन्तो** बाला विद्येरन् (ಇದ್ದಾರು) ? १२. तत्र **प्रभूता** बाला भवेयुः, फलानि तु केवलम् **इयन्ति** ॥

**ವಿಶೇಷ** : ಬಹು, ಬಹುಲ, ಪ್ರಭೂತ ; ಅಲ್ಪ, ಸ್ವಲ್ಪ, ಸ್ತೋಕ - ಇಂಥ ಶಬ್ದಗಳು ಸಂಖ್ಯೆಯನ್ನು ಹೇಳುವಾಗ ಬಹುವಚನದಲ್ಲಿಯೂ, ಪರಿಮಾಣವನ್ನು ಹೇಳುವಾಗ ಏಕವಚನ ದಲ್ಲಿಯೂ ಇರುವವು.

---

1. ಕಂಸದಲ್ಲಿರುವ ಶಬ್ದಗಳಿಗೆಲ್ಲ ಅದೇ ಅರ್ಥ.

೧೩೫. (೧) **सर्व** ಶಬ್ದವು (೧ನೆಯ ಭಾಗ, ಪಾ. ೪೬) ಅರ್ಥಾನುಸಾರವಾಗಿ ಮೂರೂ ಲಿಂಗಗಳಲ್ಲಿರುತ್ತದೆ. ಪ್ರತಿಯೊಂದೂ, ಎಲ್ಲವೂ - ಎಂಬರ್ಥದಲ್ಲಿ ಏಕವಚನ, ಸಂಖ್ಯಾವಾಚಕವಾದರೆ ಮೂರೂ ವಚನ. ಈ ವಾಕ್ಯಗಳನ್ನು ನೋಡಿ :

**१. न हि सर्वः सर्वं जानाति । २. सर्वं ब्राह्मणेभ्यो दत्वा वनं गतः । ३. तं सर्वे निन्दन्ति स्म । ४. सर्वे यूथे** (ಎರಡು ಹಿಂಡುಗಳೂ) **नष्टे । ५. सर्वानपि ब्राह्मणान् आनय ।।**

(೨) **कियत्, यावत् , तावत्** ಮುಂತಾದ ಶಬ್ದಗಳು **भगवत्** (೧ನೆಯ ಭಾಗ, ಪಾ. ೩೫) ಶಬ್ದದಂತೆ.

**१. कियान् कियन्तौ कियन्तः । ३. कियता कियद्भ्याम् कियद्भिः । ७. कियति कियतोः कियत्सु ।**

**यावान् यावन्तौ यावन्तः ।** ಇತ್ಯಾದಿ. तावान् तावन्तौ तावन्तः । ಇತ್ಯಾದಿ.

ನಪುಂಸಕ : कियत् कियती कियन्ति । ಇತ್ಯಾದಿ.

ಸ್ತ್ರೀಲಿಂಗ : कियती, यावती, तावती । ಇತ್ಯಾದಿ.

## ಅಭ್ಯಾಸ ೮೬

ಕನ್ನಡಿಸಿ :

१. तत्र कति (कियन्तः) साधवः सन्ति ? २. कति (कियतो) विद्यार्थिनः पाठयति सः ? ३. कतिभिः (कियद्भिः) फलैस्तुष्टो भवेत् ? ४. किं इयता कालेन स ग्रामं गच्छेत् ? ५. कतिभ्यः पूरकाः (ಪೂರಿಗಳನ್ನು) प्रयच्छति ? ६. इयन्त एव घृतपूराः ; यावद्भ्यः पर्याप्ता भवेयुः तावद्भ्यो दास्यामि । ७. अन्येभ्यस्तु कतिचित् (कतिपय्यः, कियत्यश्चित्) पोलिका (ಹೋಳಿಗೆಗಳು) विद्यन्ते । ८. एतावन्तो घृतपूराः कथं लब्धाः ? ९. कतीनां ब्राह्मणानां भोजनं भवति ? १०. कतिषु ग्रामेषु वाप्यः सन्ति ?

೧೩೬. एक (ಒಂದು) ಶಬ್ದಕ್ಕೆ ಕನ್ನಡದಂತೆಯೇ ಸಂಖ್ಯೆಯಲ್ಲದೆ, ಮತ್ತೊಂದು, ಮುಖ್ಯ, ಮೊದಲನೆಯ, ಒಂಟಿಗ, ಸಮಾನವಾಗಿರುವ (ಅದೇ), ಅಲ್ಪ (ತಾನೊಂದೇ) ಎಂಬರ್ಥಗಳೂ ಇವೆ. ಸಂಖ್ಯಾವಾಚಕವಾದರೆ ಇದು ನಿತ್ಯೈಕವಚನ, ಮಿಕ್ಕ ಕಡೆಗಳಲ್ಲಿ ಇದಕ್ಕೆ ಎಲ್ಲಾ ವಚನಗಳೂ ಇವೆ.

## ಅಭ್ಯಾಸ ೮೭

ಕನ್ನಡಿಸಿ :

१. एको देवः केशवो वा शिवो वा । २. एका भार्या सुन्दरी वा दरी (ಗುಹೆ) वा । ३. अज्ञानमेकं कारणं जनानां दुःखस्य । ४. अस्त्येकस्मिन् घोषे (ಹಳ್ಳಿ) एका आभीरी (ಗೊಲ್ಲರವಳು) । ५. एको विदेशं गतः, एकस्तु (अपरस्तु) तत्रैव स्थितः । ६. सर्वे देवालयं गताः, अतोऽहम् एक एव गृहे आसम् । ७. अयं हि सेनायाम् एको (ಮುಖ್ಯ) वीरः । ८. तस्य कौपीनमेकम् अवशिष्टम् । ९. अत्र बहवः सन्ति ; त्वमेकः, अयं द्वितीयः, असौ तृतीयः । १०. आवयोरेकं हि गोत्रम् ॥

೧೩೭. एक, द्वि, त्रि, चतुर् - ಈ ಶಬ್ದಗಳ ರೂಪಗಳನ್ನು ಒಂದನೆಯ ಭಾಗದಲ್ಲಿ (ಪಾ. ೩೩ರಲ್ಲಿ) ಕೊಟ್ಟಿದೆ. ಇಲ್ಲಿರುವ ಸಂಖ್ಯಾವಾಚಕಗಳ ಲಿಂಗವಚನ ವಿಭಕ್ತಿಗಳನ್ನು ಹೇಳಿ :

## ಅಭ್ಯಾಸ ೮೮

ವಾಕ್ಯಗಳನ್ನು ಕನ್ನಡಿಸಿ :

१. कृष्णस्य एकैव पेटिका अस्ति । २. तस्यां द्वे कन्दुके (ಚಂಡುಗಳು) द्वे यष्टी (ದಾಂಡುಗಳು) त्रीणि भ्रमरकाणि (ಬುಗುರಿಗಳು) च सन्ति । ३. अत्र द्वौ कृषीवलौ (ಬೇಸಾಯಗಾರರು) स्तः । तयोरेकस्य द्वौ वृषभौ (ಎತ್ತುಗಳು) विद्येते, अपरस्य द्वे महिष्यौ (ಎಮ್ಮೆಗಳು), तिस्रो गावश्च सन्ति । ४. दशरथस्य चत्वारः पुत्राः ; जनकस्य गृहे च चतस्रः कुमार्य आसन् । ५. पञ्चानां कन्यानां पञ्चानां च पाण्डवानां स्मरणेन पञ्चाऽपि पातकानि विनश्यन्ति ॥

೧೩೮. **पञ्चन्, षष्** - ಆರು, **अष्टन्** - ಎಂಟು - ಈ ಶಬ್ದಗಳ ರೂಪಗಳನ್ನು ಈ ಕೆಳಗೆ ಕೊಟ್ಟಿದೆ. **एक, द्वि, त्रि, चतुर्** ಶಬ್ದಗಳಂತೆ ಇವಕ್ಕೆ ಲಿಂಗಭೇದವಿಲ್ಲ.

**पञ्च** : १. पञ्च २. पञ्च ३. पञ्चभिः ४. पञ्चभ्यः ५. पञ्चभ्यः ६. पञ्चानाम् ७.पञ्चसु

**षष्** : षट् षट् षड्भिः षड्भ्यः षड्भ्यः षण्णाम् षट्सु

**अष्टन्** : अष्ट / अष्टौ, अष्ट / अष्टौ, अष्टभिः / अष्टाभिः, अष्टभ्यः / अष्टाभ्यः, अष्टभ्यः / अष्टाभ्यः, अष्टानाम् अष्टसु

(೧) **सप्तन्** (ಏಳು), **नवन्** (ಒಂಬತ್ತು), **दशन्** (ಹತ್ತು) ಈ ಶಬ್ದಗಳೂ, **एकादशन्** (ಹನ್ನೊಂದು), **द्वादशन्** (ಹನ್ನೆರಡು), **त्रयोदशन्** (ಹದಿಮೂರು), **चतुर्दशन्** (ಹದಿನಾಲ್ಕು), **पञ्चदशन्** (ಹದಿನೈದು), **षोडशन्** (ಹದಿನಾರು), **सप्तदशन्** (ಹದಿನೇಳು), **अष्टादशन्** (ಹದಿನೆಂಟು), **नवदशन्** (ಹತ್ತೊಂಬತ್ತು), ಈ ಶಬ್ದಗಳೂ **पञ्चन्** ಶಬ್ದದಂತೆಯೇ ನಡೆಯುವವು.

(೨) **नवदशन्** (ಹತ್ತೊಂಬತ್ತು), ಇದಕ್ಕೆ **एकोनविंशति** (ಒಂದು ಕಡಿಮೆ ಇಪ್ಪತ್ತು), **एकान्नविंशतिः, ऊनविंशतिः** ಎಂದೂ ಹೆಸರುಗಳಿವೆ. **विंशति** (ಏಕವಚನ) ಶಬ್ದವು ಸ್ತ್ರೀಲಿಂಗ. ಇದು ಬಹುವಚನಕ್ಕೆ ವಿಶೇಷಣವಾಗಬಹುದು.

(೩) **द्वितीय, तृतीय** - ಇವಕ್ಕೆ **द्वितीयस्मै, द्वितीयस्मात्, द्वितीयस्मिन्** - ಎಂಬ ವಿಶೇಷರೂಪಗಳಿವೆ ; ಮಿಕ್ಕದ್ದೆಲ್ಲ **देव** ಶಬ್ದದಂತೆ. **प्रथम** ಶಬ್ದಕ್ಕೆ ಪ್ರ. ಸಂ. **प्रथमे प्रथमाः** ; **चरम** (ಕೊನೆಯ), **कतिषय** (ಕೆಲವು) - ಇವಕ್ಕೆ **प्रथम** ಶಬ್ದದಂತೆಯೇ ರೂಪಗಳು.

## ೨೩. ಅವ್ಯಯಗಳು

೧೩೯. ಅವ್ಯಯಗಳಿಗೆ ಲಿಂಗವಿಭಕ್ತಿವಚನಗಳ ರೂಪಭೇದವಿರುವದಿಲ್ಲ. ಇವುಗಳಲ್ಲಿ ಕೆಲವನ್ನು ನಾವು ಈಗಾಗಲೆ ಅಲ್ಲಲ್ಲಿ ಉಪಯೋಗಿಸಿರುತ್ತೇವೆ. ಈಗ ಅವುಗಳನ್ನು ವರ್ಗೀಕರಣಮಾಡಿ ಈ ಪಾಠದಲ್ಲಿ ತಿಳಿಯಿಸುವೆವು.

# ಅಭ್ಯಾಸ ೮೯

ಇಲ್ಲಿ ಮನಸ್ಸಿನ ಭಾವಗಳನ್ನು ಸೂಚಿಸುವ ಅವ್ಯಯಗಳು (Interjections) ಯಾವವು ? ವಾಕ್ಯಗಳನ್ನು ಕನ್ನಡಿಸಿರಿ :

१. भोः, कस्त्वम् ? २. अहो खेलनं (ಆಟ) बालकानाम् ! ३. अरे, का वेला (ಕಾಲ) ? ४. अये ! (ಇದೇನು ?) आगता एव पाठशालाम् ! ५. अयि बालाः, इदं शृणुत । ६. हे भूपते, मम प्रार्थनां शृणु । ७. भो भो मित्र, आगम्यताम्, आगम्यताम् । ८. रे नीच ! किमसत्यं भाषसे ? ९. हा हा ! कथं वदानि ? १०. ही ! चित्रमिदम् (ಆಶ್ಚರ್ಯವಿದು) ! ११. धिक् त्वां नीच ! १२. आ दुर्योधनः किल मृतः ! १३. आः पाप ! किं जल्पसि (ಹರಟುತ್ತಿರುವೆ) ?

೧೪೦. ಕ್ರಿಯಾವಿಶೇಷಣಾವ್ಯಯಗಳು (Adverbs) ಬೇರೆಬೇರೆಯ ಅರ್ಥವನ್ನು ಹೇಳುವವು :

(೧) ಕಾಲ : कदा ? (ಯಾವಾಗ ?), प्रातः (ಬೆಳಗ್ಗೆ), सायम् (ಸಂಜೆ) अद्य (ಇಂದು), अधुना, इदानीम् (ಈಗ), तदा, तदानीम् (ಆಗ), श्वः (ನಾಳೆ), परश्वः (ನಾಡಿದ್ದು), सर्वदा, सदा (ಯಾವಾಗಲೂ) युगपत् (ಒಮ್ಮೆಗೇ), चिरेण, चिरात् (ಬಹುಕಾಲದಮೇಲೆ), त्वरितम्, झटिति (ಬೇಗ), भूयः, पुनः (ಮತ್ತೆ), जातु (ಎಂದಾದರೂ), कदाचित्, कदाचन (ಒಂದುವೇಳೆ), कदापि (ಎಂದಾದರೂ).

(೨) ಸ್ಥಾನ : कुत्र ? (ಎಲ್ಲಿ ?) अत्र, इह, तत्र, यत्र, सर्वत्र, इतः (ಇಲ್ಲಿಂದ), ततः, सर्वतः, बहिः, ऊर्ध्वम् (ಮೇಲೆ), अधः (ಕೆಳಗೆ), आरात् (ದೂರ), निकषा (ಹತ್ತಿರ). (ಇವುಗಳಲ್ಲಿ ಕೆಲವು ಕಾಲವನ್ನೂ ಹೇಳುತ್ತವೆ.)

(೩) ಪ್ರಕಾರ : कथम् ? (ಹೇಗೆ ?), इति, एवम्, इत्थम् (ಹೀಗೆ), तथा (ಹಾಗೆ, ಮತ್ತು), सर्वथा, वृथा (ವ್ಯರ್ಥವಾಗಿ), साधु, सुष्ठु (ಚೆನ್ನಾಗಿ), नूनम्

(ನಿಜವಾಗಿ), पृथक् (ಬೇರೆಯಾಗಿ), मिथ्या (ಸುಳ್ಳಾಗಿ), अद्धा (ಸ್ಪಷ್ಟವಾಗಿ), अन्यथा (ಮತ್ತೊಂದು ಪ್ರಕಾರ, ಹಾಗಲ್ಲದಿದ್ದರೆ), बाढम् (ನಿಜ).

(೪) ಕಾರಣ : कुतः ? ततः, इतः, अतः, यतः, किम् (ಏಕೆ ?), यत् (ಏಕೆಂದರೆ)[1].

## ಅಭ್ಯಾಸ ೬೦

ಕಾಲ, ಸ್ಥಾನ, ಪ್ರಮಾಣ, ಪ್ರಕಾರ, ಕಾರಣ - ಇವನ್ನು ಹೇಳುವ ಅವ್ಯಯಗಳನ್ನು ಪಯೋಗಿಸಿ ಎರಡೆರಡು ವಾಕ್ಯಗಳನ್ನು ಬರೆಯಿರಿ.

ಈ ವಾಕ್ಯಗಳಲ್ಲಿರುವ ಕ್ರಿಯಾವಿಶೇಷಣಗಳನ್ನು ನೋಡಿರಿ. ಅವುಗಳನ್ನು ನಾಮಗಳೆಂದು ಏತಕ್ಕೆ ಕರೆಯಲಾಗುವಂತಿಲ್ಲ ?

१. सुखं (ಸುಖವಾಗಿ) निन्दां कुर्वन्ति । २. रजकः (ಅಗಸರವನು) पटानि शुचि क्षालयति । ३. अत्र किञ्चिदेव वदिष्यामि । ४. अहं स्वयं गच्छामि, यदत्र यूयं स्वयम् आगताः । ५. रे, किं वृथा जल्पसि ? ६. सूद ओदनं मृदु पचति । ७. शीघ्रं गच्छ ।

ನಾಮವಿಶೇಷಣಗಳನ್ನು ನಪುಂಸಕದ್ವಿತೀಯೈಕವಚನವಾಗಿ ಕ್ರಿಯಾವಿಶೇಷಣವಾಗಿ ಉಪಯೋಗಿಸುವದುಂಟು. ಆಗ ಅವಕ್ಕೆ ಲಿಂಗವಿಭಕ್ತಿವಚನಗಳಿಲ್ಲದ್ದರಿಂದ ಅವು ಅವ್ಯಯಗಳೇ ಆಗಿರುತ್ತವೆ. स्वयम् ಎಂಬ ಅವ್ಯಯವನ್ನು ಎಲ್ಲಾ ವಿಭಕ್ತಿವಚನಗಳ ಜೊತೆಗೆ ಅವಧಾರಣಾರ್ಥವಾಗಿ (Emphatically) ಉಪಯೋಗಿಸುವರು.

೧೪೧. ಪ್ರಶ್ನಾರ್ಥಕಸರ್ವನಾಮಗಳಂತೆ (ಖಂ. ೬೨, ೬೫) ಪ್ರಶ್ನಾರ್ಥಕ ಕ್ರಿಯಾವಿಶೇಷಣಗಳಿಂದಲೂ ಅನಿರ್ದಿಷ್ಟಾರ್ಥಕ್ರಿಯಾವಿಶೇಷಣಗಳು (Indefinite Demonstrative Adverbs) ಹುಟ್ಟುವವು. ಉದಾ :

१. कुत्र (ಎಲ್ಲಿ) सञ्चरति ? कुत्रचित् (ಎಲ್ಲಿಯೋ) सञ्चरति ।

---

1. ಕಾಲೇ ಸಮಾಗತೋಽಸಿ, ಅಕಸ್ಮಾತ್ ಆಗತಃ, ತೇನ ಕಥಯಾಮಿ, ತಸ್ಮಾದ್ ವದಾಮಿ - ಮುಂತಾದವುಗಳು ಕ್ರಿಯಾವಿಶೇಷಣಗಳಾದರೂ ವಿಭಕ್ತಿಯುಳ್ಳ ನಾಮಗಳು, ಅವ್ಯಯಗಳಲ್ಲ.

२. ब्राह्मणाः कुत (ಎಲ್ಲಿಂದ) आगताः ? कुतोऽपि (ಎಲ್ಲಿಂದಲೋ) ब्राह्मणा आगताः । ३. कथं (ಹೇಗೆ) पारंगता यूयम् ? कथञ्चित्, कथमपि (ಹೇಗೊ, ಕಷ್ಟದಿಂದ) पारं गता वयम् । ४. कदा (ಯಾವಾಗ) अनृतं वदेत् सः ? कदाचित् (ಒಂದುವೇಳೆ) स अनृतं वदेत् । ५. किं कदाचित् (ಎಂದಾದರೂ) कोऽपि (ಯಾರಾದರೂ) विना कारणं म्रियते ? ६. कुतः (ಏಕೆ) स एवं वदति ? ७. कुतश्चित् (कुतश्चन, कुतोऽपि) कारणात् (ಯಾವದೋ ಕಾರಣದಿಂದ) स बाल्ये एव मृतः ॥

೧೪೨. अपि, तु, हि, एव, च, खलु, किल, इव - ಮುಂತಾದ ಪರ ನಿಪಾತಾವ್ಯಯಗಳ ಸಂಬಂಧದಿಂದ ಕ್ರಿಯಾವಿಶೇಷಣಗಳಿಗೂ ಮತ್ತು ಬೇರೆಯ ಶಬ್ದಗಳಿಗೂ ಬಗೆಬಗೆಯ ಅರ್ಥವಿಶೇಷಗಳಾಗುತ್ತವೆ. ಇವನ್ನು ವಾಕ್ಯದ ಆರಂಭದಲ್ಲಿ ಉಪಯೋಗಿಸಬಾರದು. ಈ ಉದಾಹರಣೆಗಳಲ್ಲಿ ಕ್ರಿಯಾವಿಶೇಷಣಗಳ ಅರ್ಥ ವಿಶೇಷಗಳನ್ನು ಲಕ್ಷಿಸಿರಿ :

१. इदानीमपि (ಈಗಲಾದರೂ) सत्यं वद । २. इदानीं तु (ಈಗಲಾದರೊ) स मृगो वने वसति । ३. इदानीं हि (ಈಗಲಲ್ಲವೆ) हेमन्तः ? ४. इदानीमेव (ಈಗತಾನೆ) मित्रमागतम् । ५. इदानीं च (ಮತ್ತು ಈಗ) सर्वे निर्गच्छति । ६. इदानीं खलु वैशाखमासः ? (ಈಗಲೆ ಅಷ್ಟೆ ವೈಶಾಖಮಾಸ ?) ७. इदानीं किल (ಈಗಲೆ ಅಂತೆ) स ईश्वरं दर्शयति । ८. अतीव (ಬಹಳ ಬಹಳ) कष्टं गतोऽसि । ९. किमिति (ಏನೆಂದು, ಏತಕ್ಕೆ) इत्थं भणसि (ಹೇಳುತ್ತೀಯೆ) ? १०. किं च (ಮತ್ತು, ಇದಲ್ಲದೆ) नाहं तत्र कदापि (ಎಂದೂ) अगच्छम् । ११. अपि च (ಇದೂ ಅಲ್ಲದೆ) न स्थाणौ जातुचित् पुरुषो विद्यते । १२. किञ्चान्यत् (ಮತ್ತೊಂದೇನೆಂದರೆ) इदानीमिव (ಈಗಿನಂತೆ) न युगान्तरे वर्णसङ्कर आसीत् ॥

ಈ ಕೆಳಗಿನ ಉದಾಹರಣೆಗಳಲ್ಲಿ ಕ್ರಿಯಾವಿಶೇಷಣಗಳಲ್ಲದ ಶಬ್ದಗಳಿಗೂ ಈ अपि, तु - ಮುಂತಾದ ನಿಪಾತಗಳು ಸೇರಿವೆ :

१. रामो गच्छति, कृष्णोऽपि गच्छति । २. विद्यां विनयं वित्तं रूपं वयः कुलं च विचिन्त्य (ವಿಚಾರಿಸಿ) कन्या देया । ३. तत्तु (ಅದಾದರೊ) मृषैव । ४. अयं मृदुरपि शठः (ಮೋಸಗಾರ) । ५. त्वया खलु एवं कथ्यते ॥

೧೪೩. ಇಲ್ಲ, ಅಲ್ಲ - ಎಂಬರ್ಥದಲ್ಲಿ न ಎಂಬ ಅವ್ಯಯವನ್ನೂ, (ಮಾಡ) ಬೇಡ, ಆಗದಿರಲಿ ! - ಎಂಬರ್ಥದಲ್ಲಿ मा ಎಂಬ ಅವ್ಯಯವನ್ನೂ ಬಳಸುವರು. ಈ ಅವ್ಯಯಗಳು ವಾಕ್ಯದ ಮೊದಲಲ್ಲಿಯೂ ಇರಬಹುದು.

## ಅಭ್ಯಾಸ ೯೧

ಕನ್ನಡಿಸಿ :

१. यूयं न ब्राह्मणाः । २. नेदं गृहं भवतः । ३. अहं नैव गच्छामि । ४. न च त्वया एवं वाच्यम् (ಹೇಳಲ್ಪಡತಕ್ಕದ್ದಲ್ಲ) । ५. न तदेवं भवेत् । ६. न हि न हि (ಇಲ್ಲ ಇಲ್ಲ, ಇಲ್ಲವೇ ಇಲ್ಲ), न वयं तत् पिबामः । ७. न च तन्नास्ति (ಅದು ಇಲ್ಲವೆಂಬುದೂ ಇಲ್ಲ) । ८. तत्र मा गच्छ । ९. मा कश्चित् कदापि (ಎಂದಿಗೂ) दुःखं गच्छेत् (ಹೊಂದದೆ ಇರಲಿ) ! १०. मा वयम् अधर्मे रमेमहि ! (ನಾವು ಅಧರ್ಮದಲ್ಲಿ ರತರಾಗದೆ ಇರುವಂತಾಗಲಿ !)

ವಿಶೇಷ : 'ಅಲ್ಲ' ಎಂಬರ್ಥದಲ್ಲಿ 'ನ' ಎಂಬ ಅವ್ಯಯವು ಕ್ರಿಯಾವಿಶೇಷಣವಲ್ಲ, ನಾಮ ವಿಶೇಷಣ. ಅದು ಸಮಾಸದಲ್ಲಿ 'ಅ' ಎಂದಿಷ್ಟೇ ಉಳಿದುಕೊಳ್ಳುವದು. ಉದಾ : **ಅಬ್ರಾಹ್ಮಣಃ** - ಬ್ರಾಹ್ಮಣನಲ್ಲದವನು ; **ಅಕೃತಮ್** - ಮಾಡದೆ ಇರುವ ; **ಅಕೃತ್ವಾ** - ಮಾಡದೆ ; **ಅಕರ್ತುಮ್** - ಮಾಡದೆ ಇರುವದಕ್ಕೆ ; **ಅಕರ್ತವ್ಯಮ್** - ಮಾಡತಕ್ಕದ್ದಲ್ಲದ ; **ಅವದನೀಯಮ್** - ಹೇಳತಕ್ಕದ್ದಲ್ಲದ ; **ಅಭೋಜ್ಯಮ್** - ಉಣ್ಣತಕ್ಕದ್ದಲ್ಲದ.

೧೪೪. ಕೆಲವು ಅವ್ಯಯಗಳಿಗೆ ಇಂಥಿಂಥ ನಾಮವಿಭಕ್ತಿಗಳೇ ಬೇಕೆಂಬ ನಿಯಮ ವುಂಟು. ಅವುಗಳಿಗೆ ವಿಭಕ್ತ್ಯಪೇಕ್ಷಕಾವ್ಯಯಗಳೆಂದು ಹೆಸರಿಡಬಹುದು. ಅವ್ಯಯಾ ಪೇಕ್ಷಿತವಿಭಕ್ತಿಗಳನ್ನು ಉಪಪದವಿಭಕ್ತಿಗಳೆನ್ನುವರು. ಮುಂದಿನ ವಾಕ್ಯಗಳಲ್ಲಿ ಕಂಸ ದಲ್ಲಿಟ್ಟಿರುವ ಸಂಖ್ಯೆಗಳು ವಿಭಕ್ತಿಗಳನ್ನು ಸೂಚಿಸುತ್ತವೆ :

१. राममन्तरा (ಬಿಟ್ಟು ೨) न जीवेयम् । २. तयोरन्तरा (ನಡುವೆ ೬) प्रविष्टः । ३. कम्बलमन्तरेण (ಕಂಬಳಿಯಿಲ್ಲದೆ ೩) बहिर्न गच्छामि । ४. श्रृगालमभितः (ನರಿಯ ಹಿಂದೂಮುಂದೂ, ಎರಡು ಕಡೆಯಲ್ಲಿಯೂ, ಸುತ್ತಲೂ ೨) कुक्कुरा भषन्ति (ಬೊಗಳುತ್ತವೆ) । ५. रामादर्वाक् (ಈಚೆಗೆ ೫) कृष्णो जातः । ६. पूर्णिमाया अर्वाक् (ಮುಂಚೆ ೫) प्रत्यागच्छति । ७. अलं (ಸಾಕು ೩) मोदकैः (= ಕಡುಬುಗಳು ಬೇಡ) । ८. ऋते (२) मित्रं (ಮಿತ್ರನನ್ನು ಬಿಟ್ಟರೆ) कार्यं न भवति । ९. ऋते (५) मित्रात् (ಮಿತ್ರನಿಲ್ಲದೆ) तन्न भवेत् । १०. मासात् परं (ತಿಂಗಳ ಮೇಲೆ ೫) वर्षति । ११. मातरं परितः (ಸುತ್ತಲೂ ೨) बाला उपविशन्ति । १२. भूपतेर्मरणात् पश्चात् (ಬಳಿಕ ೫) राष्ट्रस्य किं जातम् (ಆಯಿತು) ? १३. रावणं प्रति (ಕಡೆಗೆ ೨) बाणं विसृजति (ಬಿಡುತ್ತಾನೆ) । १४. प्राक् (ಮುಂಚೆ ೫) सृष्टेः, इदं सर्वं आत्मैव । १५. भटस्य पुरतः (ಮುಂದೆ ೬) किं स्थितम् ? १६. ग्रामाद् बहिः (ಹೊರಗೆ ೫) तटाकोऽस्ति (ಕೊಳವಿದೆ) । १७. अर्थं (अर्थेन, अर्थात्) विना (ಇಲ್ಲದೆ ೨, ೩, ೫) कार्यं न सिध्येत् । १८. रामो लक्ष्मणेन सह (समम्, साकम्, सार्धम् ३) गच्छति । १९. रामाय नमः (४) । २०. स्वस्ति (४) प्रजाभ्यः ॥

೧೪೫. ಎರಡು ಪದಗಳನ್ನು ಅಥವಾ ವಾಕ್ಯಗಳನ್ನು ಕೂಡಿಸುವ ಅವ್ಯಯಗಳನ್ನು ಸಂಬಂಧಕಾವ್ಯಯಗಳು (Conjunctions) ಎಂದು ಕರೆಯಬಹುದು. ಈ ಕೆಳಗೆ ಇಂಥ ಕೆಲವು ಅವ್ಯಯಗಳನ್ನು ಉದಾಹರಿಸುವೆವು.

I

ಈ ಕೆಳಗಿನ ವಾಕ್ಯಗಳು ಸಮಪ್ರಧಾನ (Co-ordinate) ಆಗಿವೆ :

१. आम्राश्च सिक्ताः, पितरश्च तर्पिताः । २. धृतराष्ट्रो वनं प्रतिष्ठते (ಹೊರಡುತ್ತಾನೆ) ; गान्धार्यपि तमनुगच्छति । ३. न केवलं चोरेण धनं न लब्धम्, किं तु (किं तर्हि, अपि तु) तस्य हस्तोऽपि कर्तितः । ४. स्वामिन्, नाऽपराधो मम, न च सत्वानाम् ॥

೧. ಮಾವಿನ ಗಿಡಗಳಿಗೆ ನೀರುಹಾಕಿದ್ದೂ ಆಯಿತು ; ಪಿತೃಗಳಿಗೆ ತೃಪ್ತಿಯನ್ನುಂಟುಮಾಡಿದ್ದೂ ಆಯಿತು. ೨. ಧೃತರಾಷ್ಟ್ರನು ವನಕ್ಕೆ ಹೊರಟಿದ್ದಾನೆ, ಗಾಂಧಾರಿಯೂ ಅವನನ್ನು ಹಿಂಬಾಲಿಸುತ್ತಿದ್ದಾಳೆ. ೩. ಕಳ್ಳನಿಗೆ ಧನವು ಸಿಕ್ಕಲಿಲ್ಲ, ಇಷ್ಟೇ ಅಲ್ಲ, ಅವನ ಕೈಯೂ ಕತ್ತರಿಸಿಹೋಯಿತು. ೪. ಸ್ವಾಮಿಯೆ, ನನ್ನ ತಪ್ಪಲ್ಲ, ಪ್ರಾಣಿಗಳ ತಪ್ಪೂ ಅಲ್ಲ.

ಮೇಲೆಕೊಟ್ಟಿರುವ ಅವ್ಯಯಗಳು ವಾಕ್ಯಾರ್ಥಸಮುಚ್ಚಾಯಕಗಳು (Co-Ordinatives). ಅವು ಒಂದರ ಅರ್ಥಕ್ಕೆ ಸಮಾನವಾದ ಇನ್ನೊಂದನ್ನು ತೋರಿಸುತ್ತವೆ.

## II

१. त्वं वा अपराधी, तव तातो वा, किं ममानेन व्यापारेण ? २. किं ते सर्वे गताः , किं वा (अथवा, आहोस्वित्, उत, उताहो) स एक एव ? ३. नाहं तद्भक्षयामि, न वा मम मित्राणि । ४. क्षिप्रमागच्छ, नो चेत् (अन्यथा, अपरथा, इतरथा, अथवा) अहं मरिष्यामीति निश्चयः । ५. ईश्वरो नास्ति चेत्, नास्ति नो हानिः, अथ पुनरस्ति, नास्तिको हतः ।।

೧. ನೀನೇ ಅಪರಾಧಿಯೊ, ಅಥವಾ ನಿಮ್ಮಪ್ಪನೊ, ಈ ಕೆಲಸದಿಂದ (ಇದನ್ನು ಕಟ್ಟಿಕೊಂಡು) ನನಗೇನು ? ೨. ಅವರೆಲ್ಲರೂ ಹೋದರೊ, ಅಥವಾ ಅವನೊಬ್ಬನೇಯೊ ? ೩. ನಾನೂ ಅದನ್ನು ತಿನ್ನುವದಿಲ್ಲ, ನನ್ನ ಮಿತ್ರರೂ (ತಿನ್ನುವದಿಲ್ಲ). ೪. ಬೇಗನೆ ಬಾ, ಇಲ್ಲವಾದರೆ ನಾನು ಸಾಯುವೆನೆಂಬುದು ನಿಶ್ಚಯ. ೫. ಈಶ್ವರನು ಇಲ್ಲವಾದರೆ ನಮಗೆ ನಷ್ಟವಿಲ್ಲ, ಇದ್ದರೆ ನಾಸ್ತಿಕನು ಕೆಟ್ಟ.

ಮೇಲೆ ಕೊಟ್ಟಿರುವ ಅವ್ಯಯಗಳು ಪಕ್ಷಾಂತರಾರ್ಥಕಗಳು (Alternatives).

## III

१. शास्त्रवित्[1] सः, अपि तु (किं तु) मूर्खः । २. नायं धनवान्, विद्यावांस्तु । ३. अस्तु स बलवान्, तथापि (एवमपि) आहारं विना न जीवेत् । ४. उत्तरस्यां[2] दिशि हिमालयो वर्तते, दक्षिणस्यां तु न कोऽपि कुलाचलोऽस्ति ।।

---

1. ಇದು ದಕಾರಾಂತ ಪುಲ್ಲಿಂಗ. 2. ಉತ್ತರಾ, ದಕ್ಷಿಣಾ, ಪೂರ್ವಾ, ಅಪರಾ - ಈ ದಿಗ್ವಾಚಕಗಳನ್ನು ಸರ್ವಾ ಶಬ್ದದಂತೆ (ಒಂದನೆಯ ಭಾಗ, ಪಾ. ೪೬) ನಡೆಯಿಸಬೇಕು.

೧. ಅವನು ಶಾಸ್ತ್ರಗಳನ್ನು ಬಲ್ಲವನು, ಆದರೆ ಮೂರ್ಖನು. ೨. ಅವನು ಧನವಂತನಲ್ಲ, ವಿದ್ಯಾವಂತನೇನೋ ಆಗಿದಾನೆ. ೩. ಅವನು ಬಲವುಳ್ಳವನೇ ಆಗಿರಲಿ, ಆದರೂ ಆಹಾರವಿಲ್ಲದೆ ಜೀವಿಸಿರಲಾರ. ೪. ಉತ್ತರ ದಿಕ್ಕಿನಲ್ಲಿ ಹಿಮಾಲಯವಿದೆ, ದಕ್ಷಿಣದಲ್ಲಾದರೋ ಯಾವ ಕುಲಪರ್ವತವೂ ಇಲ್ಲ.

ಇಲ್ಲಿ ಕೊಟ್ಟಿರುವ ಅವ್ಯಯಗಳು **ವಿರೋಧಾರ್ಥಕಗಳು** (Adversatives).

१. तस्य कालेन महती वित्तमात्रा सञ्जाता ; ततः (अतः, अत एव) स कस्यचिद्[1] (कस्मिंश्चिद् ) विश्वासं न करोति । २. मूर्ख आत्मानं पण्डितं मन्यते ; तथा च न कमपि प्रणमति । ३. ते बाहुभ्यामेव नदीं तरेयुः ; तथा हि धैर्येण जलं प्रविशन्ति । ४. किं भोजनमिच्छसि ? तर्हि (तथा चेत्, एवं चेत्) शीघ्रमागच्छ । ५. त्वां भक्त्या प्रणमामः ; त्वं हि नः पिता विद्यादानेन । ६. गुरुतरं प्रयोजनमस्ति ; तत् सत्वरं गच्छामः । ७. चौरैराक्रान्तोऽयं प्रदेशः ; एवं च न स्थातव्यमत्र ॥

೧. ಅವನಿಗೆ ಕಾಲಕ್ರಮದಲ್ಲಿ ದೊಡ್ಡ ಹಣದ ಗಂಟು ಆಯಿತು ; ಆದ್ದರಿಂದ ಅವನು ಯಾರನ್ನೂ ನಂಬುತ್ತಿರಲಿಲ್ಲ. ೨. ಮೂರ್ಖನು ತನ್ನನ್ನೇ ಪಂಡಿತನೆಂದೆಣಿಸಿ ಕೊಂಡಿರುತ್ತಾನೆ (= ತಾನು ಪಂಡಿತನೆಂದು ತಿಳಿದುಕೊಂಡಿರುತ್ತಾನೆ) ; ಆದ್ದರಿಂದ ಅವನು ಯಾರನ್ನೂ ನಮಸ್ಕರಿಸುವದಿಲ್ಲ. ೩. ಅವರು ತೋಳುಗಳಿಂದಲೇ ಈಜಿಕೊಂಡು ನದಿಯನ್ನು ದಾಟಿಯಾರು ; ಆದ್ದರಿಂದಲೇ (ಅಲ್ಲವೆ) ಧೈರ್ಯದಿಂದ ನೀರನ್ನು ಪ್ರವೇಶಿಸಿದ್ದಾರೆ (= ನೀರೊಳಕ್ಕೆ ಇಳಿದಿದ್ದಾರೆ) ! ೪. ಊಟವನ್ನಿಚ್ಛಿಸು ತ್ತೀಯೋ (= ಊಟ ಬೇಕೇನು) ? ಹಾಗಾದರೆ ಬೇಗ ಬಾ. ೫. ನಿನ್ನನ್ನು ಭಕ್ತಿಯಿಂದ ನಮಸ್ಕರಿಸುತ್ತಿದ್ದೇವೆ ; ಏಕೆಂದರೆ ವಿದ್ಯಾದಾನಮಾಡಿರುವದರಿಂದ ನೀನೇ ನಮ್ಮ ತಂದೆ. ೬. ಬಹಳ ಪ್ರಯೋಜನ (ಆಗತಕ್ಕದ್ದು) ಇದೆ ; ಆದ್ದರಿಂದ ಬೇಗನೆ ಹೋಗೋಣ. ೭. ಈ ಪ್ರದೇಶವು ಕಳ್ಳರಿಂದ ಆಕ್ರಾಂತವಾಗಿರುತ್ತದೆ (= ಇಲ್ಲಿ ಕಳ್ಳರು ಹೆಚ್ಚು) ; ಹೀಗಿರುವದರಿಂದ ಇಲ್ಲಿರತಕ್ಕದ್ದಲ್ಲ.

ಮೇಲೆ ಕೊಟ್ಟಿರುವ ಅವ್ಯಯಗಳು **ಹೇತ್ವರ್ಥಕಗಳು** (Illatives).

---

1. ಯಾರಲ್ಲಿ ವಿಶ್ವಾಸವನ್ನು ಇಡಬೇಕೋ ಅವರ ಹೆಸರು ಸಪ್ತಮೀ ಅಥವಾ ಷಷ್ಠೀವಿಭಕ್ತಿಯಲ್ಲಿರಬೇಕು.

೧೪೬. ಈ ಕೆಳಗೆ ಕೊಟ್ಟಿರುವ ಉದಾಹರಣೆಗಳಲ್ಲಿ ಅವ್ಯಯಗಳು ಕೂಡಿಸಿರುವ ವಾಕ್ಯಗಳೆಲ್ಲ ಸಮಪ್ರಧಾನವಾಗಿಲ್ಲ. ಅವು ಅಂಗಾಂಗಿಭಾವದ ವಾಕ್ಯಗಳು (Principal and Subordinate Clauses).

ಅಂಗಾಂಗಿಭಾವದ ವಾಕ್ಯಗಳಲ್ಲಿ **यत्** ಶಬ್ದವೂ (ಖಂ. ೧೧೩, ೧೨೬) ಅದರಿಂದ ಹುಟ್ಟಿರುವ ಶಬ್ದಗಳೂ ಅವ್ಯಯಗಳೂ ಇರುತ್ತವೆ. ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡುವೆವು :

१. न जानासि यत्[1] केन कर्मणा त्वया नरकमुपार्जितम् । २. कथितमासीन्मया यत् समुद्रवेलया अण्डानां विनाशो भविष्यति । ३. यदा पुनरागच्छति, तदा कथयिष्यामि । ४. यदा यदा धर्मस्य ग्लानिर्भवति, तदा तदा भगवान् मायया संभवति । ५. कदा पुनरागन्तासि ? - इति मित्राणि माम् अपृच्छन् । ६. यत्र यत्र धूमो दृश्यते, तत्र तत्र अवश्यमग्निना भाव्यम् । ७. यत्र यत्र रघुनाथकीर्तनं भवति, तत्र तत्र मारुतिस्तिष्ठति । ८. त्वं कुत आगत इत्येतत् चिन्तय । ९. कुत्र जलं लभ्यत इति तु न जानीमः । १०. कथं कृतं त्वया इति मां वद । ११. न मह्यं तद्रोचते यतो (यस्मात्, येन) तन्निषिद्धं शास्त्रेण । १२. यत् स स्वमेवं वदति, ततोऽहं विश्वासं करोमि । १३. स तावदुच्चैः क्रोशति यावत् स्वरभङ्गो जायते । १४. यथा स जीवति तथा कुरु । १५. यदैव चोरः प्रविष्टः, तदैव रक्षापुरुषोप्यागच्छत् । १६. यद्वा पठति, यदि वा न पठति, सर्वथापि स मूर्ख एव । १७. यद्यपि तच्छुद्धम्, तथापि नाचरणीयम्, लोकविरुद्धत्वात् । १८. यत्रापि ब्राह्मणाः सन्ति, तत्रापि न स्थातव्यं ते चेत् स्युर्दुराचाराः । १९. यथा त्वं सत्यं वदसि, तथा देवा अवश्यं त्वां रक्षेयुः । २०. यथा विष्णुमयं सत्यम्, यथा विष्णुमयं जगत् । यथा विष्णुमयं सर्वम्, पाप्मा मे नश्यतां तथा ॥

೧. ಆ ಕರ್ಮದಿಂದ ನರಕವನ್ನು ಸಂಪಾದಿಸಿಕೊಂಡೆನೆಂಬುದನ್ನು ನೀನರಿಯೆ.

---

1. ಉಪವಾಕ್ಯದ ಅವ್ಯಯಗಳನ್ನೂ ಅವುಗಳಿಗೆ ಸಹಸಂಬದ್ಧವಾದ (Coordinate) ಅವ್ಯಯಗಳನ್ನೂ ಬೇರೆಯ ಅಕ್ಷರದಲ್ಲಿಟ್ಟಿದೆ.

೨. ಸಮುದ್ರದ ಉಬ್ಬರದಿಂದ ಮೊಟ್ಟೆಗಳು ನಾಶವಾಗುವವೆಂದು ನನ್ನಿಂದ ಹೇಳಲ್ಪಟ್ಟಿತ್ತು (= ನಾನು ಮೊದಲೇ ಹೇಳಿದ್ದೆ). ೩. ಯಾವಾಗ ಮತ್ತೆ ಬರುವನೋ ಆಗ ಹೇಳುವೆನು. ೪. ಯಾವಯಾವಾಗ ಧರ್ಮದ ಕುಂದು ಆಗುವದೋ ಆಗಾಗ ಭಗವಂತನು ಮಾಯೆಯಿಂದ ಹುಟ್ಟುತ್ತಾನೆ. ೫. ಮತ್ತೆ ಯಾವಾಗ ಬರುವವ ನಾಗಿದ್ದೀಯೆ (= ಬರುವೆ) ಎಂದು ಮಿತ್ರರು ನನ್ನನ್ನು ಕೇಳಿದರು. ೬. ಎಲ್ಲೆಲ್ಲಿ ಹೊಗೆ ಕಾಣಲ್ಪಡುವದೋ (= ಕಾಣಿಸುವದೋ) ಅಲ್ಲಲ್ಲಿ ಅವಶ್ಯಕವಾಗಿ ಬೆಂಕಿಯಿಂದ ಇರೋಣಾಗಬೇಕು (= ಹೊಗೆಯಿದ್ದಲ್ಲಿ ಬೆಂಕಿಯಿರಬೇಕು). ೭. ಎಲ್ಲೆಲ್ಲಿ ರಘುನಾಥನ ಕೀರ್ತನವೋ ಅಲ್ಲಲ್ಲಿ ಮಾರುತಿ ಇರುತ್ತಾನೆ. ೮. ನೀನು ಎಲ್ಲಿಂದ ಬಂದೆ ಎಂಬುದನ್ನು ಯೋಚಿಸಿಕೊ. ೯. ಎಲ್ಲಿ ನೀರು ಸಿಕ್ಕುತ್ತದೆ ಎಂಬುದನ್ನು ಮಾತ್ರ ಅರಿಯೆವು. ೧೦. ಅದು ನಿನ್ನಿಂದ ಹೇಗೆ ಮಾಡಲ್ಪಟ್ಟಿತೆಂಬುದನ್ನು (= ನೀನು ಅದನ್ನು ಹೇಗೆ ಮಾಡಿದೆ ಎಂಬುದನ್ನು) ನನಗೆ ಹೇಳು. ೧೧. ಅದು ಶಾಸ್ತ್ರದಿಂದ ನಿಷಿದ್ಧವಾಗಿರು ವದರಿಂದ ನನಗೆ ರುಚಿಸುವದಿಲ್ಲ (= ಸರಿ ಎನಿಸುವದಿಲ್ಲ.) ೧೨. ಅವನು ತಾನೇ ಹೀಗೆ ಹೇಳುತ್ತಾನಷ್ಟೆ ? ಆದ್ದರಿಂದ ನಾನು ವಿಶ್ವಾಸವನ್ನು ಮಾಡುತ್ತೇನೆ (= ನಂಬುತ್ತೇನೆ). ೧೩. ಅವನಂತೂ ಸ್ವರಭಂಗವಾಗುವವರೆಗೆ (= ಗಂಟಲು ಒಡೆಯುವವರೆಗೂ) ಗಟ್ಟಿ ಯಾಗಿ ಕಿರುಚುತ್ತಾನೆ. ೧೪. ಅವನು ಹೇಗಾದರೆ ಬದುಕುವನೋ ಹಾಗೆ ಮಾಡು (= ಅವನು ಬದುಕುವ ಹಾಗೆ ಮಾಡು). ೧೫. ಕಳ್ಳನು ಯಾವಾಗ ಹೊಕ್ಕನೋ ಆಗಲೇ ಪೋಲೀಸಿನವನೂ ಬಂದನು. ೧೬. ಓದಲಿ, ಓದದೆ ಇರಲಿ, ಹೇಗೂ ಅವನು ಮೂರ್ಖನೇ. ೧೭. ಅದು ಶುದ್ಧವೇ ಸರಿ, ಆದರೂ ಲೋಕವಿರುದ್ಧವಾಗಿರುವದರಿಂದ ಮಾಡತಕ್ಕದ್ದಲ್ಲ. ೧೮. ಎಲ್ಲಿ ಬ್ರಾಹ್ಮಣರೇ ಇದ್ದರೂ ಅವರು ದುರಾಚಾರಿಗಳಾಗಿದ್ದರೆ ಅಲ್ಲಿಯೂ ಇರಬಾರದು. ೧೯. ನೀನು ಸತ್ಯವನ್ನೇ ಹೇಗೆ ಹೇಳುತ್ತೀಯೊ ಹಾಗೆ (= ಹೇಳುತ್ತಿರುವೆಯಾದ್ದರಿಂದ) ದೇವತೆಗಳು ಅವಶ್ಯವಾಗಿ ನಿನ್ನನ್ನು ಕಾಪಾಡಿಯಾರು. ೨೦. ಸತ್ಯವು ಹೇಗೆ ವಿಷ್ಣುಮಯವೋ, ಜಗತ್ತು ಹೇಗೆ ವಿಷ್ಣುಮಯವೋ, ಎಲ್ಲವೂ ಹೇಗೆ ವಿಷ್ಣುಮಯವೋ ಹಾಗೆ (= ವಿಷ್ಣುಮಯವಾಗಿರುವದು ನಿಜವಾದರೆ) ನನ್ನ ಪಾಪವು ನಾಶವಾಗಲಿ !

# ಪ ರಿ ಶಿ ಷ್ಟ

## ಈ ಪುಸ್ತಕದಲ್ಲಿರುವ ನಾಮಗಳ ರೂಪಾವಳಿ

ಸೂಚನೆ :- ಇಲ್ಲಿ ಶಬ್ದದ ಅರ್ಥವನ್ನು ಬರೆದಮೇಲೆ ಹಾಕಿರುವದು ಪುಟಸಂಖ್ಯೆ. ಆ ಪುಟದಲ್ಲಿ ಶಬ್ದದ ರೂಪಗಳನ್ನು ಕೊಟ್ಟಿರುತ್ತದೆ ಅಥವಾ ಅದರ ರೂಪವನ್ನು ಮಾಡಿಕೊಳ್ಳುವದಕ್ಕೆ ಸೂಚನೆಯನ್ನು ಕೊಟ್ಟಿದೆ. 'ವಿ' ಎಂದರೆ ವಿಶೇಷಣವೆಂದರ್ಥ. 'ಕೃ' ಎಂದರೆ ಕೃದಂತ.

### ೧. ಪುಲ್ಲಿಂಗಶಬ್ದಗಳು

ಇಕಾರಾಂತ मणि - ರತ್ನ ೮

ಇ '' अग्नि - ಅಗ್ನಿದೇವತೆ, ಬೆಂಕಿ ೧೧

ಉ '' वायु - ವಾಯುದೇವತೆ, ಗಾಳಿ ೧೧

ಋ '' हर्तृ - ಒಯ್ಯುವವ ೪೬

ಋ '' पितृ - ತಂದೆ ೪೭

ಓ '' गो - ಎತ್ತು ೫೦

ಜ '' भिषक् - ವೈದ್ಯ ೫೯

ತ '' मरुत् - ಗಾಳಿ, ದೇವತೆ ೫೧

ತ '' भवत् (ಕೃ.ವಿ.) - ಇರುವ ೫೪

ತ '' महत् - ದೊಡ್ಡ ೬೦

ದ '' सुहृद् - ಸ್ನೇಹಿತ ೫೯

ನ '' राजन् - ಅರಸ ೭೩

ನ '' आत्मन् - ಆತ್ಮ, ತಾನು ೭೩

ನ '' गुणिन् - ಗುಣವುಳ್ಳ ೭೭

ಶ '' विश् - ವೈಶ್ಯ ೧೨೭

ಶ '' कीदृश् - (ವಿ.) ಎಂಥ ೧೨೭

ಷ '' द्विष् - ಹಗೆ ೧೨೭

ಷ '' अचक्षुष् - (ವಿ.) - ಕಣ್ಣಿಲ್ಲದ ೧೨೯

ಸ '' चन्द्रमस् - ಚಂದ್ರ ೧೨೯

ಸ '' श्रेयस् - ಒಳ್ಳೆಯ ೧೩೨

ಸ '' विद्वस् - ಬಲ್ಲವ ೧೩೩

ಸ '' उपेयिवस् (ವಿ.) - ಹತ್ತಿರಕ್ಕೆ ಬಂದವ ೧೩೩

### ೨. ಸ್ತ್ರೀಲಿಂಗಶಬ್ದಗಳು

ಇಕಾರಾಂತ मति - ಅಭಿಪ್ರಾಯ ೮

ಉ '' धेनु - ಕರೆಯುವ ಹಸು ೧೫

ಊ '' वधू - ಮದುವಣಗಿತ್ತಿ, ಸೊಸೆ, ಹೆಂಡತಿ ೧೫

ಋ '' मातृ - ತಾಯಿ ೪೭

ಓ '' गो - ಹಸು ೫೦

ಔ '' नौ - ದೋಣಿ, ಹಡಗು ೫೦

ಚ '' वाच् - ಮಾತು ೬೦

ದ '' संपद् - ಸಂಪತ್ತು ೫೯

ಶ '' दिश् - ದಿಕ್ಕು ೧೨೭

### ೩. ನಪುಂಸಕಲಿಂಗಶಬ್ದಗಳು

ಇಕಾರಾಂತ वारि - ನೀರು ೧೩
ಇ " शुचि - ಶುದ್ಧ ೧೪
ಉ " मधु - ಜೇನುತುಪ್ಪ ೧೩
ಉ " मृदु - (ವಿ.) - ಮೆತ್ತನೆಯ ೧೪
ಋ " हर्तृ - (ವಿ.) - ಒಯ್ಯುವ ೪೬
ತ " भवत् (ವಿ.) - ಇರುವ ೫೬
ತ " धीमत् (ವಿ.) - ಬುದ್ಧಿಯುಳ್ಳ ೫೭
ನ " ब्रह्मन् (ನ.) - ಬ್ರಹ್ಮವು ೬೪
ನ " गुणिन् (ವಿ.) - ಗುಣವುಳ್ಳ ೭೭

### ೪. ಸರ್ವನಾಮಶಬ್ದಗಳು

ಅಕಾರಾಂತ स्व (ವಿ.) - ತಾನು, ತನ್ನ ೭೬
ದ " तद् (ವಿ.ಪು.) - ಅವನು, ಆ ೧೦೩
ದ " तद् (ವಿ, ನ,) - ಅದು, ಆ ೧೦೩
(ಇದರ ಸ್ತ್ರೀಲಿಂಗರೂಪ ೧ನೆಯ ಭಾಗ ಪಾ. ೪೬)
ದಕಾರಾಂತ एतद् (ವಿ.ಪು.) - ಇವನು, ಈ ೧೦೩
ದ" एतद् (ವಿ.ನ.) - ಇದು, ಈ ೧೦೩
(ಇದರ ಸ್ತ್ರೀಲಿಂಗ तत् ಶಬ್ದದಂತೆ ; ಮೊದಲು ಏಕಾರವಿದ್ದರಾಯಿತು)
ದಕಾರಾಂತ यत् (ವಿ.) - ಯಾವನೋ, ಯಾವ ೧೧೫
(ಇದು तत् ಶಬ್ದದಂತೆ ಎಲ್ಲಾ ಲಿಂಗಗಳಲ್ಲಿಯೂ ನಡೆಯುವದು. यः, या, यत् ಎಂಬಿವು ಪ್ರ.ಏ.)
ಮಕಾರಾಂತ किम् (ವಿ.) - ಯಾವನು? ಯಾವ ? ೯೬
(ಇದರ ರೂಪಗಳನ್ನು ೧ನೆಯ ಭಾಗದ ೩೧, ೪೬ನೆಯ ಪಾಠಗಳಲ್ಲಿ ಕೊಟ್ಟಿದೆ.)
किञ्चित्, किञ्चन, एक ಎಂಬ ಶಬ್ದಗಳನ್ನು ಪು. ೧೨೦ರಲ್ಲಿ ನೋಡಿ.)

### ಕೃದಂತಗಳೂ ಕೃದಂತಾವ್ಯಯಗಳೂ

೧. ವರ್ತಮಾನ ಕೃ. भवत् इच्छत् - ಮುಂತಾದ ಕೃದಂತಗಳ ಪುಲ್ಲಿಂಗರೂಪಗಳು ೫೩, ೫೪
೨. ವರ್ತಮಾನಕೃದಂತಗಳ ಸ್ತ್ರೀಲಿಂಗರೂಪಗಳು ೫೬
೩. " ನಪುಂಸಕಲಿಂಗಗಳ ರೂಪಗಳು ೫೭
೪. ವಿಧ್ಯಾದ್ಯರ್ಥಕ ಕೃದಂತಗಳು (ಕರ್ತವ್ಯ, ಕರಣೀಯ, ಕಾರ್ಯ ಇತ್ಯಾದಿ) ೧೨೩
೫. तुम् ಪ್ರತ್ಯಯಾಂತವಾದ ಕೃದಂತಗಳು (Infinitive) ೧೨೪
೬. त्वा, य - ಕೊನೆಯಲ್ಲಿರುವ ಭೂತಕೃದಂತಾವ್ಯಯಗಳು ೧೨೫
೭. ಕಾಲ, ಸ್ಥಾನ, ಪ್ರಕಾರ, ಕಾರಣ - ಈ ಅರ್ಥವನ್ನು ತಿಳಿಯಿಸುವ ಕ್ರಿಯಾ ವಿಶೇಷಣಾವ್ಯಯಗಳು (Adverbs) ೧೩೯

# ಧಾತುರೂಪಾವಳಿ

ಸೂಚನೆ :- ಕಂಸದಲ್ಲಿರುವದು ಗಣಸಂಖ್ಯೆ ; ಅರ್ಥದ ಮುಂದಿರುವದು ಪುಟಸಂಖ್ಯೆ.

## ವರ್ತಮಾನಕಾಲ

### ಪರಸ್ಮೈಪದಿಗಳು

वद् (೧) - ಹೇಳು ೧೯

विश् (೬) - ಹೊಗು ೨೧

तुद् (೬) - ನೋಯಿಸು ೨೧

दिश् (೬) - ತೋರಿಸು ೨೧

नम् (೧) - ನಮಸ್ಕರಿಸು ೨೩

बुध् (೧) - ತಿಳಿ ೨೭

कुप् (೪) - ಸಿಟ್ಟಾಗು ೨೭

स्फुट् (೬) - ಅರಳು ೨೭

क्षाल् (೧೦) - ತೊಳೆ ೨೭

श्रु (೧) - ಕೇಳು ೬೨

ग्रह् (೯) - ಹಿಡಿ ೬೩

ज्ञा (೯) - ತಿಳಿ, ಅರಿ ೬೩

### ಆತ್ಮನೇಪದಿಗಳು

स्पन्द् (೧) - ಅಲುಗಾಡು ೨೭

विद् (೪) - ಇರು ೨೭

जुष् (೬) - ಸೇವಿಸು ೨೭

अर्थ् (೧೦) - ಬೇಡು ೨೭

## ಅನದ್ಯತನಭೂತ

### ಪರಸ್ಮೈಪದಿ

वद् (೧) - ಹೇಳು ೬೫

तुष् (೪) - ಸಂತೋಷಪಡು, ತೃಪ್ತನಾಗು ೬೫

स्पृश् (೬) - ಮುಟ್ಟು ೬೬

प्री (೧೦) - ಸಂತೋಷಗೊಳಿಸು ೬೬

अस् (೨) - ಇರು ೧೧೧

### ಆತ್ಮನೇಪದಿ

कृ (೮) - ಮಾಡು ೧೧೧

मुद् (೧) - ಸುಖಪಡು ೬೫

जन् (೪) - ಹುಟ್ಟು ೬೫

भ्रस्ज् (೬) - ಹುರಿ ೬೬

चित् (೧೦) - ಅರಿ ೬೬

## ಕ್ರಿಯಾಪದಗಳ ಅರ್ಥಗಳು (Moods)

### ಭವಿಷ್ಯತ್ಕಾಲ

भू (೧) - ಇರು ೬೮

लुठ् (೬) - ಹೊರಳಾಡು ೬೮

तप् (೪) - ತಪಸ್ಸುಮಾಡು ೬೮

कथ् (೧೦) - ಹೇಳು ೬೮

## ಆಜ್ಞಾದ್ಯರ್ಥ (Imperative)

| | | | |
|---|---|---|---|
| पठ् (೧) - ಓದು | ೧೦೮ | अस् (೨) - ಇರು | ೧೧೦ |
| दृश् (೪) - ನೋಡು | ೧೦೮ | कृ (೮) - ಮಾಡು | ೧೧೦ |
| सृ (೧) - ಹರಿ | ೧೦೯ | मुद् (೧) - ಸುಖಪಡು | ೧೦೯ |
| नृत्य् (೪) - ಕುಣಿ | ೧೦೯ | युध् (೪) - ಯುದ್ಧಮಾಡು | ೧೦೯ |
| तुद् (೬) - ನೋಯಿಸು | ೧೦೯ | दिश् (೬) - ತೋರಿಸು | ೧೦೯ |
| कथ् (೧೦) - ಹೇಳು | ೧೦೯ | घुष् (೧೦) - ಸಾರಿಸು | ೧೦೯ |
| वद् (೧) - ಹೇಳು | ೧೧೩ | वन्द् (೧) - ವಂದಿಸು | ೧೧೩ |

## ವಿಧ್ಯಾದ್ಯರ್ಥ (Potential)

| | | | |
|---|---|---|---|
| वद् (೧) - ಹೇಳು | ೧೧೩ | कृ (೮) - ಮಾಡು | ೧೧೩ |
| अस् (२) - ಇರು | ೧೧೩ | वन्द् (೧) - ವಂದಿಸು | ೧೧೩ |

# ಕೆಲವು ಸಂಸ್ಕೃತಗ್ರಂಥಗಳು

ಸಂಸ್ಕೃತವನ್ನು ಯಾವ ಆಯಾಸವೂ ಇಲ್ಲದೆ ಸುಲಭವಾಗಿ ಕಲಿಯುವದಕ್ಕೆಂದು ಹೊಸ ಗ್ರಂಥಾವಳಿಯನ್ನು ಏರ್ಪಡಿಸಿದೆ. ಕನ್ನಡಭಾಷೆಯ ಪರಿಚಯವಿರುವವರಿಗೆಲ್ಲ ಇದು ಅತ್ಯುತ್ತಮಸಾಧನವಾಗಿರುತ್ತದೆ.

**ಸಂಸ್ಕೃತಭಾಷಾಭ್ಯಾಸ - ಒಂದನೆಯ ಭಾಗ** : ಇದರಲ್ಲಿ ಅಕ್ಷರಗಳ ಪರಿಚಯ, ಅ ಆ ಕಾರಾಂತನಾಮಗಳು, ವಿಶೇಷಣಗಳು, ತಕಾರಾಂತ ನಕಾರಾಂತ ನಾಮಗಳು, ಅಸ್ಮದ್, ಯುಷ್ಮದ್, ತತ್-ಸರ್ವ- ಈ ಸರ್ವನಾಮಗಳು, ಭೂತಕೃದಂತಗಳು - ಇವು ಮನ ದಟ್ಟಾಗುವಂತೆ ಸಣ್ಣಸಣ್ಣ ವಾಕ್ಯಗಳನ್ನು ಕನ್ನಡದ ಅರ್ಥದೊಡನೆ ಕೊಟ್ಟು, ಅದೇ ಪದಗಳಿರುವ ಬೇರೆಬೇರೆಯ ವಾಕ್ಯಗಳನ್ನು ಏರ್ಪಡಿಸುವದನ್ನು ಕಲಿಸಿರುತ್ತದೆ. ಕನ್ನಡ ವಾಕ್ಯಗಳ ಅಭ್ಯಾಸಗಳಿಗೆಲ್ಲ ಸಂಸ್ಕೃತದ ಅನುವಾದವು ಪುಸ್ತಕದಲ್ಲೇ ಸಿಕ್ಕುತ್ತಿದ್ದರೂ ವಿದ್ಯಾರ್ಥಿಗಳು ಸ್ವಬುದ್ಧಿಯನ್ನುಪಯೋಗಿಸುವದಕ್ಕೆ ಅವಕಾಶವನ್ನೂ ಕಲ್ಪಿಸಿದೆ.

**ಸಂಸ್ಕೃತಭಾಷಾಭ್ಯಾಸ - ಎರಡನೆಯ ಭಾಗ** : ಈಗ ತಮ್ಮ ಕೈಯಲ್ಲಿದೆ.

**ಸಂಸ್ಕೃತಭಾಷಾಭ್ಯಾಸ ಮೂರನೆಯ ಭಾಗ** : ಇದರಲ್ಲಿ ಪಂಚತಂತ್ರ-ಮಿತ್ರಭೇದದ ಕಥೆಯನ್ನು (ಉಪಕಥೆಗಳನ್ನು ಬಿಟ್ಟು) ಸಂಗ್ರಹಿಸಿಕೊಡಲಾಗಿದೆ. ಇದನ್ನು ಚಿಂತನೆ ಮಾಡುವ ಕ್ರಮವನ್ನು ತಿಳಿಸಿದೆ. ಹತ್ತು ಗಣಗಳ ಕೆಲವು ಮುಖ್ಯವಾದ ಧಾತುಗಳಿಗೆ ವರ್ತಮಾನ, ಅನದ್ಯತನ, ಆಜ್ಞಾರ್ಥ, ವಿಧ್ಯಾದ್ಯರ್ಥ, ಪರೋಕ್ಷಭೂತ, ಭವಿಷ್ಯತ್ಕಾಲ ಗಳು - ಇಷ್ಟು ರೂಪಗಳನ್ನು ಬಳಸುವ ಕ್ರಮಗಳನ್ನು ಕೊಟ್ಟಿದೆ. ಕೃದಂತಗಳ ಉಪಯೋಗವನ್ನು ತಿಳಿಸಿದೆ. ಮುಖ್ಯಸಮಾಸಗಳಿಗೆ ವಿಗ್ರಹವಾಕ್ಯಗಳನ್ನು ಹೇಳುವ ಕ್ರಮವನ್ನು ವಿವರಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

**ಅಧ್ಯಾತ್ಮಪ್ರಕಾಶಕಾರ್ಯಾಲಯ, ಹೊಳೆನರಸೀಪುರ - 573 211.**